ವಾರ್ಷಿಕ ವರದಿ
ANNUAL REPORT
2020-21

ಐವತ್ತಾರನೆಯ ವಾರ್ಷಿಕ ವರದಿ

(ಏಪ್ರಿಲ್ 1, 2020 ರಿಂದ ಮಾರ್ಚ್ 31, 2021)

FIFTY SIXTH ANNUAL REPORT

(April 1, 2020 to March 31, 2021)

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

UNIVERSITY OF AGRICULTURAL SCIENCES BANGALORE

2021

ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯ ಮಂತ್ರಿಗಳು ನವೀನ ಬೀಜ ಬಿತ್ತುವ ಕೂರಿಗೆಯನ್ನು ಅನಾವರಣಗೊಳಿಸುತ್ತಿರುವುದು

Hon'ble Chief Minister of Karnataka inaugurating the improved seed drill

ಮಾನ್ಯ ಕೃಷಿ ಸಚಿವರು; ಕುಲಪತಿಗಳು; ಆಡಳಿತ ಮಂಡಳಿ ಸದಸ್ಯರು ಮತ್ತು ಅಧಿಕಾರಿಗಳು ಕೃಷಿಮೇಳ–2020 ರ ಸಮಯದಲ್ಲಿ ಪ್ರಶಸ್ತಿ ಪುರಸ್ಕೃತರೊಂದಿಗೆ

Hon'ble Minister of Agriculture, GoK; Vice-Chancellor; Members of BoM and Officers with the awardees during Krishimela 2020

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

UNIVERSITY OF AGRICULTURAL SCIENCES BANGALORE

ಐವತ್ತಾರನೆಯ ವಾರ್ಷಿಕ ವರದಿ

(ಏಪ್ರಿಲ್ 1, 2020 ರಿಂದ ಮಾರ್ಚ್ 31, 2021)

FIFTY SIXTH ANNUAL REPORT

(April 1, 2020 to March 31, 2021)

2020-21

ಪ್ರಕಾಶಕರು, ಸಂಕಲನ, ಪ್ರಕ್ರಿಯೆ ಹಾಗೂ ಸಂಪಾದನೆ Published, Compiled, Processed & Edited by	**ಡಾ. ಕೆ. ಹೆಚ್. ನಾಗರಾಜ್** ಸಂಪಾದಕರು ಮತ್ತು ಪ್ರಾಧ್ಯಾಪಕರು (ಕೃಷಿ ವಿಸ್ತರಣೆ) ಸಂವಹನ ಕೇಂದ್ರ ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು	**Dr. K. H. Nagaraj** Editor & Professor of Agril. Extension Communication Centre UAS, GKVK, Bengaluru-560 065
ಅಕ್ಷರ ಜೋಡಣೆ, ವಿನ್ಯಾಸ Design, Layout & Typing	**ಶ್ರೀ ಎನ್. ರಾಮಕೃಷ್ಣ** **ಶ್ರೀ ಎಂ.ಎಸ್. ಗೋಪಾಲಕೃಷ್ಣ** **ಶ್ರೀ ಜೆ. ಚಂದ್ರಶೇಖರ್** ಸಂವಹನ ಕೇಂದ್ರ ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು	**Mr. N. Ramakrishna** **Mr. M.S. Gopala Krishna** **Mr. J. Chandra Shekar** Communication Centre UAS, GKVK, Bengaluru-560 065
ಮಾಹಿತಿ ಒದಗಿಸಿದವರು	ಶಿಕ್ಷಣ ನಿರ್ದೇಶಕರ ಕಛೇರಿ, ಕುಲಸಚಿವರ ಕಛೇರಿ, ಸಂಶೋಧನಾ ನಿರ್ದೇಶಕರ ಕಛೇರಿ, ವಿಸ್ತರಣಾ ನಿರ್ದೇಶಕರ ಕಛೇರಿ, ವಿವಿಧ ಕೃಷಿ ಮಹಾವಿದ್ಯಾಲಯಗಳ ಡೀನ್‌ರವರು, ಡೀನ್ (ವಿದ್ಯಾರ್ಥಿ ಕಲ್ಯಾಣ), ಡೀನ್ (ಸ್ನಾತಕೋತ್ತರ), ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ, ಆಡಳಿತಾಧಿಕಾರಿಗಳ ಕಛೇರಿ, ಆಸ್ತಿ ಅಧಿಕಾರಿಗಳ ಕಛೇರಿ, ಗ್ರಂಥಾಲಯ, ಸಂವಹನ ಕೇಂದ್ರ, ವಿಶ್ವವಿದ್ಯಾನಿಲಯದ ಪರೀಕ್ಷಾ ಘಟಕ, ಕನ್ನಡ ಅಧ್ಯಯನ ವಿಭಾಗ ಮತ್ತು ಪ್ರಾಯೋಜನೆ ಯೋಜನೆ ಮತ್ತು ಮೇಲುಸ್ತುವಾರಿ ಘಟಕ.	
Source of Information	Directorate of Education, Office of Registrar, Directorate of Research, Directorate of Extension, Deans of constituent Colleges, Dean of Student Welfare, Dean (PGS), Comptroller Office, Administrative Office, Estate Office, Library, Communication Centre, Examination Cell, Department of Kannada Studies and PPMC.	

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಮುನ್ನುಡಿ

ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯವು ಕಾಲೇಜು ರಚನೆಯನ್ನು ಹೊಂದಿದ್ದು, ಕೃಷಿ ಶಿಕ್ಷಣ ಮತ್ತು ಸಂಶೋಧನೆಯಲ್ಲಿ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವನ್ನು 6ನೇ ಜೂನ್ 1963 ರಂದು ಮೈಸೂರು (ಕರ್ನಾಟಕ) ಸರ್ಕಾರದ ಅಧಿನಿಯಮದ ಮೂಲಕ ತನ್ನ ಚಟುವಟಿಕೆಗಳಾದ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆಯನ್ನು ಕೈಗೊಳ್ಳಲು ಸ್ಥಾಪಿಸಲಾಯಿತು. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 2020–21ನೇ ಸಾಲಿನ (1ನೇ ಏಪ್ರಿಲ್, 2020 ರಿಂದ 31ನೇ ಮಾರ್ಚ್ 2021) ರವರೆಗಿನ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಕ್ಷೇತ್ರಗಳ ಸಾಧನೆಯನ್ನು ಹಾಗೂ ಸಾಮಾನ್ಯ ಆಡಳಿತವನ್ನು ಚಿತ್ರಿಸುವ 56ನೇ ವಾರ್ಷಿಕ ವರದಿಯನ್ನು ಮಂಡಿಸಲು ನನಗೆ ಸಂತೋಷವಾಗುತ್ತದೆ. ಕೃಷಿ ಮತ್ತು ಸಂಬಂಧಿತ ಉದ್ಯಮಗಳ ಕ್ಷೇತ್ರದಲ್ಲಿ ಹೊಸ ಮಾದರಿಗಳಿಗೆ ವಿಶ್ವವಿದ್ಯಾನಿಲಯವು ಬದ್ಧವಾಗಿದೆ, ನವೀನ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿ ಕೃಷಿ ಸಮುದಾಯಕ್ಕೆ ಸೇವೆ ಸಲ್ಲಿಸಲು ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುತ್ತದೆ. ವಿಶ್ವವಿದ್ಯಾನಿಲಯವು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅಸಾಮಾನ್ಯ ಬೆಂಬಲಕ್ಕೆ ಪಾತ್ರವಾಗಿದ್ದು, ಹಲವಾರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳೊಂದಿಗೆ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳಿಗೆ ಸಹಭಾಗಿತ್ವವನ್ನು ಹೊಂದಿದೆ.

ಬದಲಾಗುತ್ತಿರುವ ಕೃಷಿ ಸನ್ನಿವೇಶ ಮತ್ತು ಕೋವಿಡ್–19ರ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಮಾನವ ಸಂಪನ್ಮೂಲಗಳ ಅಗತ್ಯವನ್ನು ಪೂರೈಸಲು ವಿಶ್ವವಿದ್ಯಾಲಯವು ತನ್ನ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಿದೆ. ಕೃಷಿ, ರೇಷ್ಮೆಕೃಷಿ, ಆಹಾರ ವಿಜ್ಞಾನ–ತಂತ್ರಜ್ಞಾನ, ಕೃಷಿ–ವ್ಯವಹಾರ ನಿರ್ವಹಣೆ, ಕೃಷಿ–ಬಯೋಟೆಕ್ ಮತ್ತು ಕೃಷಿ ಎಂಜಿನಿಯರಿಂಗ್ ವಿಭಾಗಗಳಲ್ಲಿ ಆರು ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳನ್ನು ಒಳಗೊಂಡಂತೆ 22 ಸ್ನಾತಕೋತ್ತರ ಕಾರ್ಯಕ್ರಮಗಳು ಮತ್ತು 15 ಡಾಕ್ಟೊರಲ್ ಪದವಿ ಕಾರ್ಯಕ್ರಮಗಳನ್ನು ಐದು ಕ್ಯಾಂಪಸ್‌ಗಳಲ್ಲಿ ನೀಡಲಾಗುತ್ತಿದೆ. ವಿಶೇಷ ಕೌಶಲ್ಯ ಮತ್ತು ಪ್ರಾಯೋಗಿಕ ಅನುಭವವನ್ನು ಖಾತ್ರಿಪಡಿಸುವ ಕ್ರಿಯಾತ್ಮಕ ಪಠ್ಯಕ್ರಮಕ್ಕೆ ವಿಶ್ವವಿದ್ಯಾಲಯವು ಹೆಚ್ಚಿನ ಒತ್ತು ನೀಡುತ್ತದೆ. ಮಂಡ್ಯದ ಕೃಷಿ ಕಾಲೇಜಿನಲ್ಲಿ ಕನ್ನಡ ಮಾಧ್ಯಮದಲ್ಲಿ ಸೆಮಿಸ್ಟರ್ ಪದ್ಧತಿಯಡಿಯಲ್ಲಿ ಎರಡು ವರ್ಷದ ಕೃಷಿ ಡಿಪ್ಲೊಮಾವನ್ನು ಸಹ ನೀಡಲಾಗುತ್ತದೆ. ಇದಲ್ಲದೆ, ವಿಸ್ತರಣಾ ನಿರ್ದೇಶನಾಲಯವು ದೂರ ಶಿಕ್ಷಣ ಕಾರ್ಯಕ್ರಮದಲ್ಲಿ ವಿವಿಧ ಡಿಪ್ಲೊಮಾ ಮತ್ತು ಪ್ರಮಾಣಪತ್ರ ಕೋರ್ಸ್‌ಗಳನ್ನು ನೀಡುತ್ತದೆ. ಜಿಕೆವಿಕೆ ಯಲ್ಲಿ ವಿದ್ಯಾರ್ಥಿ ನಿಯೋಜನೆ ಕೋಶವು ಪದವಿ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾದ ಅಂತರರಾಷ್ಟ್ರೀಯ ಕೇಂದ್ರವು ಎಲ್ಲಾ ಅಂತರರಾಷ್ಟ್ರೀಯ ಚಟುವಟಿಕೆಗಳನ್ನು ಸಂಘಟಿಸುತ್ತದೆ ಮತ್ತು ದೇಶದ ಹೊರಗಿನ ಶೈಕ್ಷಣಿಕ ಸಂವಹನಗಳನ್ನು ಸುಗಮಗೊಳಿಸುತ್ತದೆ. ವಿಶ್ವವಿದ್ಯಾನಿಲಯವು ಐಸಿಎಆರ್–ಎಸ್‌ಸಿ–ಎಸ್‌ಪಿ ಅಡಿಯಲ್ಲಿ ಕೌಶಲ್ಯ ಅಭಿವೃದ್ಧಿ ಕೇಂದ್ರವನ್ನು (ಎಸ್‌ಡಿಸಿ) ಸ್ಥಾಪಿಸಿದೆ. ಇದರಲ್ಲಿ ಪದವೀಧರರನ್ನು ಮೂಲಭೂತ ಮತ್ತು ಸಮಕಾಲೀನ ತಂತ್ರಜ್ಞಾನಗಳ ಬಹು ಕೌಶಲ್ಯಗಳೊಂದಿಗೆ ಅಭಿವೃದ್ಧಿಪಡಿಸಲಾಗುತ್ತಿದೆ. ಕೋವಿಡ್–19 ಸಾಂಕ್ರಾಮಿಕ ರೋಗದ ಲಾಕ್‌ಡೌನ್ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ಪ್ರಯತ್ನಗಳು ಅನುಕರಣೀಯವಾಗಿವೆ. ಹೊಸ ಪ್ರವೇಶಗಳ ಮೂಲಕ ಗ್ರಂಥಾಲಯದ ಸೌಲಭ್ಯಗಳನ್ನು ಬಲಪಡಿಸಿ ನೆಟ್‌ವರ್ಕ್ ಮತ್ತು ವೈ–ಫೈ ಸೌಲಭ್ಯಗಳ ಮೂಲಕ ಇ–ಕಲಿಕೆಯನ್ನು ಸೇರಿಸಲಾಗಿದೆ. ಪಿಜಿ ಮತ್ತು ಬೋಧಕ ವರ್ಗದ ಸಂಶೋಧನೆಯ ಮೂಲಭೂತ ಮತ್ತು ಅನ್ವಯಿಕ ಸಂಶೋಧನೆಗಳಿಗೆ ಅನುಕೂಲವಾಗುವಂತೆ ಸುಧಾರಿತ ಶಿಕ್ಷಣ ಬೆಂಬಲದ ಆಧುನಿಕ ವರ್ಚುವಲ್ ತರಗತಿ ಕೊಠಡಿಗಳು ಮತ್ತು ಸುಸಜ್ಜಿತ ಪ್ರಯೋಗಾಲಯಗಳನ್ನು ವಿಶ್ವವಿದ್ಯಾಲಯ ಹೊಂದಿದೆ.

ಹವಾಮಾನ ಆಧಾರಿತ, ಕಡಿಮೆ ವೆಚ್ಚ, ಹೆಚ್ಚು ಪರಿಣಾಮಕಾರಿ, ಸುಸ್ಥಿರ ಮತ್ತು ಪರಿಸರ ಸ್ನೇಹಿ ಬೆಳೆ ಉತ್ಪಾದನಾ ತಂತ್ರಜ್ಞಾನಗಳನ್ನು ವಿಶ್ವವಿದ್ಯಾನಿಲಯವು ಅಭಿವೃದ್ಧಿಪಡಿಸುತ್ತಿದೆ. ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ರಾಜ್ಯದ 10 ದಕ್ಷಿಣ ಜಿಲ್ಲೆಗಳಲ್ಲಿರುವ 13 ಕೃಷಿ ಸಂಶೋಧನಾ ಕೇಂದ್ರಗಳಲ್ಲಿ ಸಂಶೋಧನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಆಹಾರ ಸುರಕ್ಷತೆ, ನಿಖರತೆ ಮತ್ತು ಸುಸ್ಥಿರತೆಗೋಸ್ಕರ, ವಿಶ್ವವಿದ್ಯಾನಿಲಯವು ಕೃಷಿಯಲ್ಲಿ ಜೈವಿಕ ತಂತ್ರಜ್ಞಾನ ಸಂಶೋಧನೆ, ಬೆಳೆ ವ್ಯವಸ್ಥೆ ಸಂಶೋಧನೆ, ಕೃಷಿ ವ್ಯವಸ್ಥೆಗಳ ವಿಧಾನ, ಸಂಪನ್ಮೂಲಗಳ ನಿರ್ವಹಣೆ, ವಿವಿಧ ಬೆಳೆಗಳು ಮತ್ತು ಸಂಪನ್ಮೂಲಗಳ ಸಾಮರ್ಥ್ಯವನ್ನು ಸುಧಾರಿಸುವತ್ತ ತನ್ನ ಸಂಶೋಧನಾ ಕಾರ್ಯಕ್ರಮಗಳನ್ನು ಕೇಂದ್ರೀಕರಿಸುತ್ತಿದೆ. ವಿಶ್ವವಿದ್ಯಾನಿಲಯವು ಮುಂಚೂಣಿ ಪ್ರಾತ್ಯಕ್ಷಿಕೆ, ಕ್ಷೇತ್ರ ಪರೀಕ್ಷೆ, ಚರ್ಚಾ ಸಭೆಗಳು, ರೈತರ ಕ್ಷೇತ್ರ ಶಾಲೆ, ಕೃಷಿಮೇಳ ಹಾಗೂ ಕ್ಷೇತ್ರೋತ್ಸವಗಳಂತಹ ಹಲವಾರು ವಿಸ್ತರಣಾ ಚಟುವಟಿಕೆಗಳ ಜೊತೆಗೆ ಕೃಷಿ ಪರಿಕರಗಳನ್ನು ಮತ್ತು ಕೃಷಿ ಪ್ರಕಟಣೆಗಳನ್ನು ವಿತರಿಸಿ ತನ್ನ ಹಲವಾರು ಚಟುವಟಿಕೆಗಳೊಂದಿಗೆ ರೈತ ಸಮುದಾಯದ ಅವಶ್ಯಕತೆಗಳನ್ನು ಪೂರೈಸುತ್ತಿದೆ. ವಿಶ್ವವಿದ್ಯಾನಿಲಯವು ಅಭಿವೃದ್ಧಿ ಇಲಾಖೆಗಳ ವಿಸ್ತರಣಾ ಚಟುವಟಿಕೆಗಳಿಗೆ ತನ್ನ ಏಳು ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ ಎರಡು ವಿಸ್ತರಣಾ ಶಿಕ್ಷಣ ಘಟಕಗಳ ಮೂಲಕ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ. ವಿಶ್ವವಿದ್ಯಾನಿಲಯವು ಕರ್ನಾಟಕ ಸರ್ಕಾರ, ಭಾರತೀಯ ಕೃಷಿ ಸಂಶೋಧನಾ ಮಂಡಳಿ ಮತ್ತು ಇತರ ಸಹಯೋಜಕರಿಗೆ ಅವರು ನೀಡುವ ಆರ್ಥಿಕ ಬೆಂಬಲಕ್ಕಾಗಿ ಕೃತಜ್ಞವಾಗಿದೆ. ಆಡಳಿತ ನಿರ್ವಹಣಾ ಮಂಡಳಿಯ ಸದಸ್ಯರ, ಶೈಕ್ಷಣಿಕ ಪರಿಷತ್, ಸಂಶೋಧನಾ ಪರಿಷತ್, ವಿಸ್ತರಣಾ ಶಿಕ್ಷಣ ಪರಿಷತ್, ಆರ್ಥಿಕ ಸಮಿತಿಗಳು ಮತ್ತು ಅಧ್ಯಯನ ಮಂಡಳಿಗಳಿಗೆ (ಸ್ನಾತಕ ಮತ್ತು ಸ್ನಾತಕೋತ್ತರ) ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳಲ್ಲಿ ಅವರು ನೀಡಿರುವ ಮಾರ್ಗದರ್ಶನ ಮತ್ತು ಬೆಂಬಲವನ್ನೂ ಸಹ ಈ ಸಮಯದಲ್ಲಿ ಸ್ಮರಿಸಲಾಗುತ್ತಿದೆ. ರಾಜ್ಯದ ಹಾಗೂ ತನ್ನ ಮೂಲಕ ದೇಶದ ರೈತ ಸಮುದಾಯಕ್ಕೆ ತನ್ನ ಆಧ್ಯಾದೇಶ ಮತ್ತು ಗುರಿಯನ್ನು ತಲುಪಿ ಸೇವೆ ಸಲ್ಲಿಸಲು ವಿಶ್ವವಿದ್ಯಾನಿಲಯದ ಬೆನ್ನೆಲುಬಾಗಿ ಅದರ ಅಧಿಕಾರಿಗಳ ಬೆಂಬಲ, ಸಿಬ್ಬಂದಿ ಮತ್ತು ಕೃಷಿ ಕಾರ್ಮಿಕರಿರುವುದು ನನಗೆ ಹೆಮ್ಮೆಯ ವಿಷಯ. ವಾರ್ಷಿಕ ವರದಿಯನ್ನು ನಿಖರವಾಗಿ ಸಂಪಾದಿಸಿದ ವಿಶ್ವವಿದ್ಯಾನಿಲಯದ ಸಂವಹನ ಕೇಂದ್ರವನ್ನು ನಾನು ಅಭಿನಂದಿಸುತ್ತೇನೆ.

ಜೂನ್ 2021
ಬೆಂಗಳೂರು

(ಎಸ್. ರಾಜೇಂದ್ರ ಪ್ರಸಾದ್)
ಕುಲಪತಿಗಳು

UNIVERSITY OF AGRICULTURAL SCIENCES BANGALORE

FOREWORD

University of Agricultural Sciences, Bangalore (UAS-B) having collegiate structure is one of the prominent Universities in agricultural education and research. UAS-B was established through an Act of the Government of Mysore (Karnataka) on 6th June 1963 with the objectives to carry out the mandated activities of Teaching, Research and Extension in the areas of agriculture and allied Sciences. I am pleased to present the 56th Annual Report of the University of Agricultural Sciences, Bangalore which illustrates the University commitment to advancing excellence in Education, Research and Extension apart from general Administration from 1st April 2020 to 31st March 2021. University is dyed-in-the-wool to newer paradigms in the field of agricultural and allied enterprises, develop innovative technologies and generate accomplished human resources to serve the farming community. The University receives incomparable backing from State and Central Governments and has reputable collaborations both at National and International levels in all the three wings of the University.

UAS-B has drawn-out its academic programs to meet the requirement of human resources in the face of changing agricultural scenario and the Covid-19 Pandamic. A range of new technology oriented six Under-Graduate Degree programs in Agriculture, Sericulture, Food Science & Technology, Agri-Business Management, Agri-Biotech and Agricultural Engineering including 22 Postgraduate programs & 15 Doctoral degree programs are being offered across five campuses. University places a great emphasis on dynamic curriculum that ensures specialized skills and practical experience. Two-year diploma in Agriculture is also offered under semester system in Kannada medium at College of Agriculture, Mandya. Further, the Directorate of Extension offers various Diploma and Certificate Courses on Distance Education mode. The student placement cell functioning at GKVK provides career guidance and job opportunities to graduating students. The International Centre established in the University coordinates all the international activities and facilitates academic interactions outside the Country. The University has established a Skill Development Center (SDC) under ICAR- SC-SP wherein the Graduates are developed with multi skills of fundamental and contemporary technologies. University's efforts during the lockdown period of Covid-19 Pandemic are exemplary. The library facilities were reinforced through new accessions, adding e-learning through network and wi-fi facilities. UAS-B is equipped with modern virtual classrooms of advanced pedagogic support and well equipped laboratories including central instrumentation facilities to facilitate both fundamental and applied research of PG and faculty research.

Climate-smart, low cost, highly efficient, sustainable and environment friendly crop production technologies are being developed by the University. Research programmes are planned in 13 Agricultural Research Stations situated in 10 Southern Districts of the state under the jurisdiction of UAS-B. The research programmes are oriented towards improving the potentials of various crops, related inputs and resources in agriculture, besides focusing on Bio-technology research, cropping system research, farming systems approach, management of resources, etc., ensuring food security through precision and sustainable agriculture practices. The University is catering to the needs of farming community by undertaking various extension activities *viz.,* front line demonstration, on-farm testings, discussion meetings, farmers field schools, capacity building, krishimela, field days etc., besides supplying agricultural inputs and publications. The University supplements and complements the extension activities of the Developmental Departments through Krishi Vigyan Kendras and Extension Education Units of the University.

The University punctually acknowledges the support and co-operation of the Government of Karnataka, Indian Council of Agricultural Research and alternative Collaborators for their financial backing. The timely guidance and support given by the Members of the Board of Management, the Academic Council, the Research Council, the Extension Education Council, Finance Committee and the Board of Studies (Undergraduate / Postgraduate) in implementing teaching, research and extension programmes is duly acknowledged. The University is competently supported by the Officers, Supporting Staff and Karmikas to foster its mandates to serve the farming community of the State in particular and the Country at large. I congratulate the Communication Centre of the University for having compiled and edited the Annual Report of the University.

June, 2021
Bengaluru

(S. Rajendra Prasad)
Vice-Chancellor

ವಿಷಯಾನುಕ್ರಮ / CONTENTS

ಅಧ್ಯಾಯ ಸಂಖ್ಯೆ/ Chapter number		ಶೀರ್ಷಿಕೆ ಮತ್ತು ಉಪ ಶೀರ್ಷಿಕೆ Title and sub-title		ಪುಟ ಸಂಖ್ಯೆ Page no.
		ಕಾರ್ಯಕಾರಿ ವರದಿ / Executive Summary	...	i-vii
ಅಧ್ಯಾಯ I Chapter I		**ವಿಶ್ವವಿದ್ಯಾನಿಲಯದ ಆಡಳಿತ / University Administration**		
	1.1	ವಿಶ್ವವಿದ್ಯಾನಿಲಯದ ಸ್ಥಾಪನೆ ಮತ್ತು ನಿಗಮನ Establishment and Incorporation of the Universities	...	2
	1.2	ಕಾರ್ಯವ್ಯಾಪ್ತಿ ಪ್ರದೇಶ Jurisdiction	...	2
	1.3	ವಿಶ್ವವಿದ್ಯಾನಿಲಯದ ಧ್ಯೇಯೋದ್ದೇಶಗಳು Objectives of the University	...	2
	1.4	ವಿಶ್ವವಿದ್ಯಾನಿಲಯದ ಪ್ರಾಧಿಕಾರ Authorities of the University	...	2
	1.5	ಆಡಳಿತ ನಿರ್ವಹಣಾ ಮಂಡಳಿ ಮತ್ತು ಅದರ ಸಂರಚನೆ The Board of Management and its Constitution	...	4
	1.6	ವಿಶ್ವವಿದ್ಯಾನಿಲಯದ ಅಧಿಕಾರಿಗಳು Officers of the University	...	6
	1.7	ವಿಶ್ವವಿದ್ಯಾನಿಲಯದ ಗುರಿ, ಧ್ಯೇಯೋದ್ದೇಶ ಮತ್ತು ಆಧ್ಯಾದೇಶ University Vision, Mission and Mandates	...	8
	1.8	ವಿಶ್ವವಿದ್ಯಾನಿಲಯದ ಆಡಳಿತ University Governance	...	10
	1.9	ಮಾಹೆಯಾನ ಕುಲಪತಿಗಳು ಭಾಗವಹಿಸಿದ ಪ್ರಮುಖ ಕಾರ್ಯಕ್ರಮಗಳು ಹಾಗೂ ಸಭೆಗಳು Month-wise important Programmes and Meetings participated by the Vice-Chancellor	...	12
	1.10	ವಿಶ್ವವಿದ್ಯಾನಿಲಯ ಗಳಿಸಿದ ಪ್ರಶಸ್ತಿಗಳು ಮತ್ತು ಮಾನ್ಯತೆಗಳು Awards and Recognitions achieved by the University	...	24
	1.11	ವಿಶ್ವವಿದ್ಯಾನಿಲಯದ ಅಧಿಕಾರಿಗಳ ಸಭೆಗಳು Meetings of the Authorities of the University	...	24
ಅಧ್ಯಾಯ II Chapter II		**ಶೈಕ್ಷಣಿಕ ಆಡಳಿತ / Academic Administration**		
	2.1	ಶೈಕ್ಷಣಿಕ ಕಾರ್ಯಕ್ರಮಗಳು Academic Programmes	...	26
	2.2	ಆಡಳಿತ ನಿರ್ವಹಣಾ ವ್ಯವಸ್ಥೆ ಮತ್ತು ಕಾರ್ಯಗಳು Administrative Management System and Functions	...	26
	2.3	ಕೈಗೊಂಡ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು Functions and Activities Performed	...	29
	2.3.1	ಸ್ನಾತಕ ಪದವಿ ಕಾರ್ಯಕ್ರಮಗಳಿಗೆ ಪ್ರವೇಶಾತಿ Admission to Bachelor Degree Programmes	...	29
	2.3.2	ಸ್ನಾತಕೋತ್ತರ ಮತ್ತು ಡಾಕ್ಟೊರಲ್ ಪದವಿ ಕಾರ್ಯಕ್ರಮಗಳಿಗೆ ಪ್ರವೇಶಾತಿ Admission to Masters and Doctoral Degree Programmes	...	29
	2.3.3	ಡಿಪ್ಲೊಮಾ ಕಾರ್ಯಕ್ರಮಗಳಿಗೆ ಪ್ರವೇಶಾತಿ Admission to Diploma Programmes	...	30
	2.3.4	ಪ್ರವೇಶ ಸಮಿತಿ Admission Committee	...	30
	2.3.5	ಪ್ರವೇಶ ಸಾಧ್ಯ ಸಂಖ್ಯೆ, ಪ್ರವೇಶ ಪಡೆದ ವಿದ್ಯಾರ್ಥಿಗಳು ಮತ್ತು ಹಾಜರಾಗಿದ್ದ ವಿದ್ಯಾರ್ಥಿಗಳು Admission Intake, Admissions made and Students on Roll	...	31

ಅಧ್ಯಾಯ ಸಂಖ್ಯೆ/ Chapter number	ಶೀರ್ಷಿಕೆ ಮತ್ತು ಉಪ ಶೀರ್ಷಿಕೆ Title and sub-title		ಪುಟ ಸಂಖ್ಯೆ Page no.
2.3.5.1	ಸ್ನಾತಕ ಪದವಿಗಳು Bachelor Degrees	...	31
2.3.5.2	ಸ್ನಾತಕೋತ್ತರ ಪದವಿಗಳು Masters Degrees	...	32
2.3.5.3	ಕೃಷಿಯಲ್ಲಿ ಮತ್ತು ರೇಷ್ಮೆಕೃಷಿಯಲ್ಲಿ ಡಿಪ್ಲೊಮಾ Diploma in Agriculture & Sericulture	...	32
2.3.5.4	ಸ್ನಾತಕ, ಸ್ನಾತಕೋತ್ತರ ಮತ್ತು ಡಾಕ್ಟೊರಲ್ ಪದವಿಗಳಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳ ಸಂಖ್ಯೆ Number of Students passed out in Bachelors', Masters' and Doctoral degree	...	36
2.3.6	ನೀಡಲಾಗುತ್ತಿರುವ ಕೋರ್ಸ್‌ಗಳು, ಬೋಧಕ ಸಿಬ್ಬಂದಿಯ ಸಂಖ್ಯೆ ಮತ್ತು ನಡೆಸಿದ ಪರೀಕ್ಷೆಗಳು Courses offered, faculty strength and examination conducted	...	36
2.3.7	ವಿದ್ಯಾರ್ಥಿ 'ರೆಡಿ' (ಗ್ರಾಮೀಣ ಉದ್ಯಮಶೀಲತೆ ಅರಿವು ಅಭಿವೃದ್ಧಿ ಯೋಜನೆ) ಕಾರ್ಯಕ್ರಮದ ಅಳವಡಿಕೆ ಮತ್ತು ಅನುಷ್ಠಾನ Adoption and Implementation of Student Rural Entrepreneurship Agricultural Develoment yojana (READY) programme	...	36
2.3.8	ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದ ಅನುಷ್ಠಾನ Implementation of Rural Agricultural Work Experince (RAWEP) Programme	...	37
2.4	ಪ್ರಾಯೋಗಿಕ ತರಬೇತಿ Hands on Training	...	38
2.5	ಬಾಹ್ಯ ಪರೀಕ್ಷೆಗಳು, ಮೌಲ್ಯಮಾಪನ ನಡೆಸುವಿಕೆ ಮತ್ತು ಫಲಿತಾಂಶಗಳ ಘೋಷಣೆ Conduct of External Examination, Evaluation and Declaration of Results	...	56
2.6	ಕನ್ನಡ ಅಧ್ಯಯನ ವಿಭಾಗ ಮತ್ತು ಸಂವಹನ ಕೇಂದ್ರ Department of Kannada Studies and Communication Centre	...	60
2.7	ವಿದ್ಯಾರ್ಥಿಗಳಿಗೆ ಕ್ರೀಡೆ, ಆಟೋಟ ಮತ್ತು ಪಠ್ಯೇತರ ಚಟುವಟಿಕೆಗಳು Sports, Games and Co-curricular Activities for Students	...	62
2.8	ಉದ್ಯೋಗ ಕೋಶ Placement Cell	...	62
2.9	ರಾಷ್ಟ್ರೀಯ ಸೇವಾ ಯೋಜನೆ National Service Scheme	...	63
2.10	ಭಾರತೀಯ ರೆಡ್‌ಕ್ರಾಸ್ ಸೊಸೈಟಿ Indian Youth Red Cross Society	...	63
2.11	ವೈದ್ಯಕೀಯ ಸೇವೆ ನೀಡುವಿಕೆ Medical Services Provided	...	64
2.12	ಅಂತರಾಷ್ಟ್ರೀಯ ಕೇಂದ್ರ International Centre	...	65
2.13	ಗ್ರಂಥಾಲಯ ಸಂಪನ್ಮೂಲಗಳು ಮತ್ತು ಮಾಹಿತಿ ವ್ಯವಸ್ಥೆ Library Resources and Information System	...	66
2.14	ಕೌಶಲ್ಯ ಅಭಿವೃದ್ಧಿ ಕೇಂದ್ರ Skill Development Centre	...	75
2.15	ಕೇಂದ್ರ ಸಲಕರಣೆ ಸೌಲಭ್ಯ Central Instrumentation Facility	...	76

ಅಧ್ಯಾಯ ಸಂಖ್ಯೆ/ Chapter number		ಶೀರ್ಷಿಕೆ ಮತ್ತು ಉಪ ಶೀರ್ಷಿಕೆ Title and sub-title		ಪುಟ ಸಂಖ್ಯೆ Page no.
ಅಧ್ಯಾಯ III Chapter III		**ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿ / Agricultural Research and Development**		
	3.1	ಕೃಷಿ ಸಂಶೋಧನಾ ಕೇಂದ್ರಗಳು ಮತ್ತು ಕೃಷಿ–ಹವಾಮಾನ ವಲಯಗಳು Agricultural Research Stations and Agro-Climatic Zones	...	77
	3.2	ಕಾರ್ಯಾಚರಣೆಯಲ್ಲಿರುವ ಪ್ರಾಯೋಜನೆಗಳು Projects in Operation	...	78
	3.3	ಇತರೆ ಸಂಸ್ಥೆಗಳ ಜೊತೆ ಮಾಡಿಕೊಂಡ ಒಡಂಬಡಿಕೆಗಳು / ಒಪ್ಪಂದಗಳು / MoUs Signed with other Institutions	...	79
	3.4	ಪರೀಕ್ಷಿಸಿದ ಹೊಸ ರಾಸಾಯನಿಕಗಳು/ತಳಿಗಳು/ಅಣುಗಳು New Chemicals/Varieties/Moleculars tested	...	79
	3.5	ಪ್ರಮುಖ ಸಂಶೋಧನೆಗಳು/Break through Research	...	79
	3.6	ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿದ ಹೊಸ ತಂತ್ರಜ್ಞಾನಗಳು New Technologies Developed and Released	...	81
	3.7	ಪ್ರಗತಿಯಲ್ಲಿರುವ ಮುಖ್ಯ ತಾಂತ್ರಿಕತೆಗಳು ಸಂಶೋಧನೆಗಳು/ Research in Progress	...	94
	3.8	ಭಾರತೀಯ ಕೃಷಿ ಅನುಸಂಧಾನ ಪರಿಷತ್–ಉನ್ನತ ಕೃಷಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಕೇಂದ್ರ Indian Council for Agriculture Research-Centre for Advanced Agricultural Science & Technology (CAAST)	...	132
ಅಧ್ಯಾಯ IV Chapter IV		**ಕೃಷಿ ವಿಸ್ತರಣಾ ಶಿಕ್ಷಣ ಮತ್ತು ಸೇವೆಗಳು / Agricultural Extension Education & Services**		
	4.1	ಆಧ್ಯಾದೇಶಗಳು/Mandates	...	137
	4.2	ಉದ್ದೇಶಗಳು/Objectives	...	137
	4.3	ಕಾರ್ಯಚಟುವಟಿಕೆಗಳು/Functions	...	137
	4.4	ವಿಸ್ತರಣಾ ನಿರ್ದೇಶನಾಲಯದ ಘಟಕಗಳು ಮತ್ತು ಅವುಗಳ ಚಟುವಟಿಕೆಗಳು Units of Directorate of Extension and their Activities	...	138
	4.4.1	ಸಿಬ್ಬಂದಿ ತರಬೇತಿ ಘಟಕ/Staff Training Unit (STU)	...	138
	4.4.2	ರಾಜ್ಯ ಕೃಷಿ ವಿಸ್ತರಣಾ ನಿರ್ವಹಣೆ ಹಾಗೂ ವಿಸ್ತರಣಾ ತರಬೇತಿ ಸಂಸ್ಥೆ (ಸಮೇತಿ)/ State Agricultural Management and Extension Training Institute (SAMETI)	...	139
	4.4.3	ಬೇಕರಿ ತರಬೇತಿ ಘಟಕ/Bakery Training Unit (BTU)	...	139
	4.4.4	ರೈತ ತರಬೇತಿ ಸಂಸ್ಥೆ/Farmers Training Institute (FTI)	...	140
	4.4.5	ಕೃಷಿ ಮಾಹಿತಿ ಘಟಕ /Farm Information Unit (FIU)	...	141
	4.4.6	ದೂರ ಶಿಕ್ಷಣ ಘಟಕ/Distance Education Unit (DEU)	...	142
	4.4.7	ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ/Agricultural Technology Information Centre	...	142
	4.4.8	ಕೃಷಿ ವಿಜ್ಞಾನ ವಸ್ತುಸಂಗ್ರಹಾಲಯ/Agricultural Sciences Museum (ASM)	...	143
	4.4.9	ವಿಸ್ತರಣಾ ಶಿಕ್ಷಣ ಘಟಕ/Extension Education Units (EEUs)	...	144
	4.4.10	ರಾಷ್ಟ್ರೀಯ ಕೃಷಿ ವಿಸ್ತರಣಾ ಪ್ರಾಯೋಜನೆ/National Agricultural Extension Project	...	148
	4.4.11	ಕೃಷಿ ವಿಜ್ಞಾನ ಕೇಂದ್ರಗಳು/Krishi Vigyna Kendras (KVKs)	...	151
	4.4.12	ಕೃಷಿ ಮೇಳ/Krishi Mela	...	163
	4.4.13	ಮಹತ್ವದ ಸಾಧನೆಗಳು/Significant Achievements	...	167

ಅಧ್ಯಾಯ ಸಂಖ್ಯೆ/ Chapter number	ಶೀರ್ಷಿಕೆ ಮತ್ತು ಉಪ ಶೀರ್ಷಿಕೆ Title and sub-title		ಪುಟ ಸಂಖ್ಯೆ Page no.
ಅಧ್ಯಾಯ V Chapter V	**ಆಚರಣೆಗಳು, ಸಾಮರ್ಥ್ಯವರ್ಧನಾ ಚಟುವಟಿಕೆಗಳು, ಪಡೆದ ಪ್ರಶಸ್ತಿ ಮತ್ತು ಮನ್ನಣೆಗಳು ಹಾಗೂ ಪ್ರಕಟಣೆಗಳು Events organised, Capacity Building programmes, Awards & Recognitions and Publications**		
	5.1	ಆಚರಿಸಿದ ರಾಜ್ಯ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ದಿನ/ಆಚರಣೆಗಳು Celebration of State, National and International Days/Events & Programmes ...	170
	5.2	ಆಯೋಜಿಸಿದ ಸಮಾವೇಶ/ವಿಚಾರ ಸಂಕಿರ್ಣ/ಕಾರ್ಯಾಗಾರ/ತರಬೇತಿ ಕಾರ್ಯಕ್ರಮಗಳು Conferences/Seminars/Workshops/Training programmes organsied ..	173
	5.3	ಭಾಗವಹಿಸಿದ ಸಮಾವೇಶ/ವಿಚಾರ ಸಂಕಿರಣ/ಕಾರ್ಯಾಗಾರ/ಇತರೆ ಚಟುವಟಿಕೆಗಳು (ವಿದೇಶ) Participation in Conferences/Seminars/Workshops/Other activities (Abroad) ...	187
	5.4	ವಿಚಾರ ಸಂಕಿರಣ/ಸಮಾವೇಶಗಳಲ್ಲಿ ಪ್ರಬಂಧ ಮಂಡನೆ Presentation of Paper in Seminar/Conference ...	190
	5.5	ಅಧ್ಯಾಪಕರುಗಳಿಗೆ ದೊರೆತ ಪ್ರಶಸ್ತಿ ಹಾಗೂ ಮನ್ನಣೆಗಳು Recognitions/Awards Conferred on Faculty ...	194
	5.6	ಸರ್ಕಾರದ ಮತ್ತು ಇತರೆ ಸಂಸ್ಥೆಗಳಿಗೆ ಅಧ್ಯಾಪಕರ ನಾಮ ನಿರ್ದೇಶನಗಳು Nominations of Teachers for different assignment in Government and other Agencies ...	198
	5.7	ಆಯೋಜಿಸಿದ ಇತರೆ ಪ್ರಮುಖ ಕಾರ್ಯಕ್ರಮಗಳು Other important events organised ...	202
	5.8	ಆಯೋಜಿಸಿದ / ಭಾಗವಹಿಸಿದ ಇತರ ಕಾರ್ಯಕ್ರಮಗಳು, ಕೈಗೊಂಡ ವಿಸ್ತರಣಾ ಚಟುವಟಿಕೆಗಳು ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಯ ಪ್ರಕಟಣೆಗಳು Abstract of different programmes organised/ participated, extension activities carried out and number of publications brought out by the faculty of UAS-B ...	204
	5.9	ಬೋಧಕ ಸಿಬ್ಬಂದಿಯು ಹೊರತಂದ ಮುಖ್ಯ ಪ್ರಕಟಣೆಗಳು Important publications brought out by the faculty ...	208
ಅಧ್ಯಾಯ VI Chapter VI	**ಆರ್ಥಿಕ ಸಂಪನ್ಮೂಲ, ಹಂಚಿಕೆ, ಲೆಕ್ಕಪತ್ರ ಮತ್ತು ನಿರ್ವಹಣೆ Financial Resources, Allocation, Accounting and Management**		
	6.1	ಆರ್ಥಿಕ ಸಂಪನ್ಮೂಲ Source of Finance ...	247
	6.2	ಅನುದಾನಗಳ ಸ್ವೀಕೃತಿ Receipts ...	247
	6.3	2020–21ನೇ ಸಾಲಿನ ವೆಚ್ಚ Expenditure during 2020-21 ...	251
	6.4	ನಿವೃತ್ತಿ ಸೌಲಭ್ಯದ ವಿವರಗಳು Details of Retirement Benefits ...	253
	6.5	ಸಾಲ ಮತ್ತು ಮುಂಗಡಗಳ ವಿವರಗಳು Details of Loans and Advances ...	254
	6.6	ಶಾಸನಬದ್ಧ ಲೆಕ್ಕ ಪರಿಶೋಧಕರಿಂದ ಖಾತೆಗಳ ಲೆಕ್ಕ ಪರಿಶೋಧನೆ Audit of Accounts by the Statutory Auditors ...	254

ಅಧ್ಯಾಯ ಸಂಖ್ಯೆ/ Chapter number		ಶೀರ್ಷಿಕೆ ಮತ್ತು ಉಪ ಶೀರ್ಷಿಕೆ Title and sub-title		ಪುಟ ಸಂಖ್ಯೆ Page no.
ಅಧ್ಯಾಯ VII Chapter VII		**ಮಾನವ ಸಂಪನ್ಮೂಲ ಅಭಿವೃದ್ಧಿ / Human Resource Development**		
	7.1	ನೇಮಕಾತಿಗಳು Appointments	...	255
	7.2	ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವಿವರ Staff Position of Teaching and Service Personnel	...	255
	7.3	ದಾಖಲಾದ ವಿಚಾರಣೆ, ನ್ಯಾಯಾಲಯದಲ್ಲಿನ ದಾವೆ ಮತ್ತು ಮಾಹಿತಿ ಹಕ್ಕು ಅಡಿಯಲ್ಲಿ ಬಂದ ಅರ್ಜಿಗಳ ಸಂಖ್ಯೆ Court Cases, RTI and Enquiries	...	257
	7.4	ನಿವೃತ್ತಿ Retirements	...	257
ಅಧ್ಯಾಯ VIII Chapter VIII		**ಸಂಶೋಧನಾ ಪೀಠಗಳು ಹಾಗೂ ಅವುಗಳ ಚಟುವಟಿಕೆಗಳು Research Chairs and their Activities**		
	8.1	ಪ್ರೊ. ಎಂ.ಡಿ. ನಂಜುಡಸ್ವಾಮಿ ಸಂಶೋಧನಾ ಪೀಠ Prof. M.D. Nanjundaswamy Research Chair	...	258
	8.2	ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಅಧ್ಯಯನ ಕೇಂದ್ರದ ವಾರ್ಷಿಕ ಪ್ರಗತಿ ವರದಿ Centre for Agriculture and Rural Development Studies	...	264
	8.3	ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿಯ ಪೀಠ Karnataka State Agricultural Marketing Board (KSAMB) Chair	...	270
ಅಧ್ಯಾಯ IX Chapter IX		**ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಿರ್ವಹಣೆ Infrastructure Development and Maintenance**		
	8.1	ರಾಜ್ಯ ಸರ್ಕಾರದ ಅನುದಾನಗಳು State Grants	...	272
	8.2	ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಅನುದಾನಗಳು ICAR Grants	...	273
	8.3	ಭಾರತ ಸರ್ಕಾರದ ಅನುದಾನಗಳು Government of India Grants	...	274
	8.4	ಆರ್.ಕೆ.ವಿ.ವೈ. ಅನುದಾನಗಳು RKVY Grants	...	274
	8.5	ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಅನುದಾನಗಳು SCSP & TSP Grants	...	275
ಛಾಯಾ ಚಿತ್ರಗಳು / PHOTOGRAPHS			...	277
ಅನುಬಂಧಗಳು / ANNEXURES			...	293

ಕಾರ್ಯಕಾರಿ ವರದಿ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವನ್ನು ಆಗಿನ ಮೈಸೂರು ಸರ್ಕಾರವು 1963ರಲ್ಲಿ ಅಧಿನಿಯಮ 22ರನ್ವಯ ಸ್ಥಾಪಿಸಿತು. ವಿಶ್ವವಿದ್ಯಾನಿಲಯವು 1964ರ ಆಗಸ್ಟ್ 21ರಂದು ಅಸ್ತಿತ್ವಕ್ಕೆ ಬಂದಿತು, ಆದರೆ ಅದರ ಸ್ಥಾಪನೆಯ ಪರಿಕಲ್ಪನೆಯು 1899ರಲ್ಲೇ 30 ಎಕರೆ ಜಾಗದಲ್ಲಿ ಒಂದು ಪ್ರಾಯೋಗಿಕ ಕ್ಷೇತ್ರ ಸ್ಥಾಪನೆಯೊಂದಿಗೆ ಪ್ರಾರಂಭವಾಗಿತ್ತು. ಆ ಕ್ಷೇತ್ರವನ್ನು 202 ಎಕರೆಗಳಿಗೆ ಹೆಚ್ಚಿಸಿ 1913ರಲ್ಲಿ ಬೆಂಗಳೂರಿನ ಹೆಬ್ಬಾಳದಲ್ಲಿ ಒಂದು ಕೃಷಿ ಶಾಲೆಯನ್ನು ಸ್ಥಾಪಿಸಲಾಯಿತು ಹಾಗೂ ಅದು ಈಗ 'ಮುಖ್ಯ ಸಂಶೋಧನಾ ಕೇಂದ್ರ'ವಾಗಿದೆ. ಇಂದು ಕೃಷಿ ವಿಶ್ವವಿದ್ಯಾನಿಲಯವು ಅದರ ಕನಸು ಕಂಡು ಹಲವಾರು ದಶಕಗಳ ಕಾಲ ಪೋಷಿಸಿರುವ ದಾರ್ಶನಿಕರ ಸ್ಮರಣೆಯ ಕೊಡುಗೆಯಾಗಿದೆ. ವಿಶ್ವವಿದ್ಯಾನಿಲಯದ ಅದ್ಭುತ ಬೆಳವಣಿಗೆ ಮತ್ತು ರಾಜ್ಯದ ಅವಶ್ಯಕತೆಗಳನ್ವಯ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವನ್ನು 1986ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಒಂದು ಅಧಿನಿಯಮದ ತಿದ್ದುಪಡಿಯ ಮೂಲಕ ವಿಭಜಿಸಿ ಧಾರವಾಡ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಯಿತು. ವಿಷಯಗಳ ಮತ್ತು ಪ್ರಾಂತ್ಯಗಳ ಪ್ರಾಮುಖ್ಯತೆಯನ್ನು ಕರ್ನಾಟಕ ಸರ್ಕಾರವು ಪರಿಗಣಿಸಿ ಅಧಿನಿಯಮಗಳ ಮೂಲಕ 'ಕರ್ನಾಟಕ ಪಶುವೈದ್ಯಕೀಯ, ಜಾನುವಾರು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ'ವನ್ನು, 2005ರಲ್ಲಿ ಬೀದರ್‌ನಲ್ಲಿ, ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು 2008ರಲ್ಲಿ, ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು 2009ರಲ್ಲಿ ಮತ್ತು ಶಿವಮೊಗ್ಗದಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು 2013 ಸ್ಥಾಪಿಸಲಾಯಿತು. ಮಾತೃ ವಿಶ್ವವಿದ್ಯಾನಿಲಯವಾದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ರಾಜ್ಯದ 10 ಜಿಲ್ಲೆಗಳನ್ನು ಮಾತ್ರ ಕಾರ್ಯಾಚರಣೆಯ ಭೌಗೋಳಿಯ ವ್ಯಾಪ್ತಿಯಲ್ಲಿ ಹೊಂದಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು 2013–14ರಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ಹಾಗೂ 2015–16ರಲ್ಲಿ ತನ್ನ ಘಟಿಕೋತ್ಸವದ ಸುವರ್ಣ ಮಹೋತ್ಸವವನ್ನು ಆಚರಿಸಿತು.

ಪ್ರವೇಶಾತಿ

ವಿಶ್ವವಿದ್ಯಾನಿಲಯವು ನಾಲ್ಕು ವರ್ಷಗಳ ಅವಧಿಯ ಸೆಮಿಸ್ಟರ್ ವ್ಯವಸ್ಥೆಯಡಿಯಲ್ಲಿ (21 ವಾರ) ಆರು ಸ್ನಾತಕ ಪದವಿ ಕಾರ್ಯಕ್ರಮಗಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ತನ್ನ ಆರು ಮಹಾವಿದ್ಯಾಲಯಗಳಲ್ಲಿ ನಡೆಸುತ್ತಿದೆ. ಬೆಂಗಳೂರು ಜಿ.ಕೆ.ವಿ.ಕೆ.ಯಲ್ಲಿನ ಕೃಷಿ ಮಹಾವಿದ್ಯಾಲಯ ಮೂರು ಸ್ನಾತಕ ಪದವಿಗಳನ್ನು – ಬಿ.ಎಸ್ಸಿ. (ಆನರ್ಸ್) ಕೃಷಿ; ಬಿ.ಎಸ್ಸಿ. (ಆನರ್ಸ್) ಕೃಷಿ ಮಾರುಕಟ್ಟೆ, ಸಹಕಾರ ಮತ್ತು ವ್ಯವಹಾರ ನಿರ್ವಹಣೆ; ಬಿ.ಟೆಕ್. (ಕೃಷಿ ಇಂಜಿನಿಯರಿಂಗ್) ಹಾಗೂ 22 ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ 15 ವಿಷಯಗಳಲ್ಲಿ ಪಿಎಚ್.ಡಿ. ಪದವಿಗಳನ್ನು ನೀಡುತ್ತಿದೆ. ಹಾಸನದ ಕೃಷಿ ಮಹಾವಿದ್ಯಾಲಯವು ಮೂರು ಸ್ನಾತಕ ಪದವಿಗಳನ್ನು – ಬಿ.ಎಸ್ಸಿ. (ಆನರ್ಸ್) ಕೃಷಿ; ಬಿ.ಟೆಕ್. (ಬಯೋಟೆಕ್) ಮತ್ತು ಬಿ.ಟೆಕ್. (ಆಹಾರ ತಂತ್ರಜ್ಞಾನ) ನೀಡುತ್ತಿದೆ. ಚಿಂತಾಮಣಿ ರೇಷ್ಮೆಕೃಷಿ

EXECUTIVE SUMMARY

The University of Agricultural Sciences, Bangalore (UAS-B) was established by the Act No. 22 of the then Mysore Government in the year 1963. The University came into existence on 21st August, 1964, but its conception took birth in 1899 with the establishment of experimental farm on 30 acres, followed by an Agricultural School in the expanded farm area of 202 acres during 1913, which is now the 'Main Research Station (MRS)' located at Hebbal, Bengaluru. Today University of Agricultural Sciences, Bangalore is a tribute to the visionaries who founded and nurtured it over the past several decades. The phenomenal growth of the University and needs of the regions of the State, led to bifurcation of the University of Agricultural Sciences, Bangalore through an Amendment to UAS-B Act in 1986 and the University of Agricultural Sciences, Dharwad was established. Considering the importance of subjects and regions, Government of Karnataka through Acts, established 'Karnataka Veterinary, Animal and Fishery Sciences University' at Bidar during 2005; 'University of Agricultural Sciences, Raichur' during 2008; 'University of Horticultural Sciences, Bagalkot' during 2009 and 'University of Agriculture and Horticulture Sciences, Shivamogga' during 2013. The University of Agricultural Sciences, Bangalore, the Mother University has operational geographical jurisdiction of 10 southern districts in the State. The UAS-B has celebrated its Golden Jubilee year during 2013-14 and Golden Jubilee Convocation during 2015-16.

Admissions

The University is offering six Under Graduate programmes of four years' duration under semester system (21 weeks) with English as medium of instruction, in its six colleges. College of Agriculture, GKVK, Bengaluru has offered three Bachelor Degree programmes viz., B.Sc. (Hons) Agriculture, B.Sc. (Hons.) Agricultural Marketing, Cooperation and Business Management & B.Tech. (Agricultural Engineering); Master's degree in 22 disciplines and Ph.D. in 15 disciplines. College of Agriculture, Hassan has offered three Bachelor Degree programmes viz., B.Sc. (Hons.) Agriculture; B.Tech. (Bio Tech.) and

ಮಹಾವಿದ್ಯಾಲಯವು ಎರಡು ಸ್ನಾತಕ ಪದವಿಗಳನ್ನು – ಬಿ.ಎಸ್ಸಿ. (ಆನರ್ಸ್) ಕೃಷಿ ಮತ್ತು ಬಿ.ಎಸ್ಸಿ. (ಆನರ್ಸ್) ರೇಷ್ಮೆಕೃಷಿ ನೀಡುತ್ತಿದೆ. ಮಂಡ್ಯ ಕೃಷಿ ಮಹಾವಿದ್ಯಾಲಯವು ಬಿ.ಎಸ್ಸಿ. (ಆನರ್ಸ್) ಕೃಷಿ ಹಾಗೂ 5 ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು ಎರಡು ವರ್ಷಗಳ ಕೃಷಿಯಲ್ಲಿ ಡಿಪ್ಲೊಮಾ ಪದವಿಗಳನ್ನು ನೀಡುತ್ತಿದೆ. ಚಾಮರಾಜನಗರ ಕೃಷಿ ಮಹಾವಿದ್ಯಾಲಯವು ಬಿ.ಎಸ್ಸಿ. (ಆನರ್ಸ್) ಕೃಷಿ ಸ್ನಾತಕ ಪದವಿ ನೀಡುತ್ತಿದೆ.

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸ್ನಾತಕ ಪದವಿಗಳಿಗೆ ಪ್ರವೇಶ ಸಾಧ್ಯ ಸಂಖ್ಯೆಯು 1050 ಇದ್ದು, ಒಟ್ಟು 901 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ ಹಾಗೂ ಅವರಲ್ಲಿ 450 ಬಾಲಕರು (49.94%) ಮತ್ತು 451 ಬಾಲಕಿ (50.05%) ಯರಾಗಿದ್ದಾರೆ. ಎಲ್ಲಾ ವರ್ಷದ ಸ್ನಾತಕ ಪದವಿಗಳಲ್ಲಿ ಹಾಜರಾತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 3478 ಆಗಿದ್ದು, ಅವರಲ್ಲಿ 1829 ಬಾಲಕರು (52.58%) ಹಾಗೂ ಬಾಲಕಿಯರು 1649 (47.41%) ಇದ್ದಾರೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಸಾಧ್ಯ ಸಂಖ್ಯೆಯು 356 ಇದ್ದು ಒಟ್ಟು 348 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ ಹಾಗೂ ಅವರಲ್ಲಿ 164 ಬಾಲಕರು ಮತ್ತು 184 ಬಾಲಕಿಯರಾಗಿದ್ದಾರೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸ್ನಾತಕೋತ್ತರ ಪದವಿಗಳಿಗೆ ಒಟ್ಟು 332 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ ಹಾಗೂ ಅವರಲ್ಲಿ 150 ಬಾಲಕರು ಮತ್ತು 182 ಬಾಲಕಿಯರಾಗಿದ್ದಾರೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಡಾಕ್ಟೊರಲ್ ಪದವಿಗಳಿಗೆ ಪ್ರವೇಶ ಸಾಧ್ಯ ಸಂಖ್ಯೆಯು 125 ಇದ್ದು ಒಟ್ಟು 110 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ ಹಾಗೂ ಅವರಲ್ಲಿ 44 ಬಾಲಕರು ಮತ್ತು 66 ಬಾಲಕಿಯರಾಗಿದ್ದಾರೆ. ಹಾಜರಾತಿಯಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 228 ಇದ್ದು ಅವರಲ್ಲಿ 119 ಬಾಲಕರು ಮತ್ತು 121 ಬಾಲಕಿಯರಾಗಿದ್ದಾರೆ. ಪ್ರಸ್ತುತ ವರ್ಷದಲ್ಲಿ ಎರಡು ವರ್ಷಗಳ ಡಿಪ್ಲೊಮಾಗೆ ಪ್ರವೇಶ ಸಾಧ್ಯ ಸಂಖ್ಯೆಯು 50 ಇದ್ದು ಪ್ರವೇಶಾತಿ ನೀಡಿದ ಸಂಖ್ಯೆ 47 ಆಗಿದೆ. ಸ್ನಾತಕ, ಸ್ನಾತಕೋತ್ತರ ಮತ್ತು ಡಿಪ್ಲೊಮಾ ಪದವಿ ಕಾರ್ಯಕ್ರಮಗಳ ಒಟ್ಟಾರೆ ಪ್ರವೇಶ ಸಾಧ್ಯತೆ 1601 ಇದ್ದು ಪ್ರವೇಶಾತಿ ಪಡೆದವರ ಸಂಖ್ಯೆ 1417 ಆಗಿದೆ. ಪ್ರಸ್ತುತ ವರ್ಷ ಹಾಜರಾತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 4131 ಆಗಿದ್ದು ಅವರಲ್ಲಿ 2157 ಬಾಲಕರು ಹಾಗೂ 1986 ಬಾಲಕಿಯರು ಇದ್ದಾರೆ. ಪ್ರಸ್ತುತ ವರ್ಷ ಸ್ನಾತಕ ಪದವಿಯಲ್ಲಿ ಒಟ್ಟು 656 ವಿದ್ಯಾರ್ಥಿಗಳು ಯಶಸ್ವಿಯಾಗಿ ಉತ್ತೀರ್ಣರಾಗಿದ್ದು ಅವರಲ್ಲಿ 349 ಬಾಲಕರು ಹಾಗೂ 307 ಬಾಲಕಿಯರಿದ್ದಾರೆ. ಪ್ರಸ್ತುತ ವರ್ಷ ಸ್ನಾತಕೋತ್ತರ ಪದವಿಯಲ್ಲಿ ಒಟ್ಟು 279 ವಿದ್ಯಾರ್ಥಿಗಳು ಯಶಸ್ವಿಯಾಗಿ ಉತ್ತೀರ್ಣರಾಗಿದ್ದು ಅವರಲ್ಲಿ 143 ಬಾಲಕರು ಹಾಗೂ 136 ಬಾಲಕಿಯರಿದ್ದಾರೆ. ಡಾಕ್ಟೊರಲ್ ಪದವಿಯಲ್ಲಿ 74 ವಿದ್ಯಾರ್ಥಿಗಳು ಯಶಸ್ವಿಯಾಗಿ ಉತ್ತೀರ್ಣರಾಗಿದ್ದು ಅವರಲ್ಲಿ 44 ಬಾಲಕರು ಹಾಗೂ 30 ಬಾಲಕಿಯರಿದ್ದಾರೆ. ಅದರಂತೆ, 2405 ಕ್ರೆಡಿಟ್ ಗಂಟೆಗಳ 990 ಕೋರ್ಸ್‌ಗಳನ್ನು ನೀಡಲಾಗಿದ್ದು 2954 ಪರೀಕ್ಷೆಗಳನ್ನು ನಡೆಸಲಾಗಿದೆ ಮತ್ತು ಐದು ಮಹಾವಿದ್ಯಾಲಯಗಳ ಎಲ್ಲಾ ಸ್ನಾತಕ ಪದವಿಗಳ 464585 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗಿದೆ. ಸ್ನಾತಕೋತ್ತರ ಪದವಿಗಳಿಗೆ 363 ಕ್ರೆಡಿಟ್ ಗಂಟೆಗಳ 163 ಕೋರ್ಸ್‌ಗಳನ್ನು ನೀಡಲಾಗಿದ್ದು 1014 ಪರೀಕ್ಷೆಗಳನ್ನು ನಡೆಸಲಾಗಿದೆ

B.Tech. (Food Technology). College of Sericulture, Chintamani has offered two degree programmes viz., B.Sc. (Hons.) Agriculture and B.Sc. (Hons.) Sericulture. College of Agriculture, Mandya has offered Bachelor Degree programme in B.Sc. (Hons.) Agriculture, Master's Degree in five subjects and two years Diploma in Agriculture. College of Agriculture, Chamarajanagara has offered Bachelor Degree programme in B.Sc. (Hons.) Agriculture.

The student intake for Bachelor's degree was 1050 and admitted 901 students of which 450 were boys (49.94%) and 451 were girls (50.05%). The total number of students on roll were 3478 of which 1829 were boys (52.58%) and 1649 were girls (47.41%). Intake for Master's degree was 356 and admitted 348 students of which 164 were boys (47.12%) and 184 were girls (52.87). The total number of students on roll for Master's degree programme was 332 of which 150 were boys and 182 were girls. Doctoral degree intake was 125 and admitted 110 students of which 44 were boys and 66 were girls. The total number of students on roll were 228 of which 119 were boys and 121 were girls. During the year, the intake for two-year diploma was 50 students and admission made was 47. The student on roll for the programme was 93 of which 59 were boys and 34 were girls. The overall intake for the Bachelor, Postgraduate degree programmes and diploma programme was 1601 and admitted 1417 candidates. The number of students on roll during the year was 4131of which 2157 were boys and 1986 were girls. A total of 656 students passed out with Bachelor degree successfully of which 349 were boys and 307 were girls. At Masters level 279 students have passed out, of which 143 were boys and 136 were girls. At Doctoral level, 74 students have passed out, of which 44 were boys and 30 were girls. Totally, 990 courses were offered with 2405 credit hours, 2954 examinations were conducted and 464585 answer scripts of all Bachelor's degree programme were evaluated across five colleges. As many as 163 courses were offered for Master's degree programmes with 363 credit hours, conducted 1014 examinations and evaluated 98285 answer papers. 65 courses with 136 credit hours were offered to Doctoral degree students and 237 examinations were

ಮತ್ತು 98285 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗಿದೆ. ಡಾಕ್ಟೊರಲ್ ಪದವಿಗಳಿಗೆ 136 ಕ್ರೆಡಿಟ್ ಗಂಟೆಗಳ 65 ಕೋರ್ಸ್‌ಗಳನ್ನು ನೀಡಲಾಗಿದ್ದು 237 ಪರೀಕ್ಷೆಗಳನ್ನು ನಡೆಸಲಾಗಿದೆ ಮತ್ತು 10154 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗಿದೆ. ಎರಡು ವರ್ಷಗಳು ಕೃಷಿಯಲ್ಲಿ ಡಿಪ್ಲೊಮಾಗೆ 86 ಕ್ರೆಡಿಟ್ ಗಂಟೆಗಳ 44 ಕೋರ್ಸ್‌ಗಳನ್ನು ನೀಡಲಾಗಿದ್ದು 51 ಪರೀಕ್ಷೆಗಳನ್ನು ನಡೆಸಲಾಗಿದೆ ಮತ್ತು 2496 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗಿದೆ. ಒಟ್ಟಾರೆಯಾಗಿ ವಿಶ್ವವಿದ್ಯಾನಿಲಯವು 2768 ಕ್ರೆಡಿಟ್ ಗಂಟೆಗಳ 1155 ಕೋರ್ಸ್‌ಗಳನ್ನು ವಾರ್ಷಿಕ ನಡೆಸುತ್ತಿದೆ. ಈ ಕೋರ್ಸ್‌ಗಳನ್ನು 94 ಪ್ರಾಧ್ಯಾಪಕರು, 36 ಸಹ ಪ್ರಾಧ್ಯಾಪಕರು ಮತ್ತು 99 ಸಹಾಯಕ ಪ್ರಾಧ್ಯಾಪಕರನ್ನೊಳಗೊಂಡಂತೆ 229 ಅಧ್ಯಾಪಕರು ನಡೆಸಿಕೊಟ್ಟಿದ್ದಾರೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ವಲಯ ಮಟ್ಟದ, ರಾಜ್ಯ ಮಟ್ಟದ ಹಾಗೂ ರಾಷ್ಟ್ರ ಮಟ್ಟದ ಪಠ್ಯೇತರ ಚಟುವಟಿಕೆಗಳನ್ನೊಳಗೊಂಡಂತೆ ಅಂತರ ಆವರಣ ಟೂರ್ನಮೆಂಟ್, ಅಥ್ಲೆಟಿಕ್ ಮೀಟ್ ಮತ್ತು ಯುವಜನೋತ್ಸವಗಳಂತಹ ಹಲವಾರು ಪಠ್ಯೇತರ ಚಟುವಟಿಕೆಗಳಲ್ಲಿ ಪ್ರತಿ ವರ್ಷ ಭಾಗವಹಿಸುತ್ತಾರೆ. 2020–21ನೇ ಸಾಲಿನಲ್ಲಿ, ಕೋವಿಡ್–19 ಸಾಂಕ್ರಾಮಿಕದ ಕಾರಣ ಬಹಳಷ್ಟು ಚಟುವಟಿಕೆಗಳು ನಡೆದಿರುವುದಿಲ್ಲ. ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ವಿವಿಧ ನೇಮಕಾತಿ ಏಜೆನ್ಸಿಗಳಿಂದ ಉದ್ಯೋಗ ಸ್ಥಾನೀಕರಣಕ್ಕಾಗಿ ವಿಶ್ವವಿದ್ಯಾನಿಲಯವು ತನ್ನ ಕೇಂದ್ರ ಆವರಣದಲ್ಲಿ ಹಾಗೂ ತನ್ನ ಇತರ ಆವರಣಗಳಲ್ಲಿಯೂ ಸಹ ಉದ್ಯೋಗ ಕೋಶವನ್ನು ಹೊಂದಿದ್ದು ಅದರ ಉಸ್ತುವಾರಿಗೆ ಒಬ್ಬರು ಸಂಯೋಜಕರಿದ್ದಾರೆ, ಪ್ರಸ್ತುತ ವರ್ಷದಲ್ಲಿ 36 ವಿದ್ಯಾರ್ಥಿಗಳು ಉದ್ಯೋಗ ಕೋಶದ ಮೂಲಕ ವಿವಿಧ ಖಾಸಗಿ ಕಂಪೆನಿಗಳಿಗೆ ನೇಮಕಾತಿಗೊಂಡಿದ್ದಾರೆ. ವಿದ್ಯಾರ್ಥಿಗಳು ರಾಷ್ಟ್ರೀಯ ಸೇವಾ ಯೋಜನಾ ಚಟುವಟಿಕೆಗಳಲ್ಲೂ ಸಹ ಭಾಗವಹಿಸಿದ್ದಾರೆ. ವಿಶ್ವವಿದ್ಯಾನಿಲಯವು ಎಲ್ಲಾ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗೆ ತನ್ನ ಎಲ್ಲಾ ಮಹಾವಿದ್ಯಾಲಯಗಳ ಆವರಣಗಳಲ್ಲಿ ವೈದ್ಯಕೀಯ ಸೇವೆಯನ್ನು ಒದಗಿಸುತ್ತಿದೆ. ಬೆಂಗಳೂರಿನಲ್ಲಿ 2020–21ರ ಸಾಲಿನಲ್ಲಿ, ಒಟ್ಟು 9472 ರೋಗಿಗಳಿಗೆ ವೈದ್ಯಕೀಯ ಸಲಹಾ ಸೇವೆ ಒದಗಿಸ ಲಾಗಿದೆ. ಇದರ ಜೊತೆಗೆ 927 ಮಾದರಿಗಳ ಪ್ರಯೋಗಾಲಯ ಪರೀಕ್ಷೆ ಹಾಗೂ ವಿಶ್ಲೇಷಣೆಗಳನ್ನು ನಡೆಸಿ ನಂತರ ಸೂಕ್ತ ಔಷಧಗಳ ಸೇವನೆಗೆ ಸೂಚಿಸಲಾಗಿದೆ.

ವಿಶ್ವವಿದ್ಯಾನಿಲಯವು 2011–12ರಲ್ಲಿ 'ವಿಶ್ವವಿದ್ಯಾನಿಲಯ ಪರೀಕ್ಷಾ ಕೇಂದ್ರ'ವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ, ಜಿ.ಕೆ.ವಿ.ಕೆ.ಯಲ್ಲಿ ಹಾಗೂ ಪ್ರತಿಯೊಂದು ಮಹಾವಿದ್ಯಾಲಯದಲ್ಲಿ ಒಂದೊಂದು ಉಪ–ಕೇಂದ್ರವನ್ನು ಸ್ಥಾಪಿಸಿದೆ. ಈ ಕೇಂದ್ರವು ಎಲ್ಲಾ ಸ್ನಾತಕ ಪದವಿ ಕಾರ್ಯಕ್ರಮಗಳಿಗೆ ಅಂತಿಮ ಬಾಹ್ಯ ಥಿಯರಿ ಪರೀಕ್ಷೆಯ ಕಾರ್ಯಸೂಚಿ ಹಾಗೂ ಅದನ್ನು ನಡೆಸುವ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಪ್ರಕ್ರಿಯೆ ನಡೆಸುವ ಹಾಗೂ ಫಲಿತಾಂಶಗಳನ್ನು ಘೋಷಿಸುವ ಹೊಣೆಗಾರಿಕೆ ಹೊಂದಿರುತ್ತದೆ. ಸಂವಹನ ಕೇಂದ್ರವು ವಿಶ್ವವಿದ್ಯಾನಿಲಯ ಆಡಳಿತೆಯ, ಸಂಶೋಧನೆ, ಬೋಧನೆ ಮತ್ತು ವಿಸ್ತರಣಾ ಅಂಗಗಳ ಪ್ರಕಟಣೆ ಮತ್ತು ಇತರ ಮುದ್ರಣ ಕಾರ್ಯಗಳ ಸಂಯೋಜನಾ ಕೇಂದ್ರವಾಗಿದೆ. ಸಂವಹನ ಕೇಂದ್ರದಿಂದ ಪ್ರಕಟವಾಗುವ ಮೈಸೂರ್ ಜರ್ನಲ್ ಆಫ್ ಅಗ್ರಿಕಲ್ಚರಲ್ ಸೈನ್ಸ್‌ನ ನಾಸ್ ಅಂಕವು ಜನವರಿ 2021 ರಿಂದ 4.64ಕ್ಕೆ ಏರಿಕೆಯಾಗಿರುತ್ತದೆ.

conducted evaluating 10154 answer papers. Forty four courses with 86 credit hours were offered for Two Years Diploma in Agriculture, conducted 51 examinations and evaluated 2496 answer scripts. In the nutshell, annually the University offers 1155 courses with 2768 credit hours. These courses were offered by 229 faculties consisting of 94 Professors, 36 Associate Professors and 99 Assistant Professors who were in position.

The students of the University participates in various co-curricular activities including participation in Inter Campus Tournament, Athletic Meet and Youth Festival, Zonal, State and National Level co-curricular activities. However, due to Covid-19 Pandemic situation, the evetns were not conducted. The University has placement cell at main campus with coordinator and so also in constituent colleges for the purpose of placement of graduating student in different employing agencies. During the year, 36 graduating students were recruited by different private companies through Placement Cell. The University adopted the National Service Scheme and the students have participated in various activities. The University provides medical services to all the students and the employees, in all its constituent college campuses. During 2020-21, consultation was rendered to 9472 patients at Bengaluru. Besides, 927 samples were subjected to laboratory tests and analysis after which suitable medicines were prescribed.

'University Examination Center' established during 2011-12 at GKVK, Bengaluru with one sub-centre in each of its constituent colleges, is responsible for coordinating, scheduling, conducting final external theory examinations for all Bachelor's degree programmes, answer script evaluation process and declaration of results. The Communication Centre is coordinating with the University Administration, Research, Teaching and Extension wings in respect of publications and other printing works. The NASS score of MJAS has increased to 4.64 which is effective from January 2021. The Department of Kannada Studies is vested with the responsibility of

ಕನ್ನಡ ಅಧ್ಯಯನ ವಿಭಾಗವು ಕೃಷಿ ಮತ್ತು ಸಂಬಂಧಿತ ವಿಷಯ ಕುರಿತ ಕನ್ನಡ ಪುಸ್ತಕಗಳ ಸಂಪಾದನೆ, ಅನುವಾದ ಹಾಗೂ ಪ್ರಕಟಣಾ ಕಾರ್ಯದ ಜವಾಬ್ದಾರಿಯನ್ನು ಹೊತ್ತಿದೆ. ಪ್ರಸ್ತುತ ವರದಿಯ ವರ್ಷದಲ್ಲಿ ವಿಭಾಗವು ಕೃಷಿ ಮತ್ತು ಸಂಬಂಧಿತ ವಿಷಯಗಳ ಕುರಿತು ಕನ್ನಡದಲ್ಲಿ ನಾಲ್ಕು ಪುಸ್ತಕಗಳನ್ನು ಪ್ರಕಟಿಸಿದೆ.

ಪ್ರಸ್ತುತ ಪರಿಸ್ಥಿತಿಗೆ ಆದ್ಯತೆ ನೀಡುತ್ತ ಕೃಷಿ ವಿಶ್ವವಿದ್ಯಾನಿಲಯವು 2020–21ರ ಸಂಶೋಧನಾ ಕಾರ್ಯಕ್ರಮಗಳನ್ನು ಮರು–ಸಂಘಟಿಸಿ ಕಾರ್ಯಗತಗೊಳಿಸಲಾಗಿದೆ. ಪ್ರಸ್ತುತ ವರ್ಷದಲ್ಲಿ ಪೋಷಕಾಂಶ ಭರಿತ ಬೆಳೆಗಳಾದ ಸಿರಿ ಧಾನ್ಯಗಳ ಮತ್ತು ಬೀಜದ ದಂಟಿನ ತಳಿಗಳನ್ನು ಕ್ಷೇತ್ರ ಪ್ರಯೋಗಕ್ಕಾಗಿ ಗುರುತಿಸಲಾಗಿದೆ. ಇದಲ್ಲದೆ, ಪರಿಣಾಮಕಾರಿ ಮತ್ತು ಪರಿಸರ ಸಮರ್ಥನೀಯ ಬೆಳೆ ಉತ್ಪಾದನೆಯ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆಗೊಳಿಸಲಾಗಿದೆ. ಪ್ರಸ್ತುತ ಒಟ್ಟು 280 ಸಂಶೋಧನಾ ಪ್ರಾಯೋಜನೆಗಳು ಕಾರ್ಯಾಚರಣೆಯಲ್ಲಿದ್ದು ಒಟ್ಟು 2642 ಲಕ್ಷ ರೂ.ಗಳ ಆಯವ್ಯಯದಲ್ಲಿ ವಿವಿಧ ಅನುದಾನದ ಏಜೆನ್ಸಿಗಳು ವಿಶ್ವವಿದ್ಯಾನಿಲಯಕ್ಕೆ 59 ಹೊಸ ಬಾಹ್ಯ ಪ್ರಾಯೋಜಿತ ಸಂಶೋಧನಾ ಪ್ರಾಯೋಜನೆಗಳನ್ನು ಮಂಜೂರು ಮಾಡಿವೆ. ಪ್ರಸ್ತುತ ವರ್ಷದಲ್ಲಿ ವಿಶ್ವವಿದ್ಯಾನಿಲಯವು 348 ಹೊಸ ತಳಿಗಳು/ಸಾಲುಗಳು/ ರಾಸಾಯನಿಕಗಳು/ಅಣುಗಳನ್ನು ಪೀಡೆ/ ರೋಗ/ಕಳೆ ನಿಯಂತ್ರಣಕ್ಕಾಗಿ/ ಮಣ್ಣು ವಿಶ್ಲೇಷಣೆಗಾಗಿ ಹಾಗೂ ಕೃಷಿ ಉಪಕರಣಗಳನ್ನು ಪರೀಕ್ಷಿಸಿದ್ದು ಅವುಗಳಿಂದ ಒಟ್ಟು ರೂ.436 ಲಕ್ಷ ಆದಾಯವನ್ನು ಗಳಿಸಿದೆ. ವಿವಿಧ ಸಂಸ್ಥೆಗಳೊಂದಿಗೆ ಪರಸ್ಪರ ಆಸಕ್ತಿಯ ಸಹಯೋಜಿತ ಸಂಶೋಧನೆಯನ್ನು ಕೈಗೊಳ್ಳಲು ಒಟ್ಟು 13 ಒಪ್ಪಂದದ ದಸ್ತಾವೇಜುಗಳು / ಎಂ.ಓ.ಎ.ಗಳು / ಎಂ.ಟಿ.ಎ.ಗಳಿಗೆ ಸಹಿ ಮಾಡಲಾಗಿದೆ. ವಿಶ್ವವಿದ್ಯಾನಿಲಯವು 10 ಹೊಸ ಬೆಳೆ [ಭತ್ತ (ಕೆ.ಎಂ.ಪಿ. 220); ಭತ್ತ ಎಂ.ಎಸ್.ಎನ್. 99; ರಾಗಿ (ಕೆ.ಎಂ.ಆರ್. 316); ನವಣೆ (ಜಿ.ಪಿ.ಯು.ಎಫ್. 3); ಸಾಮೆ (ಜಿ.ಪಿ.ಯು.ಎಲ್. 6); ಬರಗು (ಜಿ.ಪಿ.ಯು.ಪಿ 28); ಬೀಜದ ದಂಟು (ಕೆ.ಬಿ.ಜಿ.ಎ. 15); ಕಬ್ಬು (ಸಿ.ಓ.ವಿ.ಸಿ. 18061); ಮೇವಿನ ತೋಕೆಗೋಧಿ (ಆರ್.ಓ.–11–1) ಮತ್ತು ಹಲಸು (ಬೈರಚಂದ್ರ)] ತಳಿಗಳನ್ನು ಅಭಿವೃದ್ಧಿಪಡಿಸಿದೆ ಮತ್ತು 28 ಹೊಸ ತಂತ್ರಜ್ಞಾನಗಳನ್ನು ರೈತರ ಬಳಕೆಗಾಗಿ ಬಿಡುಗಡೆ ಮಾಡಲಾಗಿದೆ.

ದಕ್ಷಿಣದ 10 ಜಿಲ್ಲೆಗಳಲ್ಲಿ ವಿಸ್ತರಣಾ ಸೇವೆ ಒದಗಿಸುವ ಜವಾಬ್ದಾರಿಯನ್ನು ವಿಸ್ತರಣಾ ನಿರ್ದೇಶನಾಲಯಕ್ಕೆ ವಹಿಸಲಾಗಿದೆ. ಕೃಷಿ ಅಭಿವೃದ್ಧಿಗೆ ಸಂಶೋಧನಾ ಆವಿಷ್ಕಾರಗಳ ಆಧಾರಿತ ತಂತ್ರಜ್ಞಾನವು ರೈತರಿಗೆ ಲಭಿಸಬೇಕೆಂದು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳು ತಂತ್ರಜ್ಞಾನ ಆವಿಷ್ಕಾರ, ಸುಧಾರಣೆ ಮತ್ತು ತಂತ್ರಜ್ಞಾನ ಅಳವಡಿಕೆಯನ್ನು ಕೇಂದ್ರಿಕರಿಸುತ್ತವೆ. ಪ್ರಶಸ್ತಿ ವಿಜೇತ ರೈತರಿಂದ ಇತರ ರೈತರ ತರಬೇತಿ, ರೈತರ ಆದಾಯ ದುಪ್ಪಟ್ಟುಗೊಳಿಸುವುದು, ಬೀಜ ಕೇಂದ್ರ ಮತ್ತು ಹವಾಮಾನ ಸಹಿಷ್ಣು ಸಮಗ್ರ ಬೇಸಾಯ ವ್ಯವಸ್ಥೆಯ ಪ್ರಾತ್ಯಕ್ಷಿಕೆ, ಕೌಶಲ್ಯ ಅಭಿವೃದ್ಧಿ ಮುಂತಾದ ಹೊಸ ಕಾರ್ಯಕ್ರಮಗಳನ್ನು ವಿಸ್ತರಣಾ ನಿರ್ದೇಶನಾಲಯವು ಕೈಗೊಂಡಿದೆ. ವಿಸ್ತರಣಾ ನಿರ್ದೇಶನಾಲಯವು 134 ಮುಂಚೂಣಿ ಪ್ರಾತ್ಯಕ್ಷಿಕೆಗಳು, 27 ಕ್ಷೇತ್ರ ಪರೀಕ್ಷೆಗಳು, 977 ಕ್ಷೇತ್ರ ಭೇಟಿಗಳು, 79 ಕ್ಷೇತ್ರೋತ್ಸವಗಳು ಮತ್ತು 618 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. 36 ರೇಡಿಯೋ ಭಾಷಣಗಳನ್ನು ಮತ್ತು 26 ದೂರದರ್ಶನ ಕಾರ್ಯಕ್ರಮಗಳನ್ನು ಸಹ ನೀಡಲಾಗಿದೆ/

translating, editing, proof reading and publication of books in Kannada pertaining to agriculture and allied subjects. During the year, four books on various agricultural and allied subjects in Kannada were published.

University has redesigned its research programmes on priority basis that has lead to identifying nutrition rich crops like small millets and pseudo cereal grain amaranth for farm trials during the year 2020-21. Efficient and eco-friendly crop production technologies were also developed by the University. In total, 280 research projects are in operation and a total of 59 new research projects have been sanctioned to the University during 2020-21 by various funding agencies with a total outlay of Rs. 2642 lakhs. During the year, the University has tested 348 new varieties / lines/ chemicals/molecules for control of pests /diseases / weeds / soil analysis and agricultural equipment and generated a revenue of Rs.436 lakhs. A total of 13 MoUs / MoAs / MTA have been signed with different institutions for conducting collaborative research of mutual interest. University has developed 10 new crop varieties [Paddy-KMP 220, Paddy-MSN 99, Ragi-KMR 316, Foxtail Millet GPUF 3, Little Millet- GPUL 6, Proso Millet-GPUP 28, Grain Amaranth-KBGA 15, Sugarcane-CoVC 18061, Fodder Oats-RO 11-1, and Jack fruit-Byrachandra and 28 new technologies were released for adoption by the farmers.

The Directorate of Extension is vested with the responsibility to carry out the extension services in 10 districts of southern Karnataka. Extension education programmes focuses on technology assessment & refinement and facilitating adoption of technology by the farmers & extension functionaries based on research findings for accelerated agricultural growth. The Directorate of Extension has taken up new initiatives such as training of farmers by awardee farmers, doubling farmers' income, demonstrations of climate resilient integrated farming system, seed hub, skill development programmes, etc. The Directorate of Extension has organised 134 Front Line Demonstrations, 27 On-farm testing's, 977 Field visits,

ಆಯೋಜಿಸಲಾಗಿದೆ. ವಿಸ್ತರಣಾ ನಿರ್ದೇಶನಾಲಯವು 2020ರ ಕೃಷಿಮೇಳವನ್ನು 2020ರ ನವಂಬರ್ 11 ರಿಂದ 13 ರವರೆಗೆ ಕೋವಿಡ್–19ರ ಸಾಂಕ್ರಾಮಿಕದ ಹಿನ್ನಲೆಯಲ್ಲಿ ಭೌತಿಕ ಹಾಗೂ ಡಿಜಿಟಲ್ (ವರ್ಚುವಲ್) ರೂಪದಲ್ಲಿ ಆಯೋಜಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯವು 924 ಸಮಾವೇಶ / ವಿಚಾರ ಸಂಕಿರಣ / ಕಾರ್ಯಾಗಾರ / ತರಬೇತಿ ಕಾರ್ಯಕ್ರಮಗಳು / ಚಳಿಗಾಲದ ಮತ್ತು ಬೇಸಿಗೆ ಶಾಲೆಗಳನ್ನು ಆಯೋಜಿಸಿದೆ. ಅನೇಕ ಪ್ರಾಧ್ಯಾಪಕರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹಲವಾರು ಸಮಿತಿಗಳಿಗೆ ಸದಸ್ಯರಾಗಿ ನಾಮಕರಣಗೊಂಡಿದ್ದಾರೆ. ಬೋಧಕ ಸಿಬ್ಬಂದಿ ಸುಮಾರು 92 ರೇಡಿಯೋ ಭಾಷಣ, 191 ದೂರದರ್ಶನ ಕಾರ್ಯಕ್ರಮಗಳು ಮತ್ತು 1808 ಕ್ಷೇತ್ರ ಭೇಟಿ, 118 ಕ್ಷೇತ್ರೋತ್ಸವ ಹಾಗೂ 778 ತರಬೇತಿ ಕಾರ್ಯಕ್ರಮಗಳು 108 ವೆಬಿನಾರ್ / ಕಾರ್ಯಾಗಾರಗಳು ಮತ್ತು 3025 ಇತರೆ ಚಟುವಟಿಕೆಗಳನ್ನು ಆಯೋಜಿಸಿರುತ್ತಾರೆ. ಒಟ್ಟು 824 ಪ್ರಕಟಣೆಗಳನ್ನು ಹೊರತರಲಾಗಿದ್ದು ಅವುಗಳಲ್ಲಿ 560 ಸಂಶೋಧನಾ ಪ್ರಬಂಧಗಳು, 86 ಜನಪ್ರಿಯ ಲೇಖನಗಳು, 53 ಪುಸ್ತಕಗಳು / ಬುಲೆಟಿನ್‌ಗಳು, 90 ಕರಪತ್ರಗಳು/ಫೋಲ್ಡರ್‌ಗಳು ಹಾಗೂ 35 ಇತರ ಸಾಹಿತ್ಯವಾಗಿದೆ.

ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿ ಮತ್ತು ಬೆಂಬಲ ಸಿಬ್ಬಂದಿಯ ನೇಮಕಾತಿಯಿಂದ ನಿವೃತ್ತಿ ಹೊಂದುವವರೆಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಚಟುವಟಿಕೆಗಳನ್ನು ಆಡಳಿತ ಕಚೇರಿಯ ಮುಖ್ಯಸ್ಥರಾಗಿ ಆಡಳಿತಾಧಿಕಾರಿಗಳು ನೋಡಿಕೊಳ್ಳುತ್ತಾರೆ. ವಿಶ್ವವಿದ್ಯಾನಿಲಯವು ಮಂಜೂರಾದ ಆರು ಪ್ರಾಧ್ಯಾಪಕರ (ಎಚ್.ಎ.ಜಿ.), 49 ಪ್ರಾಧ್ಯಾಪಕರ, 144 ಸಹ ಪ್ರಾಧ್ಯಾಪಕರ ಮತ್ತು 387 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಹೊಂದಿದೆ. ಒಟ್ಟು 586 ಮಂಜೂರಾದ ಹುದ್ದೆಗಳಲ್ಲಿ, 383 ಭರ್ತಿಯಾಗಿದ್ದು 203 ಖಾಲಿ ಇವೆ. ವಿಶ್ವವಿದ್ಯಾನಿಲಯವು ಮಂಜೂರಾದ 1564 ಬೋಧಕೇತರ ಸಿಬ್ಬಂದಿಯ ಹುದ್ದೆಗಳನ್ನು ಹೊಂದಿದ್ದು ಅವುಗಳಲ್ಲಿ 567 ಭರ್ತಿಯಾಗಿವೆ ಮತ್ತು 997 ಖಾಲಿ ಇವೆ. ವರದಿಯ ಅವಧಿಯಲ್ಲಿ, ನಾಲ್ಕು ಅಧಿಕಾರಿಗಳು, 13 ಬೋಧಕ ಸಿಬ್ಬಂದಿ ಮತ್ತು 52 ಬೋಧಕೇತರ ಸಿಬ್ಬಂದಿ ನಿವೃತ್ತಿ ಹೊಂದಿದ್ದಾರೆ.

ಕರ್ನಾಟಕ ಸರ್ಕಾರವು ಯೋಜನೇತರ ಅನುದಾನದಡಿ ಪ್ರಗತಿಯಲ್ಲಿರುವ ಬದ್ಧತೆಗಳ ಮುಂದುವರಿಕೆಗೆ ನಿರ್ವಹಣಾ ಅನುದಾನ ನೀಡಿದೆ. ಚಾಲನೆಯಲ್ಲಿರುವ ಯೋಜನೆಗಳ ಮುಂದುವರಿಕೆಗೆ ಹಾಗೂ ಹೊಸ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ ಶಿಕ್ಷಣ ಕಾರ್ಯಕ್ರಮಗಳಿಗಾಗಿ ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಮಂಡಳಿಯು ಅನುದಾನವನ್ನು ನೀಡಿದೆ. ಅಖಿಲ ಭಾರತ ಸಹಯೋಜಿತ ಸಂಶೋಧನಾ ಯೋಜನೆಗಳಿಗೆ ಮತ್ತು ತಾತ್ಪೂರ್ತಿಕ ಸಂಶೋಧನಾ ಕಾರ್ಯಕ್ರಮಗಳಿಗೆ ಸಹ ಅನುದಾನವನ್ನು ಒದಗಿಸಲಾಗಿದೆ. ಕೃಷಿಯಲ್ಲಿ ನಿರ್ದಿಷ್ಟ ಸಂಶೋಧನೆಗಳನ್ನು ಕೈಗೊಳ್ಳಲು ಭಾರತ ಸರ್ಕಾರದ ಹಲವಾರು ಇಲಾಖೆಗಳು ಸಹ ಹಣಕಾಸು ಸೌಲಭ್ಯ ಒದಗಿಸಿವೆ. ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳನ್ನು ಕೈಗೊಳ್ಳಲು ಹಲವಾರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆ/ಏಜೆನ್ಸಿಗಳು ಅನುದಾನ ಒದಗಿಸುತ್ತಿವೆ. ಬೆಳೆ ಬೇಸಾಯ, ಬೀಜೋತ್ಪಾದನೆ ಮತ್ತು ಸಸಿಮಡಿ ಚಟುವಟಿಕೆಗಳು, ವಿದ್ಯಾರ್ಥಿ ಶುಲ್ಕ ಸಂಗ್ರಹಣೆ ಮುಂತಾದವುಗಳ ಮೂಲಕ ಆಂತರಿಕ

79 Field days and 618 Training programmes. As many as 36 Radio talks and 26 TV programmes were also given / arranged.

The University has organised 924 Conferences / Seminars / Workshops / Training Programmes / Winter & Summer Schools. Several Professors have been nominated as Members for various committees at State and National Level. As many as 92 radio talks, 191 TV programmes and 1808 field visits, 118 Field Days, 778 training programmes, 108 Seminar/ Workshops and 3025 other activities (Resource person and etc.) were organised / performed by the faculty members. In total, 824 publications have been brought out, of which 560 were research papers, 86 popular articles, 53 books / bulletins, 90 leaflets / folders and 35 other literatures.

The University has administrative Office headed by Administrative Officer looking after the Human Resource Developmental activities from recruitment to retirement of teaching faculty and supporting staff of the University. There are six Professors (HAG), 49 Professors, 144 Associate Professors and 387 Assistant Professors sanctioned posts for the University. Out of 586 sanctioned posts, 383 are filled and 203 are vacant. The University has 1564 sanctioned supporting staff positions, of which 567 are filled and 997 are vacant. During the period, four offficers, 13 teaching faculty and 52 supporting staff have been superannuated.

The State Government provided maintenance grants under non-plan to continue the on-going commitments under establishment. Indian Council of Agricultural Research, New Delhi provided funds for the continuation of the existing schemes and to start new teaching, research and extension education programmes. Grants were also provided under All India Co-ordinated Research Schemes and Ad-hoc Research programmes. Several Departments of Government of India also provided financial assistance to conduct specific research in agriculture. Grants are being provided by several National and International Organizations / Agencies to conduct research and extension programmes in the University. Revenue was also generated by utilizing the internal resources

ಆದಾಯವನ್ನು ಸಹ ಗಳಿಸಲಾಗುತ್ತಿದೆ. 2020–21ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯಕ್ಕೆ ಒಟ್ಟು ಸ್ವೀಕೃತಿ ರೂ.36801.37 ಲಕ್ಷಗಳಾಗಿದ್ದು ಅದರಲ್ಲಿ ರೂ.34690.27 ಲಕ್ಷಗಳು ಖರ್ಚಾಗಿರುತ್ತದೆ. ಅಖಿಲ ಭಾರತ ಸಂಯೋಜಿತ ಸಂಶೋಧನಾ ಯೋಜನೆಗಳ ಅಡಿಯಲ್ಲಿ ಐಸಿಎಆರ್ ಮಂಜೂರು ಮಾಡಿದ ಬಂಡವಾಳ ವೆಚ್ಚದ ಕಾರಣದಿಂದ 2111.10 ಲಕ್ಷಗಳು (ರೂ.36801.37 – 34690.27 = 2111.10) ಲಭ್ಯವಿದೆ ಮತ್ತು ಹಣಕಾಸಿನ ವರ್ಷದ ಅಂತ್ಯದ ವೇಳೆಗೆ ಸಂಶೋಧನಾ ಯೋಜನೆಗಾಗಿ ಭಾರತ ಸರ್ಕಾರದ ಅನುದಾನವನ್ನು ಸ್ವೀಕರಿಸಲಾಗಿದೆ. ಇದು ಡಿಪಿಆರ್ ಪ್ರಕಾರ ಬದ್ಧ ಚಟುವಟಿಕೆಗಳಿಗಾಗಿ ಆರ್.ಕೆ.ವಿ.ವೈ. ಹಣವನ್ನು ಸಹ ಒಳಗೊಂಡಿದೆ. ಮುಂದಿನ ಹಣಕಾಸು ವರ್ಷಕ್ಕೆ ಅನುದಾನವನ್ನು ಮರು ಮೌಲ್ಯಮಾಪನ ಮಾಡಲಾಗುತ್ತದೆ ಮತ್ತು ಅದನ್ನು ಬಳಸಿಕೊಳ್ಳಲಾಗುತ್ತದೆ.

through crop cultivation, seed production & nursery activities, collection of student's fee, etc. During 2020-21, the total receipts for the University was Rs.36801.37 lakhs out of which the expenditure was Rs.34690.27 lakhs. The balance of Rs.2111.10 lakhs (Rs.36801.37 – 34690.27 = 2111.10) is available on account of capital expenditure sanctioned by ICAR under All India Coordinated Research projects and the grants were received by GOI for Research project during fag end of the financial year. It also includes funds by RKVY for committed activities as per the DPR. The grant is revalidated for the ensuing financial year and is utilized.

ಎಲ್ಲ ಆವರಣಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಮತ್ತು ನಿರ್ವಹಿಸಲು ಕೇಂದ್ರ ಕಚೇರಿಯಲ್ಲಿ ವಿಶ್ವವಿದ್ಯಾನಿಲಯವು ಆಸ್ತಿ ಕಚೇರಿಯನ್ನು ಹೊಂದಿದ್ದು ಆಸ್ತಿ ಅಧಿಕಾರಿಗಳು ಅದರ ಮುಖ್ಯಸ್ಥರಾಗಿದ್ದಾರೆ ಹಾಗೂ ಅವರ ಸಹಾಯಕ್ಕೆ ಕಾರ್ಯಕಾರಿ ಮತ್ತು ಸಹಾಯಕ ಕಾರ್ಯಕಾರಿ ಅಭಿಯಂತರರು ಎಲ್ಲಾ ಆವರಣಗಳಲ್ಲಿದ್ದಾರೆ. ಆಸ್ತಿ ಕಚೇರಿಯು ರಾಸಾಯನಿಕಗಳು, ಗಾಜಿನ ಸಲಕರಣೆಗಳು, ಉಪಕರಣಗಳು, ಲೇಖನ ಸಾಮಗ್ರಿ ಮುಂತಾದವುಗಳನ್ನು ಕೇಂದ್ರೀಕೃತ ಉಗ್ರಾಣ ಖರೀದಿ ಕಚೇರಿಯ ಮೂಲಕ ಖರೀದಿಸಲು ಟೆಂಡರಿಂಗ್ ವ್ಯವಸ್ಥೆ ಮಾಡುತ್ತದೆ.

In order to develop and maintain the infrastructure in all the campuses and at the Head quarters, the University has Estate Office headed by Estate Officer and supported by Executive and Assistant Executive Engineers. The Estate Office facilitates tendering for various activities like procurement of chemicals, glassware, equipment's, stationery, etc. through Centralized Store Purchase Office.

ಆಸ್ತಿ ಕಚೇರಿಯು ರಾಜ್ಯ ಸರ್ಕಾರದ ಅನುದಾನದಡಿಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಮತ್ತು ನವೀಕರಣ ಕಾರ್ಯಗಳೆಂದರೆ, ಜಿಕೆವಿಕೆಯ ನಾರ್ತ್ ಬ್ಲಾಕ್‌ನ ಕೃಷಿ ಕಾಲೇಜು ಕಟ್ಟಡದಲ್ಲಿ ಲಿಫ್ಟ್ ನಿರ್ಮಾಣ; ಜಿಕೆವಿಕೆಯ ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯದಲ್ಲಿ ಮಾದರಿಗಳು, ಜಿಕೆವಿಕೆ ಕ್ಯಾಂಪಸ್‌ನಲ್ಲಿ ರೆಕಾರ್ಡ್ ರೂಮ್ ನಿರ್ಮಾಣ; ಚಾಮರಾಜನಗರ ಕೃಷಿ ಕಾಲೇಜಿನಲ್ಲಿ ಕಾಂಪೌಂಡ್ ಗೋಡೆ ನಿರ್ಮಾಣ, ಚಾಮರಾಜನಗರ ಕೃಷಿ ಕಾಲೇಜಿನಲ್ಲಿ ಅಸ್ತಿತ್ವದಲ್ಲಿರುವ ಆಡಳಿತ ಕಟ್ಟಡದ ಮೇಲೆ ಮೊದಲ ಮಹಡಿಯ ನಿರ್ಮಾಣ ಮತ್ತು ಇತರೆ.

Infrastructure developed and renovation undertaken by the Estate Office under State grants includes; Construction of passenger lift at Agriculture College building (North Block), GKVK, Bengaluru; Models at Agricultural Sciences Museum, GKVK; Construction of Record Room at GKVK campus; Construction of compound wall at Agriculture College, Chamarajanagara; Construction of first floor over the existing admin building at Agriculture College, Chamarajanagar and others.

ಆಸ್ತಿ ಕಚೇರಿಯು ಐ.ಸಿ.ಎ.ಆರ್. ಅನುದಾನದಡಿಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಮತ್ತು ನವೀಕರಣ ಕಾರ್ಯಗಳೆಂದರೆ, ರಾಜ್ಯ ಸರ್ಕಾರದ ಪಾಲಿಗೆ ಹೆಚ್ಚುವರಿಯಾಗಿ ಮಂಡ್ಯದ ಕೃಷಿ ಕಾಲೇಜಿನಲ್ಲಿ ಬಾಲಕಿಯರ ಹಾಸ್ಟೆಲ್ ನಿರ್ಮಾಣ; ಹಾಸನದ ಕೃಷಿ ಕಾಲೇಜಿನಲ್ಲಿ ಬಾಲಕಿಯರ ಹಾಸ್ಟೆಲ್ ನಿರ್ಮಾಣ, ಜಿಕೆವಿಕೆಯ ಕೃಷಿ ಮಹಾವಿದ್ಯಾಲಯ, ಮಂಡ್ಯದ ಕೃಷಿ ಮಹಾವಿದ್ಯಾಲಯ, ಹಾಸನದ ಕೃಷಿ ಮಹಾವಿದ್ಯಾಲಯ ಮತ್ತು ಚಿಂತಾಮಣಿಯ ರೇಷ್ಮೆ ಕಾಲೇಜಿನಲ್ಲಿ ಬಾಲಕಿಯರ ಮತ್ತು ಬಾಲಕರ ವಸತಿ ನಿಲಯದ ದುರಸ್ತಿ ಮತ್ತು ನವೀಕರಣ, ಜಿಕೆವಿಕೆಯ ಸಭಾಂಗಣದಲ್ಲಿ ಪ್ರೊಜೆಕ್ಟರ್ ಪೂರೈಕೆ ಹಾಗೂ ಸ್ಥಾಪನೆ ಮತ್ತು ಇತರೆ. ಇದಲ್ಲದೆ, ಭಾರತ ಸರ್ಕಾರದ ಅನುದಾನದ ಅಡಿಯಲ್ಲಿ ಜಿಕೆವಿಕೆಯಲ್ಲಿ ಬೀಜ ಗೊಡೌನ್ ವಿಸ್ತರಣೆಯನ್ನು ತೆಗೆದುಕೊಳ್ಳಲಾಗುತ್ತದೆ.

Infrastructure developed and renovation undertaken by the Estate Office under ICAR grants includes; Construction of Girls Hostel at College of Agriculture, Mandya; Construction of Girls Hostel at College of Agriculture, Hassan in addition to State share; Repair and renovation of Girls and Boys Hostel at GKVK, College of Agriculture, Mandya, College of Agriculture, Hassan and College of Sericulture, Chintamani ; Supply and installation of projector at Auditorium, GKVK and others. In adittion, Extension of Seed Godown at NSP, GKVK is taken up for execution under GoI grants.

2019–20ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ಜಿಕೆವಿಕೆಯಲ್ಲಿ ಐಸಿಎಆರ್ ಎಸ್ಸಿ–ಎಸ್ಪಿ ಅಡಿಯಲ್ಲಿ ಕೌಶಲ್ಯ ಅಭಿವೃದ್ಧಿ ಕೇಂದ್ರವನ್ನು (ಎಸ್‌ಡಿಸಿ) ಸ್ಥಾಪಿಸಿದೆ. ಸುಮಾರು 30–50 ಫಲಾನುಭವಿಗಳಿಗೆ ಬೋರ್ಡಿಂಗ್ ಮತ್ತು ವಸತಿ ಸೌಲಭ್ಯಗಳೊಂದಿಗೆ ಕೌಶಲ್ಯ ಅಭಿವೃದ್ಧಿ ಕೇಂದ್ರದ ನಿರ್ಮಾಣವನ್ನು ಕೈಗೊಳ್ಳಲಾಗಿದೆ. ಕೇಂದ್ರವು ವಿಶ್ವವಿದ್ಯಾಲಯದ ಘಟಕಗಳೊಂದಿಗೆ ಜಂಟಿಯಾಗಿ ಅನೇಕ ಸಾಮರ್ಥ್ಯ ವೃದ್ಧಿ ಮತ್ತು ಇತರ ಕಾರ್ಯಕ್ರಮಗಳನ್ನು ಆಯೋಜಿಸಿದೆ.

The University has established Skill Development Center (SDC) under ICAR SC-SP at UAS GKVK, Bengaluru for the academic year 2019-20. Construction of Skill Development Centre with boarding & lodging facilities for 30-50 beneficiaries is undertaken. The Centre, has organized many capacity building and other programmes jointly with the units of University.

ಪ್ರೊಫೆಸರ್ ಎಂ.ಡಿ. ನಂಜುಂಡಸ್ವಾಮಿ ರಿಸರ್ಚ್ ಚೇರ್, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಅಧ್ಯಯನ ಕೇಂದ್ರ (ಸಿಎಆರ್‌ಡಿಎಸ್) ಮತ್ತು ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿಯ ರಿಸರ್ಚ್ ಚೇರ್‌ಗಳು ಕೋವಿಡ್–19 ಸಾಂಕ್ರಾಮಿಕ ಪರಿಸ್ಥಿತಿಯಡಿಯಲ್ಲಿ ಅನೇಕ ಚಟುವಟಿಕೆಗಳನ್ನೊಳಗೊಂಡಂತೆ ನೇರ ಮಾರುಕಟ್ಟೆ ಒದಗಿಸಿಕೊಡುವ ರೈತ ಆಧಾರಿತ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

Prof. M.D. Nanjundaswamy Research Chair, Centre for Agriculture and Rural Development Studies (CARDS) and Karnataka State Agricultural Marketing Board Chair established at UAS-B have conducted many activites under Covid-19 Pandemic situation covering research and farmer oriented programmes including promotion of direct marketing of farm produce.

ಐಸಿಎಆರ್‌ನ ರಾಷ್ಟ್ರೀಯ ಕೃಷಿ ಉನ್ನತ ಶಿಕ್ಷಣ ಯೋಜನೆಯ ಸೆಂಟರ್ ಫಾರ್ ಅಡ್ವಾನ್ಸ್ ಅಗ್ರಿಕಲ್ಚರಲ್ ಸೈನ್ಸಸ್ ಅಂಡ್ ಟೆಕ್ನಾಲಜಿ (ಸಿಎಎಎಸ್ಟಿ) ಕಾರ್ಯಕ್ರಮದ ಆಶ್ರಯದಲ್ಲಿ ಕೇಂದ್ರ ಸಲಕರಣೆ ಸೌಲಭ್ಯ (ಸಿಐಎಫ್) ಅನ್ನು ಐಸಿಎಆರ್‌ನ ಮಹಾನಿರ್ದೇಶಕರಾದ ಡಾ. ತ್ರಿಲೋಚನ್ ಮೋಹಪಾತ್ರರವರು ಮಾರ್ಚ್ 20, 2021 ರಂದು ಉದ್ಘಾಟಿಸಿದರು. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸಲು ಮತ್ತು ಗುಣಮಟ್ಟದ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಿಐಎಫ್ ಕೊಡುಗೆ ನೀಡುತ್ತದೆ, ಹೀಗಾಗಿ ವಿಶ್ವವಿದ್ಯಾನಿಲಯವು ಅಂತರರಾಷ್ಟ್ರೀಯ ಮಟ್ಟದಲ್ಲಿ ವೇಗವನ್ನು ಉಳಿಸಿಕೊಳ್ಳಲು ಸಹಾಯ ಮಾಡುತ್ತದೆ.

The Central Instrumentation Facility (CIF) under the aegis of the Centre for Advanced Agricultural Sciences and Technology (CAAST) program of the National Agricultural Higher Education Project (NAHEP) of ICAR was inaugurated by Dr. Trilochan Mohapatra, Director General, ICAR and Secretary (DARE), GoI on 20th March 2021. CIF would contribute for pursuing research in areas of modern science and technology and development of quality human resource, thus help UAS-B to keep pace internationally

ವಿಶ್ವವಿದ್ಯಾನಿಲಯದ 55ನೇ ಪ್ರತಿಷ್ಠಾಪನಾ ದಿನಾಚರಣೆಯನ್ನು 2020 ರ ನವೆಂಬರ್ 17 ರಂದು ಆಚರಿಸಲಾಯಿತು. ಮಾನ್ಯ ಶ್ರೀ ಬಿ.ಸಿ. ಪಾಟೀಲ್, ಕರ್ನಾಟಕ ಸರ್ಕಾರದ ಕೃಷಿ ಸಚಿವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಿಂಗಪುರದ ಟೇಸ್ಟಿ ಬೈಟ್ ಈಟಲ್ಸ್ ಲಿಮಿಟೆಡ್‌ನ ಅಧ್ಯಕ್ಷ ಡಾ. ಅಶೋಕ್ ವಾಸುದೇವನ್ ಈ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಕುಲಪತಿಗಳಾದ ಡಾ. ಎಸ್. ರಾಜೇಂದ್ರ ಪ್ರಸಾದ್ ವಹಿಸಿದ್ದರು. ಗೌರವಾನ್ವಿತ ಆಡಳಿತ ಮಂಡಳಿ ಸದಸ್ಯರು, ಆಚರಣೆಯಲ್ಲಿ ಭಾಗವಹಿಸಿದ್ದರು. ಶ್ರೀಮತಿ ನಾಗಮ್ಮ ದತ್ತಾತ್ರೇಯ ರಾವ್ ದೇಸಾಯಿ ಪ್ರಶಸ್ತಿ; ಡಾ. ಕಾಳಯ್ಯ ಕೃಷ್ಣಮೂರ್ತಿ ರಾಷ್ಟ್ರೀಯ ಪ್ರಶಸ್ತಿ; ಮೆ. ಜುವಾರಿ ಇಂಡಸ್ಟ್ರೀಸ್ ಲಿಮಿಟೆಡ್ ಅತ್ಯುತ್ತಮ ವಿಸ್ತರಣೆ ಕಾರ್ಮಿಕ ಪ್ರಶಸ್ತಿ; ಅತ್ಯುತ್ತಮ ಸೇವಾ ಸಿಬ್ಬಂದಿ ಪ್ರಶಸ್ತಿ ಮತ್ತು ಅತ್ಯುತ್ತಮ ಕೃಷಿಮೇಳವನ್ನು 2020ರ ನವೆಂಬರ್ 11 ರಿಂದ 13ರವರೆಗೆ ಜಿಕೆವಿಕೆಯಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಭೌತಿಕವಾಗಿ ಮತ್ತು ಡಿಜಿಟಲ್ ರೂಪದಲ್ಲಿ ಆಯೋಜಿಸಿದ ಪರಿ ಇತರ ವಿಶ್ವವಿದ್ಯಾಲಯಗಳಿಗೆ ಮಾದರಿಯಾಗಿತ್ತು.

modules with fully-functional library software-acquisition, serials, members, circulation, cataloguing, reports, and tools. RFID library management, using RFID tags library, is easy and convenient. A RFID library management system consists of books, each attached with an RFID tag, RFID reader, computer network and software. Ezproxy is a web proxy server used by libraries to give access from outside the library's computer network to restricted-access websites that authenticate users by IP address, all their new technologies to keep pace with the growing information needs of the users community to provide better information services. University Library is reaching 24/7 all over the Globe through its website *www.uasbagrilibindia.org*. / https://www.uasbangalore.edu.in/index.php/library-en

Library will function between 8.30 to 12.00 Midnight from Monday to Friday from 8:30 a.m. to 6:00 p.m. on Saturday and from 9.00 a.m. to 1.00 p.m. on Sundays.

2.13.1 Library Sub-Committee

The Library Sub-Committee meets on the need based issues under the Chairmanship of Dean (Post Graduate Studies) at GKVK and Dean's at other constituent colleges,Library Sub-Committee reviews and recommends for procurement of new books and subscription of new Journals.

2.13.2 Acquisition of Books and Periodicals

Books : During the year 2020-21, a total Book's of 4126 titles were procured using funds made available by the State Government and ICAR grants. These titles include current titles, serials like; annual reviews and advances. The following Tables provide the details of books and other collections added to the Library.

ಕೋಷ್ಟಕ 13 : ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ 2020–21ರ ಸಾಲಿನಲ್ಲಿ ಹೊಸದಾಗಿ ಸೇರ್ಪಡೆಗೊಂಡ ಪುಸ್ತಕಗಳು

Table 13 : Details of new additions to UAS-B Libraries during the year 2020-21

ಕ್ರ.ಸಂ. Sl. No	ವಿವರಗಳು / Particulars	ಜಿಕೆವಿಕೆ ಆವರಣ/ GKVK Campus	ಕೃಷಿ ಕಾಲೇಜು, ಹಾಸನ/ CoA Hassan	ಕೃಷಿ ಕಾಲೇಜು, ಮಂಡ್ಯ/ CoA, Mandya	ಕೃಷಿ ಕಾಲೇಜು, ಚಿಂತಾಮಣಿ / CoS, Chintamani	ಕೃಷಿ ಕಾಲೇಜು, ಚಾಮರಾಜನಗರ / CoA, Chamarajanagar	ಒಟ್ಟು / Total
1.	ಖರೀದಿಸಿದ ಪುಸ್ತಕಗಳು Purchase (Books)	3920	883	859	621	782	7065
2.	ಕೊಡುಗೆ ಪುಸ್ತಕಗಳು Gift Books	1311	04	43	51	174	1583
3.	ಕರಪತ್ರಗಳು Pamphlets	117	12	98	20	-	247
4.	ಪ್ರಬಂಧಗಳು/ ಮಹಾ ಪ್ರಬಂಧಗಳು Thesis/Dissertations	306	0	21	01	-	328
5.	ವರದಿಗಳು Reports	150	06	09	-	-	165
6.	ನಿಯತಕಾಲಿಕೆಗಳ ಸಂಪುಟಗಳು Bound Volumes of Periodicals	1040	0	-	-	-	1040
7.	ಇ–ಪುಸ್ತಕಗಳು/ಸಿ.ಡಿ.ಗಳು e-Books/CDs	89	06	-	14	-	109
8.	ಇ–ನಿಯತಕಾಲಿಕಗಳು e-Journals	-	0	-	-	-	-
	ಒಟ್ಟು /Total	**6933**	**911**	**1030**	**707**	**956**	**10537**

ಕೋಷ್ಟಕ 14: 31ನೇ ಮಾರ್ಚ್, 2021ರಂದು ವಿಶ್ವವಿದ್ಯಾನಿಲಯ ಗ್ರಂಥಾಲಯದಲ್ಲಿದ್ದ ಪುಸ್ತಕಗಳು ಮತ್ತು ಇತರೆ ನಿಯತಕಾಲಿಕೆಗಳ ವಿವರಗಳು

Table 14: Details of books and other periodicals in the University libraries as on 31st March, 2021

ಕ್ರ.ಸಂ. / Sl. No.	ವಿವರಗಳು / Particulars	ಜಿಕೆವಿಕೆ ಗ್ರಂಥಾಲಯ/ GKVK Library	ಕೃಷಿ ಕಾಲೇಜು, ಹಾಸನ ಗ್ರಂಥಾಲಯ /CoA, Hassan Library	ಕೃಷಿ ಕಾಲೇಜು, ಮಂಡ್ಯ ಗ್ರಂಥಾಲಯ/ CoA, Mandya Library	ಕೃಷಿ ಕಾಲೇಜು, ಚಿಂತಾಮಣಿ ಗ್ರಂಥಾಲಯ/CoS, Chintamani Library	ಕೃಷಿ ಕಾಲೇಜು, ಚಾಮರಾಜನಗರ ಗ್ರಂಥಾಲಯ/ CoA, Chamarajanagara Library	ಒಟ್ಟು / Total
1	ಪುಸ್ತಕಗಳು (ಹಿಂದಿನ ಸಂಚಿಕೆಗಳು ಸೇರಿ) Books (including Back Volumes)	130485	20687	19555	12707	1582	185831
2	ಕರಪತ್ರಗಳು Pamphlets	8753	164	98	1291	-	10306
3	ಕೊಡುಗೆ ಪುಸ್ತಕಗಳು Gift Books	13552	816	990	1918	870	18145
4	ಪ್ರಬಂಧಗಳು/ಮಹಾ ಪ್ರಬಂಧಗಳು Thesis / Dissertations	12456	0	262	68	-	12786
5	ವರದಿಗಳು Reports	17180	152	724	241	-	18297
6	ಮೈಕ್ರೊ ಫಿಲ್ಮ್ಸ್ Microfilms	04	0	-	-	-	04
7	ಮೈಕ್ರೊ ಫಿಶ್ಚ್ Microfiche	53	0	-	-	-	53
8	ನಕ್ಷೆಗಳು Maps	60	157	10	-	-	227
9	ಸಿಡಿ ರಾಮ್/ಡಿವಿಡಿಗಳು/ಸಿಡಿಗಳು CD ROM's/DVD's/CDs	371	227	314	167	-	1079
10	ಇ–ಪುಸ್ತಕಗಳು e-Books	253	29	18	20	-	320
11	ಇ–ಪತ್ರಿಕೆಗಳು e-Journals	18	-	-	-	-	18
	ಒಟ್ಟು / Total	**183185**	**22232**	**21971**	**16412**	**2452**	**247066**

ನಿಯತಕಾಲಿಕೆಗಳು

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಗ್ರಂಥಾಲಯವು ಚಂದದಾರಿಕೆ, ಕೊಡುಗೆ ಮತ್ತು ವಿನಿಮಯ ಆಧಾರದ ಮೇಲೆ 2020–21ನೇ ಸಾಲಿನಲ್ಲಿ ಪಡೆದ ಪತ್ರಿಕೆಗಳ ವಿವರ ಈ ಮುಂದಿನಂತಿದೆ:

Periodicals

UASB Libraries has received Journals on subscription, gift and exchange basis during the Year 2020-21 as detailed below:

ಕೋಷ್ಟಕ 15 : ಗ್ರಂಥಾಲಯದಲ್ಲಿನ ಬೇರೆ ನಿಯತಕಾಲಿಕೆಗಳ ವಿವರ

Table 15 : Details of other periodicals in the university libraries

ಕ್ರ.ಸಂ. / Sl. No.	ವಿವರಗಳು / Particulars	ಜಿಕೆವಿಕೆ ಗ್ರಂಥಾಲಯ/ GKVK Library	ಕೃಷಿ ಕಾಲೇಜು, ಮಂಡ್ಯ ಗ್ರಂಥಾಲಯ/ CoA, Mandya Library	ಕೃಷಿ ಕಾಲೇಜು, ಚಿಂತಾಮಣಿ ಗ್ರಂಥಾಲಯ/CoS, Chintamani Library	ಒಟ್ಟು / Total
1.	ವಿದೇಶಿ ಪತ್ರಿಕೆಗಳು–ಚಂದಾದಾರಾಗಿ Subscription of Foreign Journals	03	-		03
2.	ಭಾರತೀಯ ಪತ್ರಿಕೆಗಳು–ಚಂದಾದಾರಾಗಿ Subscription of Indian Journals	10	-	16	26
3.	ಕೊಡುಗೆಯಾಗಿ ಪಡೆದ ಪತ್ರಿಕೆಗಳು Journals received on Gift	23	03	05	31
4.	ವಿನಿಮಯದಿಂದ ಪಡೆದ ಪತ್ರಿಕೆಗಳು Journals received on Exchange	14	-	-	14
5.	ಮುದ್ರಣ ಮತ್ತು ಆನ್‌ಲೈನ್ ಪತ್ರಿಕೆಗಳು Print and Online Journals	-	-	-	-
6.	ಇ–ಪತ್ರಿಕೆಗಳು e-Journals	-	-	-	-
	ಒಟ್ಟು / Total	**50**	**03**	**21**	**74**

*ಬಹುಪಾಲು ಎಲ್ಲಾ ಭಾರತೀಯ ಪತ್ರಿಕೆಗಳು ಸೆರಾನಲ್ಲಿ (CeRA) ಉಚಿತವಾಗಿ ಲಭ್ಯವಿವೆ.
*Most of the Indian Journals are available on CeRA on free of cost

2.13.3 ಗ್ರಂಥಾಲಯದಲ್ಲಿನ ಇ–ಸಂಪನ್ಮೂಲಗಳು/Library e-Resources

ಕೋಷ್ಟಕ 16 : ಗ್ರಂಥಾಲಯದಲ್ಲಿನ ಇ–ಸಂಪನ್ಮೂಲಗಳ ವಿವರ

Table 16 : Details of e–Resourcess in the libraries

ಕ್ರ.ಸಂ. / Sl. No.	ವಿವರಗಳು / Particulars	ಜಿಕೆವಿಕೆ ಗ್ರಂಥಾಲಯ/ GKVK Library	ಕೃಷಿ ಕಾಲೇಜು, ಹಾಸನ ಗ್ರಂಥಾಲಯ /CoA, Hassan Library	ಕೃಷಿ ಕಾಲೇಜು, ಮಂಡ್ಯ ಗ್ರಂಥಾಲಯ/ CoA, Mandya Library	ಕೃಷಿ ಕಾಲೇಜು, ಚಿಂತಾಮಣಿ ಗ್ರಂಥಾಲಯ/CoS, Chintamani Library	ಕೃಷಿ ಕಾಲೇಜು, ಚಾಮರಾಜನಗರ ಗ್ರಂಥಾಲಯ/CoA, Chamarajanagara Library
1.	ಇಂಡಿಯಸ್ಟ್ಯಾಟ್.ಕಾಂ (ಅನ್‌ಲೈನ್ ಪತ್ರಿಕೆಗಳು) Indiastat.com (on-Line Journal)	01	Linked with Cera	Linked with Cera	Linked with Cera	Linked with Cera
2.	ಸಿ.ಆರ್.ಸಿ.ನೆಟ್ ಇ–ಪುಸ್ತಕಗಳು CRC NET, e-Books	2010-2019	Accessing through University/ Library Website	Accessing through University/ Library Website	Accessing through University/ Library Website	Accessing through University/ Library Website
3.	ಇ–ಪುಸ್ತಕಗಳು (ಜೋನ್ ವಿಲೆ) e-Books (John Wiley)	22 Titles 2012	-do-	-do-	-do-	-do-
4.	ಇ–ಪುಸ್ತಕಗಳು (ಭಾರತೀಯ ಆವೃತ್ತಿ) e-Books (Indian Edition)	211 titles	-do-	-do-	20 titles (2018)	-do-
5.	ಡೈರೆಕ್ಟರಿ ಆಫ್ ಓಪನ್ ಆಕ್ಸಸ್ ಪತ್ರಿಕೆಗಳು Directory of Open Access Journals (DOAJ)	Open Source	Open Source	Open Source	Open Source	Open Source

ಕ್ರ.ಸಂ. / Sl. No.	ವಿವರಗಳು / Particulars	ಜಿಕೆವಿಕೆ ಗ್ರಂಥಾಲಯ/ GKVK Library	ಕೃಷಿ ಕಾಲೇಜು, ಹಾಸನ ಗ್ರಂಥಾಲಯ /CoA, Hassan Library	ಕೃಷಿ ಕಾಲೇಜು, ಮಂಡ್ಯ ಗ್ರಂಥಾಲಯ/ CoA, Mandya Library	ಕೃಷಿ ಕಾಲೇಜು, ಚಿಂತಾಮಣಿ ಗ್ರಂಥಾಲಯ/CoS, Chintamani Library	ಕೃಷಿ ಕಾಲೇಜು, ಚಾಮರಾಜನಗರ ಗ್ರಂಥಾಲಯ/CoA, Chamarajanagara Library
6.	ಎಮರಾಲ್ಡ್ ಮ್ಯಾನೇಜ್‌ಮೆಂಟ್ ಪತ್ರಿಕೆಗಳು Emerald Management Journals	2009-2014				
7.	ಆಫ್ ಲೈನ್ ಡಾಟಾ ಬೇಸ್‌ಗಳು Offline databases (CD ROM's/DVD)	4 CD		314	167	
8.	ಇ-ಪುಸ್ತಕಗಳು ಟೇಲರ್ ಮತ್ತು ಫ್ರಾನ್ಸಿಸ್ e-books Taylor & Francis	49 titles 201				
9.	ಏಜಿಆರ್‌ಐಎಸ್ AGRIS	from 1975-8 to 1999-200				
10.	ಬ್ರಿಟಾನಿಯಾ ಎನ್‌ಸೈಕ್ಲೋಪಿಡಿಯಾ Britannica Encyclopaedia	6 CD				
11.	ಕ್ಯಾಬ್ ಸಿಡಿ CAB CD	1994-2009				
12.	ಸಿಐಎಆರ್‌ಎಲ್-ಬಿಆರ್‌ಎಸ್ CIARL-BRS	1962-86				
13.	ತೋಟಗಾರಿಕಾ ಸಿಡಿ HORT CD	1973-2004				
14.	ಪಶುವೈದ್ಯಕೀಯ ಸಿಡಿ VET CD	1973-2004		Accessing through University / Library Website		
15.	ಮ್ಯಾಪ್‌ಸೋಫಿಂಡೀಯಾ.ಕಾಮ್ ಸಿಡಿ Mapsofindia.com CD	2001				
16.	ಕೃಷಿ ಮತ್ತು ಪರಿಸರ ಶಿಕ್ಷಣ ಸಿಡಿ Agriculture & Environmental Education CD	1978-2006				
17.	ಜೀವಶಾಸ್ತ್ರ ಸಾರಾಂಶದ ಡಿವಿಡಿ Biological Abstracts on DVD	2008-2013				
18.	ಕೃಷಿ ಮತ್ತು ಪಶುಸಂಗೋಪನೆ ಡಿವಿಡಿ ಮಾದರಿ Agriculture & Animal Husbandary DVD Format	1-81				
19.	ಜೈವಿಕ ತಂತ್ರಜ್ಞಾನದ ಸಾರಾಂಶದ ಸಿಡಿ-ಆರ್‌ಓಎಮ್ Biotechnology Abstracts CD-ROM	2008-2011				
20.	ಕ್ಯಾಬ್ ಇ-ಪುಸ್ತಕ (ಆನ್-ಲೈನ್) CAB e-BOOK (On-line)	2009-2017				
21.	ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ಸಾರಾಂಶಗಳು (ಎಫ್‌ಎಸ್‌ಟಿಎ) Food Science and technology Abstracts (FSTA)	2008-2014				

2.13.4 ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಇ–ಸಂಪನ್ಮೂಲಗಳು/Library e-Resources of ICAR

ಕೋಷ್ಟಕ 17: ಗ್ರಂಥಾಲಯದಲ್ಲಿನ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಇ–ಸಂಪನ್ಮೂಲಗಳ ವಿವರ

Table 17 : Details of ICAR e-Resources available in the UAS-B Libraries

ಕ್ರ.ಸಂ. Sl. No	ವಿವರಗಳು / Particulars	ಜಿಕೆವಿಕೆ ಆವರಣ/ GKVK Campus	ಕೃಷಿ ಕಾಲೇಜು, ಹಾಸನ/ CoA Hassan	ಕೃಷಿ ಕಾಲೇಜು, ಮಂಡ್ಯ/ CoA, Mandya	ಕೃಷಿ ಕಾಲೇಜು, ಚಿಂತಾಮಣಿ / CoS, Chintamani	ಕೃಷಿ ಕಾಲೇಜು, ಚಾಮರಾಜನಗರ / CoA, Chamarajanagar
1.	ಸೆರಾ ಮತ್ತು ಜೆ–ಗೇಟ್ ಪ್ಲಸ್ ಆನ್‌ಲೈನ್ ಪತ್ರಿಕೆಗಳು (ಸಂಪೂರ್ಣ ಪಠ್ಯ) CeRA and J-Gate Plus online journals • Full Text- • Library Subscription • Open Access	4,000+	Linked with Cera	Linked with Cera	Linked with Cera	Linked with Cera
2.	ಸೆರಾದಿಂದ ಎಲ್ಸಿವಿಯರ್ ಇ–ಪುಸ್ತಕಗಳು Elsevier e-Books from CeRA	1174	Accessing through University/ Library Website	Accessing through University/ Library Website	Accessing through University/ Library Website	Accessing through University/ Library Website

2.13.5 ಪ್ರಸರಣೆ : ಈ ಮುಂದಿನ ಕೋಷ್ಟಕಗಳಲ್ಲಿ ಪರಿಚಲನೆ ವಿಬಾಗದ ಚಟುವಟಿಕೆಗಳ ವಿವರಗಳನ್ನು ನೀಡಲಾಗಿದೆ

2.13.5 Circulation : Activities related to circulation in depicted in the following tables

ಕೋಷ್ಟಕ 18: 2020–21ರ ಸಾಲಿನಲ್ಲಿ ಸದಸ್ಯತ್ವ ಪಡೆದವರ ವಿವರ (ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ)

Table 18 : Status of Membership (Students & Staff) during 2020-21

ಕ್ರ.ಸಂ. /Sl. No.	ವಿವರಗಳು / Particulars	ಜಿಕೆವಿಕೆ ಗ್ರಂಥಾಲಯ/ GKVK Library	ಕೃಷಿ ಕಾಲೇಜು, ಹಾಸನ ಗ್ರಂಥಾಲಯ/ CoA, Hassan Library	ಕೃಷಿ ಕಾಲೇಜು, ಮಂಡ್ಯ ಗ್ರಂಥಾಲಯ/ CoA, Mandya Library	ಕೃಷಿ ಕಾಲೇಜು, ಚಿಂತಾಮಣಿ ಗ್ರಂಥಾಲಯ/ CoS, Chintamani Library	ಕೃಷಿ ಕಾಲೇಜು, ಚಿಂತಾಮಣಿ ಗ್ರಂಥಾಲಯ/CoA, Chamarajanagara Library	ಒಟ್ಟು / Total
1.	ಬಿ.ಎಸ್ಸಿ.(ಆನರ್ಸ್) ಕೃಷಿ/B.Sc. (Hons.) Agri.	1091	406	414	356	32	2299
2.	ಬಿ.ಎಸ್ಸಿ.(ಆನರ್ಸ್) ಕೃಷಿ ಮಾರಾಟ ಮತ್ತು ವ್ಯವಹಾರ ನಿರ್ವಹಣೆ B.Sc.(Hons.) Agril. Marketing & Business Mangement	230	-	-	-	-	230
3.	ಬಿ.ಟೆಕ್.(ಕೃಷಿ ಎಂಜಿನಿಯರಿಂಗ್/B.Tech. (Agri.Engg.)	284		-	-	-	284
4.	ಬಿ.ಟೆಕ್.(ಜೈವಿಕ ತಂತ್ರಜ್ಞಾನ)/B.Tech. (Biotechnology)	Nil	245	-	-	-	245
5.	ಬಿ.ಟೆಕ್.(ಆಹಾರ ತಂತ್ರಜ್ಞಾನ)/B.Tech.(Food Tech.)	Nil	257	-	-	-	257
6.	ಬಿ.ಎಸ್ಸಿ.(ಆನರ್ಸ್) ರೇಷ್ಮೆ ಕೃಷಿ/B.Sc.(Hons.) Seri.	Nil	-		122	-	122
7.	ಎಂ.ಎಸ್ಸಿ., ಎಂ.ಬಿ.ಎ, ಎಂ.ಟೆಕ್.(ಕೃಷಿ ಇಂಜಿ.) M.Sc., MBA, M.Tech. (Agri. Engg.)	608	-	55	-	-	663
8.	ಪಿಹೆಚ್.ಡಿ./Ph.D.	342	-	-	-	-	342
9.	ಕೃಷಿಯಲ್ಲಿ ಡಿಪ್ಲೊಮಾ/Diploma in Agriculture	Nil	-	99	8	-	107
10.	ಸಿಬ್ಬಂದಿ(ಬೋಧಕರು ಮತ್ತು ಬೋಧಕೇತರರು) Staff (Teaching & Non-Teaching)	951	52	72	44	2	1121
	ಒಟ್ಟು / Total	**3506**	**960**	**640**	**530**	**34**	**5670**

ಕೋಷ್ಟಕ 19: ವಿಶ್ವವಿದ್ಯಾನಿಲಯದ ಗ್ರಂಥಾಲಯಗಳ ಬಳಕೆ
Table 19 : Usage of the Libraries of UAS, Bangalore

ಕ್ರ.ಸಂ. /Sl. No.	ವಿವರಗಳು / Particulars	ಜಿಕೆವಿಕೆ ಗ್ರಂಥಾಲಯ/ GKVK Library	ಕೃಷಿ ಕಾಲೇಜು, ಹಾಸನ ಗ್ರಂಥಾಲಯ/ CoA, Hassan Library	ಕೃಷಿ ಕಾಲೇಜು, ಮಂಡ್ಯ ಗ್ರಂಥಾಲಯ/ CoA, Mandya Library	ಕೃಷಿ ಕಾಲೇಜು, ಚಿಂತಾಮಣಿ ಗ್ರಂಥಾಲಯ/ CoS, Chintamani Library	ಕೃಷಿ ಕಾಲೇಜು, ಚಾಮರಾಜನಗರ ಗ್ರಂಥಾಲಯ/CoA, Chamarajanagara Library	ಒಟ್ಟು/ Total
1.	ಪುಸ್ತಕಗಳ ಸಮಾಲೋಚನೆ Books Consulted	15605	9818	16340	3950	274	45987
2.	ವರಿದಗಳ ಸಮಾಲೋಚನೆ Reports Consulted	3972	438	-	59	-	4469
3.	ಮಹಾ ಪ್ರಬಂಧಗಳ ಸಮಾಲೋಚನೆ Theses Consulted	4937	-	217	73	-	5227
4.	ಇತರೆ ಪ್ರಕಟಣೆಗಳ ಸಮಾಲೋಚನೆ Other Publications Consulted	1843	250	-	417	-	2510
5.	ಪುಸ್ತಕಗಳ ವಿತರಣೆ Books Issued	(Staff) 518	556	137	-	-	
		(Student) 2147	2055	1281	2367	84	9145
		Total 2665	2611	1418			
6.	ಅಂತರ ಗ್ರಂಥಾಲಯಗಳ ಎರವಲು/Inter-Library Loan						
	ಅ) ಎರವಲು ಪಡೆದಿದ್ದು/Lent In	10	-	-	-	-	10
	ಆ) ಎರವಲು ನೀಡಿದ್ದು/Lent Out	10	-	-	-	-	10
7.	ಪರಿಚಯ ಪತ್ರಗಳು/Introductory Letters	19	-	-	-	-	19
8.	ಭೇಟಿಗಳು/Visits	58777	8112	-	6120	-	73009
9.	ಪರಾಮರ್ಶನೆಗೆ ಒಪ್ಪಿಗೆ Consultations Permitted	25		-	-	-	25
10.	ಮಾಡಿದ ಸಂಗ್ರಹ (ರೂ.ಗಳಲ್ಲಿ) Collections made (in Rs.)						
	ಅ) ಬಾಕಿ ಶುಲ್ಕ/Overdue Charges	16768.00	4856.00	4313.00	5198.00	182.00	31317.00
	ಆ) ಕಳೆದುಹಾಕಿದ ಪುಸ್ತಕಗಳ ಬೆಲೆ ವಸೂಲಿ Book Lost Cost Recovered	3102.00	450.00	-	-	-	3552.00
	ಇ) ಹೊರಗಿನವರಿಂದ ಸಮಾಲೋಚನೆ ಶುಲ್ಕ Outsiders Consultation Charges	2650.00	-	-	-	-	2650.00
	ಈ) ಗುರುತಿನ ಕಾರ್ಡ್‌ಗಳು/I.D. Cards	57430.00	4000.00		-	-	61430.00
	ಉ) ಪಠ್ಯಪುಸ್ತಕ ಬ್ಯಾಂಕ್/Text Book Bank Fee	-	-	820.00	-	-	820.00
	ಒಟ್ಟು / Total	**79950.00**	**9306.00**	**5133.00**	**5198.00**	**182.00**	**99769.00**

ಕೋಷ್ಟಕ 20 : ಸಾಮಾನ್ಯ ನಿಧಿಯಡಿಯಲ್ಲಿ ಪಠ್ಯಪುಸ್ತಕ ಬ್ಯಾಂಕ್ ಮೂಲಕ ಒದಗಿಸಿದ ಸೇವೆಗಳ ವಿವರಗಳು

Table 20 : Text Book Bank under general fund - Details of Text Book Bank at University Library

ಕ್ರ.ಸಂ. / Sl. No.	ವಿವರಗಳು / Particulars	ಜಿಕೆವಿಕೆ ಗ್ರಂಥಾಲಯ / GKVK Library	ಕೃಷಿ ಕಾಲೇಜು, ಮಂಡ್ಯ ಗ್ರಂಥಾಲಯ / CoA, Mandya Library	ಒಟ್ಟು / Total
1.	ಒಟ್ಟು ಸಂಗ್ರಹ Total Collections	805	986	1791
2.	ಒಟ್ಟು ಸದಸ್ಯರು No. of Members	-	469	469
3.	ಪುಸ್ತಕಗಳ ವಿತರಣೆ Books Issued	-	164	164
4.	ಸಂಗ್ರಹವಾದ ಮೊತ್ತ (ರೂ.ಗಳಲ್ಲಿ) Amount Collected (Rs.)	-	820.00	820.00

ಕೋಷ್ಟಕ 21: ಪ.ಜಾ/ಪ.ಪಂ. ನಿಧಿಯಡಿಯಲ್ಲಿ ಪುಸ್ತಕಗಳ ಬ್ಯಾಂಕ್ ವಿವರಗಳು

Table 21 : Details of Book Bank under SC/ST fund

ಕ್ರ.ಸಂ. /Sl. No.	ವಿವರಗಳು / Particulars	ಜಿಕೆವಿಕೆ ಗ್ರಂಥಾಲಯ/ GKVK Library	ಕೃಷಿ ಕಾಲೇಜು, ಹಾಸನ ಗ್ರಂಥಾಲಯ /CoA, Hassan Library	ಕೃಷಿ ಕಾಲೇಜು, ಮಂಡ್ಯ ಗ್ರಂಥಾಲಯ /CoA, Mandya Library	ಕೃಷಿ ಕಾಲೇಜು, ಚಿಂತಾಮಣಿ ಗ್ರಂಥಾಲಯ/ CoS, Chintamani Library	ಒಟ್ಟು/ Total
1.	ಒಟ್ಟು ಸಂಗ್ರಹ Total Collections	3017	1406	1122	654	6199
2.	ಸದಸ್ಯರ ಸಂಖ್ಯೆ No. of Members (UG 77, PG 73, Ph.D. 59)	209	179	64	21	473
3.	ಪುಸ್ತಕಗಳ ವಿತರಣೆ Books Issued	40	16	16	13	85

2.13.6 ದಾಖಲಾತಿ ಮತ್ತು ರಿಪ್ರೊಗ್ರಾಫಿಕ್ ಸೇವೆಗಳು

2020–21ರ ಸಾಲಿಗೆ ಕೃ.ವಿ.ವಿ. ಮಹಾ ಪ್ರಬಂಧಗಳನ್ನು ಅನುಕ್ರಮವಾಗಿ ಪಟ್ಟಿಮಾಡಿ ಪರಿಷ್ಕರಿಸಿ ಗ್ರಂಥಾಲಯ ತಂತ್ರಾಂಶ ಕೆ.ಓ.ಎಂ.ಎ.ಗೆ ಸೇರಿಸಲಾಗಿದೆ. 2020–21ನೇ ಸಾಲಿನಲ್ಲಿ ಗ್ರಂಥಾಲಯವು ಒದಗಿಸಿದ ರಿಪ್ರೋಗ್ರಾಫಿಕ್, ಸಿ.ಡಿ.ರಾಮ್ ಮತ್ತು ಅಂತರಜಾಲ ಸೇವೆಗಳ ವಿವರಗಳನ್ನು ಕೋಷ್ಟಕದಲ್ಲಿ ನೀಡಲಾಗಿದೆ.

2.13.6 Documentation and Reprographic Services

Catalogue of theses of UAS-B has been up-dated for the year 2020-21 and added to the Library software KOHA. Following Table gives the details of Reprographic, CD-Rom and Internet services provided to the users during the year 2020-21.

ಕೋಷ್ಟಕ 22: ಕಂಪ್ಯೂಟರ್/ರಿಪ್ರೋಗ್ರಾಫಿಕ್ ಸೇವೆಗಳು ಮತ್ತು ಪಡೆದವರ ಸಂಖ್ಯೆ

Table 22 : Computer/Reprographic Services and Number of Users

ಕ್ರಸಂ. /Sl. No.	ವಿವರಗಳು / Particulars	ಜಿಕೆವಿಕೆ ಗ್ರಂಥಾಲಯ/ GKVK Library	ಕೃಷಿ ಕಾಲೇಜು, ಹಾಸನ ಗ್ರಂಥಾಲಯ/ CoA, Hassan Library	ಕೃಷಿ ಕಾಲೇಜು, ಮಂಡ್ಯ ಗ್ರಂಥಾಲಯ/ CoA, Mandya Library	ಕೃಷಿ ಕಾಲೇಜು, ಚಿಂತಾಮಣಿ ಗ್ರಂಥಾಲಯ/ CoS, Chintamani Library	ಕೃಷಿ ಕಾಲೇಜು, ಚಾಮರಾಜನಗರ ಗ್ರಂಥಾಲಯ/ CoA, Chamarajanagar Library	ಒಟ್ಟು / Total
1.	ಸಿಡಿ–ರಾಮ್ ಡೇಟಾಬೇಸ್ ಬಳಸಿದವರು (ಸಿಎ,ಜೀವಶಾಸ್ತ್ರ ಸಾರಲೇಖಗಳು, ಎಫ್ಎಸ್‌ಟಿಎ ಜೈವಿಕ ತಂತ್ರಜ್ಞಾನ ಸಾರಲೇಖಗಳು Users of CD-ROM Databases (CA, Biological Abstract, FSTA, Biotechnology Abstracts	771	90	21	-	-	882
2.	ಡೇಟಾಬೇಸ್‌ನಿಂದ ಡೌನ್‌ಲೋಡ್ ಮಾಡಿದ ಆಧಾರ ಗ್ರಂಥಗಳು References downloaded from Databases	02	-	-	-	-	02
3.	ಸೆರಾ CERA:						
	ಅ) ಸ್ವೀಕರಿಸಿದ ಕೋರಿಕೆಗಳು a) Request Received	-	-	12	-	-	12
	ಆ) ರವಾನೆ ಕೋರಿಕೆಗಳು b) Request sent	-	-	-	-	-	-
4.	ಕೃಷಿ ಪ್ರಭಾ Krishiprabha:						
	ಅ) ಇ–ಮೇಲ್ ಮೂಲಕ ಕಳುಹಿಸಿದ ಮಹಾ ಪ್ರಬಂಧಗಳ ಸಂಖ್ಯೆ a) No. of Theses sent on e-Mail	Nil	-	12	-	-	12
	ಆ) ಸಿ.ಡಿ./ಡಿ.ವಿ.ಡಿ. ಮಾದರಿಯಲ್ಲಿ ಕಳುಹಿಸಿದ ಪಿಹೆಚ್.ಡಿ. ಮಹಾ ಪ್ರಬಂಧಗಳ ಸಂಖ್ಯೆ b) No. of Ph.D. Theses sent on CD/DVD format	Nil	-	-	-	-	-
5.	ರಿಪ್ರೊಗ್ರಫಿಕ್ ಸೇವೆಗಳು Reprographic Services						
	ಅ) ಜೆರಾಕ್ಸ್ a) Xerox	455	-	-	517	1361	2333
	ಒಟ್ಟು / Total	**1228**	**90**	**45**	**517**	**1361**	**3241**

ಕೋಷ್ಟಕ 23: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ ಮತ್ತು ಕೃಷಿ ವಿಶ್ವವಿದ್ಯಾನಿಲಯದ ಇತರೆ ಕಾಲೇಜು ಗ್ರಂಥಾಲಯಗಳ ಒಟ್ಟು ಸಂಪನ್ಮೂಲಗಳು

Table 23 : Overall Resources at GKVK and Constituent College Libraries of the University of Agricultural Sciences, Bangalore

ಕ್ರಸಂ. /Sl. No.	ವಿವರಗಳು / Particulars	ಜಿಕೆವಿಕೆ ಗ್ರಂಥಾಲಯ / GKVK Library	ಕೃಷಿ ಕಾಲೇಜು, ಹಾಸನ ಗ್ರಂಥಾಲಯ / CoA, Hassan Library	ಕೃಷಿ ಕಾಲೇಜು, ಮಂಡ್ಯ ಗ್ರಂಥಾಲಯ / CoA, Mandya Library	ಕೃಷಿ ಕಾಲೇಜು, ಚಿಂತಾಮಣಿ ಗ್ರಂಥಾಲಯ/ CoS, Chintamani Library	ಕೃಷಿ ಕಾಲೇಜು, ಚಾಮರಾಜನಗರ ಗ್ರಂಥಾಲಯ/ CoA, Chamarajanagar Library	ಒಟ್ಟು / Total
1.	ಒಟ್ಟು ಸಂಗ್ರಹ Total Collections	183185	23046	21971	16412	2452	247066
2.	ಒಟ್ಟು ಸದಸ್ಯತ್ವ Total Membership	3506	960	640	530	128	5764

2.14 ಕೌಶಲ್ಯ ಅಭಿವೃದ್ಧಿ ಕೇಂದ್ರ

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು 2019–20ರ ಶೈಕ್ಷಣಿಕ ವರ್ಷದಲ್ಲಿ ಗಾ.ಕೃ.ವಿ.ಕೆ. ದಲ್ಲಿ ಐಸಿಎಆರ್ ಎಸ್‌ಸಿ–ಎಸ್‌ಪಿ ಅಡಿಯಲ್ಲಿ ಕೌಶಲ್ಯ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲಾಯಿತು. 30–50 ಫಲಾನುಭವಿಗಳಿಗಾಗಿ ಬೋರ್ಡಿಂಗ್ ಮತ್ತು ವಸತಿ ಸೌಲಭ್ಯವುಳ್ಳ ಕೌಶಲ್ಯ ಅಭಿವೃದ್ಧಿ ಕೇಂದ್ರದ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಐಸಿಎಆರ್ ಎಸ್‌ಸಿ–ಎಸ್‌ಪಿ ಅಡಿಯಲ್ಲಿ ಕೌಶಲ್ಯ ಅಭಿವೃದ್ಧಿ ಕೇಂದ್ರವು ಆಯೋಜಿಸಿದ ಕಾರ್ಯಕ್ರಮಗಳು ಕೆಳಗಿನಂತಿವೆ.

2.14.1 ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮಗಳು

- ತೋಟಗಾರಿಕಾ ನರ್ಸರಿ ನಿರ್ವಹಣೆಗೆ ಸಾಮರ್ಥ್ಯ ವೃದ್ಧಿಸುವ ಕಾರ್ಯಕ್ರಮ
- ಪರಿಶಿಷ್ಟ ಜಾತಿ (ಎಸ್‌ಸಿ) ರೈತರು ಮತ್ತು ಯುವಕರನ್ನು ಉದ್ಯಮಿಗಳಾಗಿಸಲು ಟ್ರ್ಯಾಕ್ಟರ್ ಮತ್ತು ಯಂತ್ರೋಪಕರಣಗಳ ಕೃಷಿ ನಿರ್ವಹಣೆ ಮತ್ತು ಸೇವೆಗಳ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮ
- ಕರ್ನಾಟಕ ರಾಜ್ಯದ ದಕ್ಷಿಣ ಭಾಗಗಳಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ) ಯುವಕರಿಗೆ ರೋಗ ನಿರೋಧಕ ವರ್ಧಕ ಆಹಾರಗಳ ಬಗ್ಗೆ ತರಬೇತಿ
- ಬೀಜದ ಗುಣಮಟ್ಟ ಮತ್ತು ಇಳುವರಿಯ ಬಗ್ಗೆ ಅರಿವು ಮೂಡಿಸಲು ಹೆಚ್ಚಿನ ಇಳುವರಿ ನೀಡುವ ವಿವಿಧ ಬೀಜಗಳನ್ನು ಜನಪ್ರಿಯಗೊಳಿಸುವುದು
- ಫಲ ಸಂಪಧ – ಪರಿಶಿಷ್ಟ ಜಾತಿ (ಎಸ್‌ಸಿ) ರೈತರ ಹೊಲದಲ್ಲಿ ಆಹಾರ, ಪೌಷ್ಟಿಕಾಂಶದ ಸುರಕ್ಷತೆ ಮತ್ತು ಆದಾಯ ಉತ್ಪಾದನೆಗಾಗಿ ಹಣ್ಣಿನ ತೋಟವನ್ನು ಸ್ಥಾಪಿಸುವುದು
- ರೇಷ್ಮೆ ಕೃಷಿಗಾಗಿ ಯುಎಎಸ್ ಸೆರಿ ಸುವರ್ಣಾ ಟೆಕ್ನಾಲಜಿ (ಟ್ರೆಂಚಿಂಗ್ ಮತ್ತು ಮಲ್ಚಿಂಗ್) ಅನ್ನು ಕರ್ನಾಟಕದ ಪರಿಶಿಷ್ಟ ಜಾತಿ (ಎಸ್‌ಸಿ) ಕ್ಲಸ್ಟರ್‌ಗಳಲ್ಲಿ ಅಳವಡಿಸುವುದು

2.14.2 ಉದ್ಯಮ ಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳು

- ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ನ್ಯಾಯವ್ಯಾಪ್ತಿಯಲ್ಲಿ ಬರುವ ಆಯ್ದ ತಾಲೂಕು–ಜಿಲ್ಲೆಗಳಲ್ಲಿರುವ ಪರಿಶಿಷ್ಟ ಜಾತಿ (ಎಸ್‌ಸಿ) ರೈತರ ಸಬಲೀಕರಣಕ್ಕಾಗಿ ವೈಜ್ಞಾನಿಕ ಜೇನು ಸಾಕಾಣೆ ವಿಧಾನಗಳನ್ನು ಪರಿಚಯಿಸುವ ತರಬೇತಿ
- ಹೆಚ್ಚುವರಿ ಆದಾಯಕ್ಕಾಗಿ ಗ್ರೈನೇಜ್‌ನಿಂದ ಬಯೋಕ್ರಾಫ್ಟ್‌ಗಳಾಗಿ ಪರಿವರ್ತಿಸಲಾದ ರೇಷ್ಮೆ ಗೂಡುಗಳನ್ನ ಬಳಸುವುದು
- ಪರಿಶಿಷ್ಟ ಜಾತಿ (ಎಸ್‌ಸಿ) ಗಾಗಿ ಅಣಬೆ ಕೃಷಿ, ಸಂಸ್ಕರಣೆ ಮತ್ತು ಮಾರುಕಟ್ಟೆಗಳನ್ನು ಪರಿಚಯಿಸುವುದು

2.14 Skill Development Centre

The University has established Skill Development Center (SDC) under ICAR SC-SP at UAS GKVK, Bengaluru for the academic year 2019-20. Construction of Skill Development Centre with boarding & lodging facilities for 30-50 beneficiaries is undertaken. The Skill Development Centre, has organized the following programmes under ICAR, SC-SP and TSP.

2.14.1 Human Resource Development Programmes

- Capacity Building Programme for Horticultural Nursery Management
- Skill development training programme on maintenance and servicing of tractor and Agricultural Machinery for SC Farmers and Rural youths to become successful entrepreneurs
- Training on immune boosting foods for the Scheduled Caste (SC) youth in the Southern parts of Karnataka state
- Seed quality awareness and Popularization of High Yielding Variety Seeds (HYV) to enhance the yield and sustainability
- Phala Sampada -Establishment of Fruit Orchard in SC farmers Field for food and nutritional security and income generation
- Adoption of UAS seri suvarna technology (trenching and mulching) for sericulture in SC clusters of Karnataka

2.14.2 Entrepreneurship Development Programme

- Empowerment of Schedule caste farmers through scientific beekeeping approaches in selected taluka- districts under UAS, Bangalore jurisdiction in Karnataka
- Utilization of pierced cocoons from grainages converted into biocrafts as an additional income
- Mushroom cultivation, processing & marketing for the Scheduled Caste (SC)

- ಉದ್ಯಮ ಶೀಲತೆ ಅಭಿವೃದ್ಧಿ, ತರಬೇತಿ ಮತ್ತು ಸಾಮರ್ಥ್ಯ ವೃದ್ಧಿ ಕಡಿಮೆಯಿರುವ ದಕ್ಷಿಣ ಕರ್ನಾಟಕದಲ್ಲಿ ಅಭಿವೃದ್ಧಿ ಪಡಿಸಲು ಕೊಯ್ಲು ನಂತರದ ತಂತ್ರಜ್ಞಾನವನ್ನು ಕಿರು ಧಾನ್ಯಗಳ ಸಂಸ್ಕರಣೆಗೆ ಮತ್ತು ಸಾಮರ್ಥ್ಯ ವೃದ್ಧಿಯನ್ನು ಕಾರ್ಯಕ್ರಮದ ಮೂಲಕ ಪರಿಚಯಿಸುವುದು
- ಉದ್ಯಮ ಶೀಲತೆಗಾಗಿ ಕೋಳಿ ಸಾಕಾಣಿಕೆ, ಮೇಕೆ ಸಾಕಾಣಿಕೆ ಹಾಗೂ ಡೈರಿ ಉತ್ಪಾದನಾ ನಿರ್ವಹಣೆ ಕಾರ್ಯಕ್ರಮ
- ದಕ್ಷಿಣ ಕರ್ನಾಟಕ ಭಾಗದ ಪರಿಶಿಷ್ಟ ಜಾತಿ (ಎಸ್‌ಸಿ) ಯುವಕರಿಗೆ ಹೊಲಿಗೆ ಮತ್ತು ಕಸೂತಿ ಕೆಲಸಗಳ ಬಗ್ಗೆ ತರಬೇತಿ
- ಬೇಕರಿ ಮತ್ತು ಮೌಲ್ಯವರ್ಧನೆ ಉದ್ಯಮದ ಮೂಲಕ ಪರಿಶಿಷ್ಟ ಜಾತಿಯ ಆರ್ಥಿಕ ಸಬಲೀಕರಣ

- Entrepreneurship development, Training and Capacity Building of under privileged people of Southern Karnataka through Post-harvest technology interventions
- Entrepreneurship development programme on Poultry Farming, Goat sheep rearing and Dairy production management
- Training on Sewing & embroidery work for the Scheduled Caste (SC) youth in the Southern parts of Karnataka state
- Economic Empowerment of Scheduled Caste through Bakery and Value Addition Industry

2.15 ಕೇಂದ್ರ ಸಲಕರಣೆ ಸೌಲಭ್ಯ

ಐ.ಸಿ.ಎ.ಆರ್.ನ ರಾಷ್ಟ್ರೀಯ ಕೃಷಿ ಉನ್ನತ ಶಿಕ್ಷಣ ಯೋಜನೆಯ (ಎನ್.ಎ.ಹೆಚ್.ಇ.ಪಿ.) ಸೆಂಟ್ರರ್ ಫಾರ್ ಅಡ್ವಾನ್ಸ್ಡ್ ಅಗ್ರಿಕಲ್ಚರಲ್ ಸೈನ್ಸ್ಸ್ ಅಂಡ್ ಟೆಕ್ನಾಲಜಿ (ಸಿ.ಎ.ಎ.ಎ.ಟಿ.) ಕಾರ್ಯಕ್ರಮದ ಆಶ್ರಯದಲ್ಲಿ ಕೇಂದ್ರ ಸಲಕರಣೆ ಸೌಲಭ್ಯ (ಸಿ.ಐ.ಎಫ್.) ಅನ್ನು ಐ.ಸಿ.ಎ.ಆರ್.ನ ಮಹಾ ನಿರ್ದೇಶಕರಾದ ಡಾ. ತ್ರಿಲೋಚನ್ ಮೋಹಪಾತ್ರ ರವರು 20 ಮಾರ್ಚ್ 2021 ರಂದು ಉದ್ಘಾಟಿಸಿದರು. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಗುಣಮಟ್ಟದ ಮಾನವ ಸಂಪನ್ಮೂಲ ಅಭಿವೃದ್ಧಿಯ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸಲು ಕೇಂದ್ರ ಸಲಕರಣೆ ಸೌಲಭ್ಯವು ಕೊಡುಗೆ ನೀಡುತ್ತದೆ. ಹೀಗಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಶ್ವವಿದ್ಯಾನಿಲಯದ ವೇಗವನ್ನು ಉಳಿಸಿಕೊಳ್ಳಲು ಕೇಂದ್ರವು ಸಹಾಯ ಮಾಡುತ್ತದೆ.

2.15 Central Instrumetation Facility

The Central Instrumentation Facility (CIF) under the aegis of the Centre for Advanced Agricultural Sciences and Technology (CAAST) programme of the National Agricultural Higher Education Project (NAHEP) of ICAR was inaugurated by Dr. Trilochan Mohapatra, Director General, ICAR and Secretary (DARE) GoI on 20th March 2021. CIF would contribute for pursuing research in areas of modern science and technology and development of quality human resource, thus help UAS-B to keep pace internationally.

ಅಧ್ಯಾಯ III / Chapter III

3. ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿ
Agricultural Research and Development

ಕೋವಿಡ್–19 ಸಾಂಕ್ರಾಮಿಕವು ನಮ್ಮ ದೈನಂದಿನದ ಆಹಾರ ಪದ್ಧತಿಯನ್ನು ಪುನರ್ ವ್ಯಾಖ್ಯಾನಿಸಿದೆ ಮತ್ತು ಆರೋಗ್ಯಕರ ಆಹಾರದ ಸೇವನೆ, ಸಾರ್ವಜನಿಕ–ಆರೋಗ್ಯ, ಆಹಾರ ಮತ್ತು ಕೃಷಿ ಕ್ಷೇತ್ರಗಳ ಸಹಯೋಗದ ಸಬಲೀಕರಣ ಮತ್ತು ವೈವಿಧ್ಯಮಯ ಬೆಳೆಗಳನ್ನು ಬೆಳೆಯುವುದಕ್ಕೆ ರೈತರನ್ನು ಉತ್ತೇಜಿಸಲು ಮತ್ತು ದೀರ್ಘಕಾಲಿಕ ಕ್ರಮಗಳನ್ನು ಅಳವಡಿಸುವುದು ಅಗತ್ಯವಾಗಿದೆ. ಆಹಾರ ವ್ಯವಸ್ಥೆಗಳನ್ನು ಪರಿವರ್ತಿಸಿ ಕೈಗೆಟುಕುವಂತಹ ಆರೋಗ್ಯಕಾರಿ ಆಹಾರವನ್ನು ಒದಗಿಸುವ ನಿಟ್ಟಿನಲ್ಲಿ, ಕೃಷಿ ಸಂಶೋಧನೆಯು ಪ್ರಮುಖ ಪಾತ್ರವಹಿಸುತ್ತದೆ.

ಈ ಹಿನ್ನಲೆಯಲ್ಲಿ ಪ್ರಸ್ತುತ ಪರಿಸ್ಥಿತಿಗೆ ಆದ್ಯತೆ ನೀಡುತ್ತ ಕೃಷಿ ವಿಶ್ವವಿದ್ಯಾನಿಲಯವು 2020–21ರ ಸಂಶೋಧನಾ ಕಾರ್ಯಕ್ರಮಗಳನ್ನು ಮರು–ಸಂಘಟಿಸಿ ಕಾರ್ಯಗತಗೊಳಿಸಲಾಗಿತ್ತು. ಪ್ರಸ್ತುತ ವರ್ಷದಲ್ಲಿ ಪೋಷಕಾಂಶ ಭರಿತ ಬೆಳೆಗಳಾದ ಸಿರಿ ಧಾನ್ಯಗಳ ಮತ್ತು ಬೀಜದ ದಂಟಿನ ತಳಿಗಳನ್ನು ಕ್ಷೇತ್ರ ಪ್ರಯೋಗಕ್ಕಾಗಿ ಗುರುತಿಸಲಾಗಿದೆ ಹಾಗೂ ಬರುವ ದಿನಗಳಲ್ಲಿ ಈ ಬೆಳೆಗಳನ್ನು ಆಹಾರ ಕ್ರಮದಲ್ಲಿ ಮತ್ತೆ ಪರಿಚಯಿಸಬಹುದಾಗಿದೆ ಮತ್ತು ಬೆಳೆ ವೈವಿಧ್ಯತೆಯನ್ನು ಹೆಚ್ಚಿಸಬಹುದಾಗಿದೆ. ಇದಲ್ಲದೆ, ಪರಿಣಾಮಕಾರಿ ಮತ್ತು ಪರಿಸರ ಸಮರ್ಥನೀಯ ಬೆಳೆ ಉತ್ಪಾದನೆಯ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆಗೊಳಿಸಲಾಗಿದೆ.

ಆಹಾರ ಭದ್ರತೆಯನ್ನು ಖಾತರಿಪಡಿಸುವುದರ ಜೊತೆಗೆ ಉತ್ಪಾದಕತೆಯನ್ನು ಹೆಚ್ಚಿಸಿ, ಯಾವುದೇ ವ್ಯತಿರಿಕ್ತ ಪರಿಣಾಮಗಳಿಲ್ಲದೆ ಕೃಷಿ ಸಂಪನ್ಮೂಲಗಳ ದಕ್ಷತೆಯನ್ನು ಹೆಚ್ಚಿಸುವ ಹಾಗೂ ರೈತರ ಆದಾಯ ಮತ್ತು ಸಾಮಾಜಿಕ ಸ್ಥಿತಿಯ ಗುಣಮಟ್ಟವನ್ನು ಸುಧಾರಿಸುವಂತಹ ಹಾಗು ಸಣ್ಣ ಹಿಡುವಳಿದಾರರು ಮತ್ತು ಕೃಷಿ ಮಹಿಳೆಯರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯವು ಅದರ ವ್ಯಾಪ್ತಿಯ 10 ಜಿಲ್ಲೆಗಳಲ್ಲಿರುವ ತನ್ನ 13 ಕೃಷಿ ಸಂಶೋಧನಾ ಕೇಂದ್ರಗಳಲ್ಲಿ ಸ್ಥಳ ನಿರ್ದಿಷ್ಟ, ಕಾರ್ಯತಂತ್ರವನ್ನು ಮತ್ತು ನಿರೀಕ್ಷಿತ ಸಂಶೋಧನಾ ಕಾರ್ಯಕ್ರಮಗಳನ್ನು ರೂಪಿಸಿದೆ.

3.1 ಕೃಷಿ ಸಂಶೋಧನಾ ಕೇಂದ್ರಗಳು ಮತ್ತು ಕೃಷಿ–ಹವಾಮಾನ ವಲಯಗಳು

ಸ್ಥಳ ನಿರ್ದಿಷ್ಟ ಹಾಗೂ ರೈತ ಕೇಂದ್ರಿತ ಸಂಶೋಧನಾ ಪ್ರಾಯೋಜನೆಗಳನ್ನು ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ರೂಪಿಸಿದ್ದಾರೆ ಹಾಗೂ ಅವುಗಳ ಕುರಿತಂತೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ದಕ್ಷಿಣ ರಾಜ್ಯದ 10 ಜಿಲ್ಲೆಗಳಲ್ಲಿನ ಕೆಳಗೆ ತಿಳಿಸಿರುವ 13 ಕೃಷಿ ಸಂಶೋಧನಾ ಕೇಂದ್ರಗಳಲ್ಲಿ ಸಂಶೋಧನೆಗಳು ನಡೆಯುತ್ತಿವೆ.

ವಲಯ – 4

ಕೃಷಿ ಸಂಶೋಧನಾ ಕೇಂದ್ರ, ಪಾವಗಡ

ವಲಯ – 5

ವಲಯ ಕೃಷಿ ಸಂಶೋಧನಾ ಕೇಂದ್ರ, ಜಿ.ಕೆ.ವಿ.ಕೆ.

The COVID-19 pandemic has redefined the food habits and now is the situation to adapt to long term measures for promoting healthier diets, encouraging farmers to produce a wider range of food and strengthen collaboration among the public health, food, and agriculture sectors. Agricultural research plays a pivotal role in transforming food systems for affordable healthy diets.

In this context, the University has redesigned its research programmes on top priority basis that has lead to identifying nutrition rich crops like small millets and pseudocereals and grain amaranth for farm trials during the year 2020-21, that can be reintroduced into diets. These crops not only promote nutritional requirement but also enhance crop diversity. Further, efficient and ecofriendly crop production technologies were also developed by the University.

The University also coordinates location specific, strategic and anticipatory research programmes in 13 Agricultural Research Stations situated in 10 southern districts of the state, mainly to address the issues of small and marginal famers including farm women to improve their standard of living while ensuring food security by improving productivity and enhancing agricultural resource use efficiency with no adverse effects.

3.1 Agricultural Research Stations and Agro-Climatic Zones

Location, specific and farmer centric Research Programmes have been formulated by the Scientists working in 13 Agricultural Research Stations located in 10 Southern Districts of the State under the jurisdiction of UAS (B). The details are outlined below:

Zone – 4

Agricultural Research Station, Pavagada

Zone – 5

Zonal Agricultural Research Station, GKVK

ಪ್ರಮುಖ ಸಂಶೋಧನಾ ಕೇಂದ್ರ, ಹೆಬ್ಬಾಳ	Main Research Station, Hebbal
ಕೃಷಿ ಸಂಶೋಧನಾ ಕೇಂದ್ರ, ಚಿಂತಾಮಣಿ	Agricultural Research Station, Chintamani
ಕೃಷಿ ಸಂಶೋಧನಾ ಕೇಂದ್ರ, ಬಲಜಿಗಪಡೆ	Agricultural Research Station, Balajigapade
ಕೃಷಿ ಸಂಶೋಧನಾ ಕೇಂದ್ರ, ನೆಲಮಾಕನಹಳ್ಳಿ	Agricultural Research Station, Nelamakanahalli
ವಲಯ – 6	**Zone – 6**
ವಲಯ ಕೃಷಿ ಸಂಶೋಧನಾ ಕೇಂದ್ರ, ಮಂಡ್ಯ	Zonal Agricultural Research Station, Mandya
ಕೃಷಿ ಸಂಶೋಧನಾ ಕೇಂದ್ರ, ನಾಗೇನಹಳ್ಳಿ	Agricultural Research Station, Naganahalli
ಕೃಷಿ ಸಂಶೋಧನಾ ಕೇಂದ್ರ, ಮಡೇನೂರು	Agricultural Research Station, Madenur
ಕೃಷಿ ಸಂಶೋಧನಾ ಕೇಂದ್ರ, ಕುಣಿಗಲ್	Agricultural Research Station, Kunigal
ಕೃಷಿ ಸಂಶೋಧನಾ ಕೇಂದ್ರ, ಅರಸೀಕೆರೆ	Agricultural Research Station, Arasikere
ಕೃಷಿ ಸಂಶೋಧನಾ ಕೇಂದ್ರ, ತಿಪಟೂರು	Agricultural Research Station, Tiptur
ವಲಯ – 7	**Zone – 7**
ಕೃಷಿ ಸಂಶೋಧನಾ ಕೇಂದ್ರ, ಗುಂಜೇವು	Agricultural Research Station, Gunjevu

3.2 ಕಾರ್ಯಾಚರಣೆಯಲ್ಲಿರುವ ಪ್ರಾಯೋಜನೆಗಳು (31–03–2021 ರಂತೆ)

ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಒಟ್ಟು 280 ಸಂಶೋಧನಾ ಪ್ರಾಯೋಜನೆಗಳು ಕಾರ್ಯಾಚರಣೆಯಲ್ಲಿದ್ದು, ಅವುಗಳಲ್ಲಿ 31 ಅಖಿಲ ಭಾರತ ಸಹಯೋಜಿತ ಸಂಶೋಧನಾ ಪ್ರಾಯೋಜನೆಗಳು, 14 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಪ್ರಾಯೋಜನೆಗಳು, 8 ಗೌರವಾನ್ವಿತ ವಿಜ್ಞಾನಿಗಳ ಪ್ರಾಯೋಜನೆಗಳು, 8 ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ತಾತ್ಪೂರಿತ ಪ್ರಾಯೋಜನೆಗಳು, 66 ಭಾರತ ಸರ್ಕಾರದ ಪ್ರಾಯೋಜನೆಗಳು (ಡಿ.ಎಸ್.ಟಿ./ಡಿ.ಬಿ.ಟಿ.), 39 ಕರ್ನಾಟಕ ಸರ್ಕಾರದ ಪ್ರಾಯೋಜನೆಗಳು; 38 ಇತರೆ ಏಜೆನ್ಸಿಗಳ ಅನುದಾನದ ಪ್ರಾಯೋಜನೆಗಳು ಹಾಗೂ 76 ಕೃ.ವಿ.ವಿ. ಅನುದಾನಿತ ಸಂಶೋಧನಾ ಪ್ರಾಯೋಜನೆಗಳು (47 ತಳಿ / ತಾಂತ್ರಿಕತೆ ಅಭಿವೃದ್ಧಿ ಮತ್ತು ಮೌಲ್ಯವರ್ಧನೆ ಪ್ರಾಯೋಜನೆಗಳು, 14 ರೈತಕೇಂದ್ರಿತ ಪ್ರಾಯೋಜನೆಗಳು ಮತ್ತು 15 ಹವಾಮಾನ ಸಹಿಷ್ಣು ಕೃಷಿ ಪ್ರಾಯೋಜನೆಗಳು) ಕಾರ್ಯಾಚರಣೆಯಲ್ಲಿವೆ.

3.2 Projects in Operation (As on 31-03-2021)

In total, 280 research projects are in operation of which 31 are All India Coordinated Research Projects, 14-RKVY projects, 8 Emeritus Scientists, 8 ICAR *Ad-hoc* projects, 66 Government of India Projects (DST/DBT), 39 Government of Karnataka Projects; 38 projects funded by other agencies and 76 UAS Sponsored Research projects (47 Projects on Varietal Development and Value addition, 14 Farmer Centric and 15 Climate Smart Agriculture) sponsored by the University to address the problems of the farmers in the State in general and 10 districts in particular.

ಅನುಮೋದಿಸಲಾದ ಹೊಸ ಪ್ರಾಯೋಜನೆಗಳು

2020–21ರ ಸಾಲಿನಲ್ಲಿ 59 ಹೊಸ ಪ್ರಾಯೋಜನೆಗಳು [5 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಪ್ರಾಯೋಜನೆಗಳು, 4 ಗೌರವಾನ್ವಿತ ವಿಜ್ಞಾನಿಗಳ ಪ್ರಾಯೋಜನೆಗಳು, 1 ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ತಾತ್ಪೂರಿತ ಪ್ರಾಯೋಜನೆಗಳು, 9 ಭಾರತ ಸರ್ಕಾರದ ಪ್ರಾಯೋಜನೆಗಳು, 7 ಕರ್ನಾಟಕ ಸರ್ಕಾರದ ಪ್ರಾಯೋಜನೆಗಳು; 3 ಇತರೆ ಏಜೆನ್ಸಿಗಳ ಅನುದಾನದ ಪ್ರಾಯೋಜನೆಗಳು ಹಾಗೂ 30 ಕೃ.ವಿ.ವಿ. ಅನುದಾನಿತ ಸಂಶೋಧನಾ ಪ್ರಾಯೋಜನೆಗಳು (16 ತಳಿ/ ತಾಂತ್ರಿಕತೆ ಅಭಿವೃದ್ಧಿ ಮತ್ತು ಮೌಲ್ಯವರ್ಧನೆ ಪ್ರಾಯೋಜನೆಗಳು, 7 ರೈತ ಕೇಂದ್ರಿತ ಪ್ರಾಯೋಜನೆಗಳು ಮತ್ತು 7 ಹವಾಮಾನ ಸಹಿಷ್ಣು ಕೃಷಿ ಪ್ರಾಯೋಜನೆಗಳು)] ಮಂಜೂರಾಗಿದ್ದು, ಅದರ ಮೊತ್ತ ರೂ. 2642 ಲಕ್ಷಗಳು.

New Research Projects

A total of 59 new research projects (RKVY:5 Emeritus Scientists:4, ICAR *Ad-hoc* project:1, Government of India:9, Government of Karnataka:7 and Other funding agencies:3) have been sanctioned. Thirty UAS Sponsored Research Projects (16 projects on Varietal Development and Value addition, 7 projects on Farmer Centric Demand driven and 7 projects on Climate Smart Agriculture) have been sanctioned to the University during 2020-21 by various funding agencies with a total outlay of Rs. 2642 Lakhs.

ಕೋಷ್ಟಕ 24 : 2020–21ನೇ ಸಾಲಿನಲ್ಲಿ ಅನುದಾನ ಹೊಂದಿದ ಸಂಶೋಧನಾ ಪ್ರಾಯೋಜನೆಗಳು
Table 24 : Abstract of projects sanctioned during 2020-21

ಕ್ರ.ಸಂ./ Sl. No	ವಿವರಗಳು / Particulars	ಪ್ರಾಯೋಜನೆಗಳ ಸಂಖ್ಯೆ / Project No.	ಮೊತ್ತ ಲಕ್ಷ (ರೂ.ಗಳಲ್ಲಿ) / Amount (lakhs)
1.	ರಾ.ಕೃ.ವಿ.ಯೋ. ಪ್ರಾಯೋಜನೆಗಳು RKVY Projects	5	489.03
2.	ಗೌರವಾನ್ವಿತ ವಿಜ್ಞಾನಿಗಳ ಪ್ರಾಯೋಜನೆಗಳು Emeritua Scientists	4	96.00
3.	ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ತಾತ್ಪೂರಿತ ಪ್ರಾಯೋಜನೆಗಳು ICAR *Ad-hoc* Projects	1	51.57
4.	ಭಾರತ ಸರ್ಕಾರದ ಪ್ರಾಯೋಜನೆಗಳು (ಡಿ.ಎಸ್.ಟಿ./ ಡಿ.ಬಿ.ಟಿ) Government of India (DST / DBT)	9	1002.72
5.	ಕರ್ನಾಟಕ ಸರ್ಕಾರದ ಪ್ರಾಯೋಜನೆಗಳು Government of Karnataka	7	681.76
6.	ಇತರೆ ಅನುದಾನ ಸಂಸ್ಥೆಗಳು Other Funding Agencies	3	232.88
7.	ಕೃ.ವಿ.ವಿ. ಅನುದಾನಿತ : ತಳಿ/ತಾಂತ್ರಿಕತೆ ಅಭಿವೃದ್ಧಿ ಮತ್ತು ಮೌಲ್ಯವರ್ಧನೆ UAS Sponsored: Varietal Development	16	47.60
8.	ಕೃ.ವಿ.ವಿ. ಅನುದಾನಿತ : ಹವಾಮಾನ ಸಹಿಷ್ಣು ಕೃಷಿ UAS Sponsored: Climate Smart Agriculture	7	25.00
9.	ಕೃ.ವಿ.ವಿ. ಅನುದಾನಿತ : ರೈತ ಕೇಂದ್ರಿತ ಪ್ರಾಯೋಜನೆಗಳು UAS Sponsored: Farmer Centric	7	15.00
	Total	**59**	**2641.09**

3.3 ಇತರೆ ಸಂಸ್ಥೆಗಳ ಜೊತೆ ಮಾಡಿಕೊಂಡ ಒಡಂಬಡಿಕೆಗಳು / ಒಪ್ಪಂದಗಳು

ಪರಸ್ಪರ ಆಸಕಿಯ್ತಿಂದ ಸಹಯೋಜಿತ ಸಂಶೋಧನಾ/ ವಾಣಿಜ್ಯೀಕರಣ ಕಾರ್ಯಕ್ರಮಗಳನ್ನು ಕೈಗೊಳ್ಳಲು ವಿವಿಧ ಸಂಸ್ಥೆಗಳೊಂದಿಗೆ ಒಟ್ಟು 13 ಒಡಂಬಡಿಕೆಗಳು / ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ

3.4 ಪರೀಕ್ಷಿಸಿದ ಹೊಸ ರಾಸಾಯನಿಕಗಳು/ತಳಿಗಳು/ಅಣುಗಳು

ವಿಶ್ವವಿದ್ಯಾನಿಲಯವು 348 ಹೊಸ ತಳಿಗಳು / ಸಾಲುಗಳು/ ರಾಸಾಯನಿಕಗಳು / ಅಣುಗಳನ್ನು ಪೀಡೆ / ರೋಗ / ಕಳೆ / ನಿಯಂತ್ರಣಕ್ಕಾಗಿ / ಮಣ್ಣು ವಿಶ್ಲೇಷಣೆಗಾಗಿ ಹಾಗೂ ಕೃಷಿ ಉಪಕರಣಗಳನ್ನು ಪರೀಕ್ಷಿಸಿದ್ದು ಅವುಗಳಿಂದ ಒಟ್ಟು ರೂ.436 ಲಕ್ಷ ಆದಾಯವನ್ನು ಗಳಿಸಿದೆ.

3.5 ಪ್ರಮುಖ ಸಂಶೋಧನೆಗಳು

3.5.1 ಪಪ್ಪಾಯಿಗೆ ಸೋಂಕು ತರುವ ಪಪ್ಪಾಯಿ ರಿಂಗ್ ಸ್ಪಾಟ್ ವೈರಸ್ (ಪಿಆರ್‌ಎಸ್‌ವಿ) ಯನ್ನು ಮೊದಲೇ ಪತ್ತೆಹಚ್ಚಲು ಬಯೋಸೆನ್ಸರ್‌ನ ಅಭಿವೃದ್ಧಿ : ಸಸ್ಯ ವೈರಸ್ ಪತ್ತೆಗಾಗಿ ಎಲೆಕ್ಟ್ರೋಕೆಮಿಕಲ್ ಸಾಧನವನ್ನು ಅಭಿವೃದ್ಧಿಪಡಿಸಲಾಗಿದೆ ಹಾಗೂ ಅದಕ್ಕೆ ಪೇಟೆಂಟ್ ಪಡೆಯಲು ಪ್ರಯತ್ನಿಸಲಾಗುತ್ತಿದೆ. ಈ ಅಭಿವೃದ್ಧಿಪಡಿಸಿದ ಸಾಧನವು ಲ್ಯಾಬ್‌ನಲ್ಲಿ ಹಾಗೂ ಜಮೀನಿನಲ್ಲಿ ಸಸ್ಯ ವೈರಸ್‌ನ್ನು ಪತ್ತೆಹಚ್ಚುವಲ್ಲಿ ಬಹಳ

3.3 MoUs Signed with other Institutions

A total of 13 MoUs / MoAs / MTA were signed with different institutions for conducting collaborative research of mutual interest.

3.4 New Chemicals/ Varieties/ Molecules Tested

The University has undertaken the testing of 348 new varieties /lines/ chemicals/molecules for control of pests /diseases / weeds / soil analysis and agricultural equipment and generated revenue of Rs. 436 lakhs.

3.5 Break through Research

3.5.1 Validation and field evaluation of biosensor for early detection of Papaya Ring Spot Virus (PRSV) infecting Papaya: A low cost ecofriendly strip for early detection of a plant virus which is being moved towards a provisional patent. This newly developed basal stratum was used for the field level

ಪರಿಣಾಮಕಾರಿಯಾಗಿದೆ. ದಕ್ಷಿಣ ಭಾರತದ ವಿವಿಧ ರಾಜ್ಯಗಳಿಂದ ಸಂಗ್ರಹಿಸಲಾದ ಮಾದರಿಗಳಿಂದ ಸಸ್ಯ ವೈರಸ್‌ನ ಬ್ರಾಡ್ ಸ್ಪೆಕ್ಟಮ್ ಪತ್ತೆ ಸಾಧ್ಯವಾಯಿತು.

3.5.2 ***ಸೌತೆಕಾಯಿ ಮೊಸಾಯಿಕ್ ವೈರಸ್ (ಸಿಎಮ್‌ವಿ)ನ ಆರಂಭಿಕ ಮತ್ತು ತ್ವರಿತ ಪತ್ತೆಗಾಗಿ ಆಣ್ವಿಕ ಪಾಲಿಮರೇಸ್ ಚೈನ್ ರಿಯಾಕ್ಷನ್ (ಪಿಸಿಆರ್) ಮತ್ತು ಲ್ಯಾಟರಲ್ ಫ್ಲೋ ಇಮ್ಯುನೊ ಸ್ಟ್ರಿಪ್‌ಗಳ ಅಭಿವೃದ್ಧಿ:*** ಸಸ್ಯ ವೈರಸ್‌ನ ಆರಂಭಿಕ ಪತ್ತೆಗಾಗಿ ಕಡಿಮೆ ವೆಚ್ಚದ ಪರಿಸರ ಸ್ನೇಹಿ ಸ್ಟ್ರಿಪ್ ಅನ್ನು ಅಭಿವೃದ್ಧಿಪಡಿಸಲಾಗಿದೆ ಹಾಗೂ ಅದಕ್ಕೆ ಪೇಟೆಂಟ್ ಪಡೆಯಲು ಅರ್ಜಿ ಸಲ್ಲಿಸಲಾಗಿದೆ. ವಾಣಿಜ್ಯಿಕವಾಗಿ ಲಭ್ಯವಿರುವ ನೈಟ್ರೊಸೆಲ್ಯುಲೋಸ್ ಮೆಂಬ್ರೇನ್‌ಗಳಿಗೆ ಪರ್ಯಾಯವಾಗಿ ಸಸ್ಯ ವೈರಸ್ ಅನ್ನು ಕ್ಷೇತ್ರ ಮಟ್ಟದಲ್ಲಿ ಪತ್ತೆಹಚ್ಚಲು ಹೊಸದಾಗಿ ಅಭಿವೃದ್ಧಿಪಡಿಸಿದ ಈ ಬೇಸಲ್ ಸ್ಟ್ರಾಟಮ್ ಅನ್ನು ಬಳಸಲಾಯಿತು. ಫಲಿತಾಂಶಗಳು ವಾಡಿಕೆಯಂತೆ ಬಳಸುವ ರೋಗನಿರ್ಣಯ ಸ್ಟ್ರಿಪ್‌ಗಳಿಗೆ ಸಮನಾಗಿವೆ. ಕರ್ನಾಟಕದಾದ್ಯಂತ ವಿವಿಧ ಕ್ಷೇತ್ರಗಳಲ್ಲಿ ಸಂಗ್ರಹಿಸಿದ ಮಾದರಿಗಳಲ್ಲಿ ವೈರಲ್ ಇರುವಿಕೆಯನ್ನು ಪತ್ತೆಮಾಡಲಾಯಿತು.

3.5.3 ***ಸ್ಲ್ಯಾಗ್ ಅಧಾರಿತ ಜಿಪ್ಸಂ ಮತ್ತು ಕೃಷಿಯಲ್ಲಿ ಅದರ ಬಳಕೆ:*** ಸ್ಲ್ಯಾಗ್ ಅಧಾರಿತ ಜಿಪ್ಸಂ, ಕಬ್ಬಿಣ ಮತ್ತು ಸ್ಟೀಲ್ ಕಾರ್ಖಾನೆಗಳ ಒಂದು ಮೌಲ್ಯವರ್ಧಿತ ಉತ್ಪನ್ನವಾಗಿದೆ. ಸಸ್ಯ ಪೋಷಕಾಂಶಗಳಾದ ಸುಣ್ಣ ಮತ್ತು ಗಂಧಕದ ಜೊತೆಗೆ ಲಘುಪೋಷಕಾಂಶಗಳಾದ ಕಬ್ಬಿಣ, ಮ್ಯಾಂಗನೀಸ್ ಮತ್ತು ಪ್ರಯೋಜನಕಾರಿ ಪೋಷಕಾಂಶವಾದ ಸಿಲಿಕಾನ್ ಅಂಶವನ್ನು ಹೊಂದಿದೆ. ನಮ್ಮ ರಾಷ್ಟ್ರದಲ್ಲಿ ಗಂಧಕದ ನಿಕ್ಷೇಪ / ಅದಿರು ಇಲ್ಲದಿರುವುದರಿಂದ ನಾವು ಆಮದು ಮಾಡಿಕೊಳ್ಳುವ ಅನಿವಾರ್ಯತೆಯಿದ್ದು, ಇದು ಮುಂದಿನ ದಿನಗಳಲ್ಲಿ ಗಂಧಕದ ಆಮದಿನ ಮೇಲೆ ಹೆಚ್ಚಿನ ಅವಲಂಭನೆಯನ್ನು ಸೃಷ್ಟಿಸುತ್ತದೆ. ಇಂತಹ ಕಠಿಣ ಸಂದರ್ಭಗಳಲ್ಲಿ ಕಬ್ಬಿಣ ಮತ್ತು ಸ್ಟೀಲ್ ಉದ್ಯಮದ ಉಪ ಉತ್ಪನ್ನ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಿರುವ ಸ್ಲ್ಯಾಗ್ ಅಧಾರಿತ ಜಿಪ್ಸಂನ್ನು ಕೃಷಿಯಲ್ಲಿ ಅಗ್ಗದ ಹಾಗೂ ಪರ್ಯಾಯ ಗಂಧಕದ ಮೂಲವಾಗಿ ಬಳಸಬಹುದಾಗಿದೆ. ಮಾರುಕಟ್ಟೆಯಲ್ಲಿ ಲಭ್ಯವಿರುವ ಜಿಪ್ಸಂ ಹಾಗೂ ಸ್ಲ್ಯಾಗ್ ಅಧಾರಿತ ಜಿಪ್ಸಂಗಳನ್ನು 300–750 ಕೆ.ಜಿ./ಹೆ. ಗೆ ವಿವಿಧ ಬೆಳೆಗಳಲ್ಲಿ (ಭತ್ತ, ಮೆಕ್ಕೆಜೋಳ ಮತ್ತು ನೆಲಗಡಲೆ) ಉಪಯೋಗಿಸಿದಾಗ, ಸ್ಲ್ಯಾಗ್ ಅಧಾರಿತ ಜಿಪ್ಸಂನ ಬಳಕೆಯಿಂದ ಹೆಚ್ಚಿನ ಇಳುವರಿಯನ್ನು ಕ್ಷೇತ್ರ ಪ್ರಯೋಗಗಳ ಫಲಿತಾಂಶದಿಂದ ತಿಳಿದುಬಂದಿದೆ. ಸ್ಲ್ಯಾಗ್ ಅಧಾರಿತ ಜಿಪ್ಸಂನ್ನು ಪೋಷಕಾಂಶಗಳ ಮೂಲವಾಗಿ / ಮಣ್ಣು ಸುಧಾರಕವಾಗಿ ವಿವಿಧ ಬೆಳೆಗಳಲ್ಲಿ ಮತ್ತು ಮಣ್ಣಿನಲ್ಲಿ ಬಳಸಬಹುದಾಗಿದೆ. ಸ್ಲ್ಯಾಗ್ ಅಧಾರಿತ ಜಿಪ್ಸಂನ ವಿಶೇಷ ಗುಣಲಕ್ಷಣಗಳಿಂದ ವಿವಿಧ ಬೆಳೆಗಳಲ್ಲಿ ಪೋಷಕಾಂಶಗಳನ್ನು ಮಣ್ಣಿನಿಂದ ತೆಗೆದುಕೊಳ್ಳುವ ಪ್ರಮಾಣ ಮತ್ತು ಪೋಷಕಾಂಶಗಳ ಬಳಕೆಯ ದಕ್ಷತೆಯು ಹೆಚ್ಚಾಗಿರುತ್ತದೆ. ಎಲ್ಲ ಕ್ಷೇತ್ರ ಪ್ರಯೋಗಗಳ ಫಲಿತಾಂಶಗಳನ್ನು ಒಟ್ಟುಗೂಡಿಸಿ, ಪೇಟೆಂಟ್ ನಮೂನೆಯಲ್ಲಿ 'ಮಣ್ಣು ಸುಧಾರಕ ಮತ್ತು ಅದರ ಉಪಯೋಗಗಳು' ಎಂಬ ಶೀರ್ಷಿಕೆಯೊಂದಿಗೆ ಭಾರತೀಯ ಪೇಟೆಂಟ್ ಪ್ರಾಧಿಕಾರಕ್ಕೆ (ಪೇಟೆಂಟ್ ಅಪ್ಲಿಕೇಶನ್ ಸಂಖ್ಯೆ: 202131002666) ಟಾಟಾ ಸ್ಟೀಲ್ ಲಿಮಿಟೆಡ್, ಜೆಮ್‌ಷೆಡ್‌ಪುರ್‌ನ ವಿಜ್ಞಾನಿಗಳ ಸಹಯೋಗದೊಂದಿಗೆ ಸಲ್ಲಿಸಲಾಗಿದೆ.

early detection of the plant virus as an alternative to commercially available nitrocellulose membranes. The results were on par with the routinely used diagnostic strips wherein the viral presence was detected in different field collected samples across Karnataka.

3.5.2 Development of a molecular Polymerase Chain Reaction (PCR) and lateral flow immuno strips for the early and rapid detection of Cucumber Mosaic Virus (CMV): An electrochemical device has been developed for the detection of a plant virus which is being moved towards a provisional patent. This developed device is very effective in the early detection of plant virus in the lab and field as well. We were able to obtain broad spectrum detection of the plant virus collected from filed samples across different states in South India.

3.5.3 Slag based gypsum (SBG) and its utilization in agriculture: Slag-based gypsum (SBG) is first kind of gypsum produced from steel industry slag by acid treatment which is also a rich source of calcium, magnesium, sulphur in addition to silicon and other micronutrients. Having limited sulphur resources in India and other countries, sulphur fertilizers would become more and more expensive in the future. Field trials on application of 300-750 kg SBG per hectare significantly increased the yield of different crops (paddy, maize and groundnut) as compared commercially available gypsum in different soils. The properties of the SBG make it act as a soil conditioner besides increasing the nutrient uptake and nutrient use efficiency. The results of these field experiments are compiled and filed in the form of a patent "A Soil Conditioner an Applications Related Thereto" (Indian Complete Patent Application No. 202131002666) jointly with the scientists of Tata Steel Limited, Jamshedpur.

3.5.4 *ಹಾಲು ತಂಪಾಗಿಸಲು ಘನ ಸ್ಥಿತಿಯ ಕೂಲಿಂಗ್ ಮಾಡ್ಯೂಲ್‌ನ ಅಭಿವೃದ್ಧಿ:* ಹಾಲನ್ನು 4 ಡಿಗ್ರಿ ಸೆಲ್ಸಿಯೆಸ್‌ನಲ್ಲಿ ತಂಪಾಗಿಸಿದಾಗ, ಸೂಕ್ಷ್ಮಜೀವಿಗಳ ಬೆಳವಣಿಗೆ ಇರುವುದಿಲ್ಲ ಹಾಗೂ ಹಾಲು ಹಾಳಾಗುವುದನ್ನು ತಪ್ಪಿಸಬಹುದು. ತಂಪಾಗಿಸುವಿಕೆ ಮತ್ತು ಶೇಖರಣಾ ಕ್ಷೇತ್ರದಲ್ಲಿ ಶೈತ್ಯೀಕರಣದ ಬೇಡಿಕೆ ಹೆಚ್ಚಾಗಿರುವುದರಿಂದ ವಿದ್ಯುತ್ ಬಳಕೆ ಹೆಚ್ಚಾಗಿದ್ದು, ಇದರಿಂದ ಪ್ರಪಂಚದಾದ್ಯಂತ CO2, CFC ಮತ್ತು HCF ಕಾರ್ಬನ್‌ಗಳ ಬಿಡುಗಡೆ ಹೆಚ್ಚಾಗಿದೆ ಹಾಗೂ ಇದು ಹವಾಮಾನ ಬದಲಾವಣೆಯ ಮೇಲೆ ಜಾಗತಿಕ ಪರಿಣಾಮ ಬೀರುತ್ತಿದೆ, ಇದನ್ನು ತಪ್ಪಿಸಲು ಥರ್ಮೋಎಲೆಕ್ಟ್ರಿಕ್ ಕೂಲಿಂಗ್ ಮತ್ತು ಹೀಟಿಂಗ್ ತಂತ್ರಜ್ಞಾನವನ್ನು ಬಳಸಿಕೊಂಡು ಘನ ಸ್ಥಿತಿಯ ತಂಪಾಗಿಸುವಿಕೆಯ ಘಟಕವನ್ನು ಅಭಿವೃದ್ಧಿಪಡಿಸಲಾಗಿದೆ. ಅಭಿವೃದ್ಧಿಪಡಿಸಿರುವ ಕೂಲಿಂಗ್ ಮಾಡ್ಯೂಲ್ ಕಾರ್ಯನಿರ್ವಹಿಸಲು ಸುಲಭವಾಗಿದೆ ಹಾಗೂ ಆರ್ಥಿಕ (ಲಾಭ:ವೆಚ್ಚ ಅನುಪಾತವು 1.18:1) ಮತ್ತು ಪರಿಸರ ಸ್ನೇಹಿಯೂ ಆಗಿದೆ.

3.5.4 Solid state cooling module for raw milk cooling: Proper cleaning and rapid cooling at 4°C or less temperature is essential to avoid spoilage of milk. The present refrigeration system provides more cooling effect by using refrigerants but is has some disadvantages like emission of GHC's. Considering these demerits of conventional refrigerator system, the solid state refrigerator was designed and developed. The module developed iscompact, reliable, noiseless, flexible, eco-friendly and economical (B:C ratio of 1.18:1).

3.5.5 ಚಂದ್ರಿಕೆಯಿಂದ ರೇಷ್ಮೆಗೂಡು ಬಿಡಿಸುವ ಬ್ಯಾಟರಿಚಾಲಿತ ಸಾಧನ: ರೇಷ್ಮೆ ಉತ್ಪಾದನೆಯಲ್ಲಿ ಚಂದ್ರಿಕೆಯಿಂದ ರೇಷ್ಮೆಗೂಡು ಬಿಡಿಸುವುದು ಕಾರ್ಮಿಕ ತೀವ್ರ ಚಟುವಟಿಕೆಗಳಲ್ಲಿ ಒಂದಾಗಿದೆ. ಭಾರತದಲ್ಲಿ ರೇಷ್ಮೆ ಗೂಡುಗಳನ್ನು ಕೈಯಿಂದ ಬಿಡಿಸಲಾಗುತ್ತದೆ, ಇದು ನಿಧಾನ ಪ್ರಕ್ರಿಯೆ ಮತ್ತು ಶ್ರಮದಾಯಕ ಕೆಲಸವಾಗಿದೆ. ಅದ್ದರಿಂದ ಬ್ಯಾಟರಿಚಾಲಿತ ರೇಷ್ಮೆಗೂಡು ಬಿಡಿಸುವ ಸಾಧನವನ್ನು ಅಭಿವೃದ್ಧಿ ಪಡಿಸಲಾಗಿದೆ. ಚಂದ್ರಿಕೆಯಿಂದ ಒಬ್ಬ ಮನುಷ್ಯ ಗೂಡುನ್ನು ಬಿಡಿಸಲು 30–35 ನಿಮಿಷಗಳನ್ನು ತೆಗೆದುಕೊಳ್ಳುತ್ತಾನೆ. ಅದರೆ ಬ್ಯಾಟರಿಚಾಲಿತ ರೇಷ್ಮೆಗೂಡು ಬಿಡಿಸುವ ಸಾಧನದಿಂದ ಕೇವಲ 6–7 ನಿಮಿಷದಲ್ಲಿ ಗೂಡನ್ನು ತೆಗೆಯಬಹುದು. ಅದುದರಿಂದ ಕೈಯಲ್ಲಿ ಬಿಡಿಸುವುದಕ್ಕೆ ಹೋಲಿಸಿದರೆ ಬ್ಯಾಟರಿಚಾಲಿತ ರೇಷ್ಮೆಗೂಡು ಬಿಡಿಸುವ ಕಾರ್ಯಚರಣೆ ವೆಚ್ಚ ಬಹಳ ಕಡಿಮೆ, ಈ ಸಾಧನದಿಂದ ಚಂದ್ರಿಕೆಯನ್ನು ಶುಚ್ಚಿಗೊಳ್ಳಿಸಲು ಬಹಳ ಅನುಕೂಲವಾಗುತ್ತದೆ, ಈ ಬ್ಯಾಟರಿಚಾಲಿತ ಯಂತ್ರಕ್ಕೆ ಸುಮಾರು ರೂ.9000/–ಗಳ ವೆಚ್ಚವಾಗುತ್ತದೆ.

3.5.5 Design and Development of Battery Operated Cocoon Harvester for Silkworm Mountages (Bamboo Mountages): Manual harvesting of cocoons from chandrike is labour-intensive and also a time-consuming process. To overcome this, the battery-operated cocoon harvester was developed to suit for one-man operation. Harvesting of cocoons from bamboo mountage takes around 30-35 minutes by manually, in case of developed battery operated cocoon harvester takes only 6 - 7 minutes to harvest one bamboo mountage. The cost of operation of battery operated cocoon harvester was very less as compared to manual harvesting. The machine is also used for cleaning of bamboo mountage. The cost of cocoon harvester is approximately Rs.9,000/- (Nine thousand rupees only).

3.6 ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿದ ಹೊಸ ತಂತ್ರಜ್ಞಾನಗಳು

3.6.1 ವಿವಿಧ ಬೆಳೆಗಳ ಬಿಡುಗಡೆಗೆ ಶಿಫಾರಸ್ಸು ಮಾಡಿದ ತಳಿಗಳು

ಒಟ್ಟು ಹತ್ತು ತಳಿಗಳನ್ನು 2020–21 ನೇ ಸಾಲಿನಲ್ಲಿ ಬಿಡುಗಡೆಗೆ ಶಿಫಾರಸ್ಸು ಮಾಡಲಾಗಿದೆ. ಅವುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ:

ಅ) **ಭತ್ತ : ಕೆ.ಎಂ.ಪಿ. 220 :** ಈ ತಳಿಯು ಮಧ್ಯಮಾವಧಿ ತಳಿಯಾಗಿದ್ದು, ಬಿತ್ತನೆಯಾದ 125 ರಿಂದ 130 ದಿನಗಳ ನಂತರ ಕಟಾವಿಗೆ ಬರುತ್ತದೆ. ಈ ತಳಿಯನ್ನು ಕರ್ನಾಟಕದ ದಕ್ಷಿಣ ಒಣ ವಲಯದಲ್ಲಿ (ವಲಯ–6) ಜುಲೈ 1ನೇ ವಾರದಿಂದ 2ನೇ ವಾರದೊಳಗೆ ಬಿತ್ತಿ, ಆಗಸ್ಟ್ ಮೊದಲನೇ ವಾರದೊಳಗೆ ನಾಟಿ ಮಾಡಲು ಸೂಕ್ತವಾಗಿರುತ್ತದೆ. ಈ ತಳಿಯ ಅಕ್ಕಿಯು ಕೆಂಪು ಬಣ್ಣದಾಗಿದ್ದು, ಕಾಳುಗಳು ಉದ್ದ ಮತ್ತು ದಪ್ಪವಾಗಿದ್ದು, ಜ್ಯೋತಿ ಭತ್ತದ ಕಾಳುಗಳಿಗೆ ಹೆಚ್ಚಾಗಿ ಹೋಲುತ್ತವೆ. ಜ್ಯೋತಿ ಭತ್ತದ ತಳಿಗೆ ಹೋಲಿಸಿದಾಗ, ಕೆ.ಎಂ.ಪಿ. 220 ತಳಿಯು ಬೆಂಕಿರೋಗಕ್ಕೆ ಸಾಧಾರಣ ಸಹಿಷ್ಣುತೆಯನ್ನು ಹೊಂದಿದ್ದು, ಸ್ವಲ್ಪ ಎತ್ತರಕ್ಕೆ ಬೆಳೆಯುವ ಕಾರಣ ಹೆಚ್ಚಿನ

3.6 New Technologies Developed and Released

3.6.1 Crop Varieties recommended for release:

Ten varieties have been recommended for release during 2020-21. The details of the same are given below.

a) **Paddy: KMP 220 :** This is a medium duration variety that can be harvested in 125 to 130 days after sowing. This variety can be sown during July 1st to 2nd week and transplanted within 1st week of August in Southern Dry Zone of Karnataka (Zone-6). The grains of this variety are long bold with red kernel and are highly similar to the grains of Jyothi rice variety. Compared to Jyothi rice variety, KMP-220 is moderately tolerant to blast disease and is taller than Jyothi variety. It also gives higher straw and grain yield.

ಕೋಷ್ಟಕ 25 : 2020–21ನೇ ಸಾಲಿನಲ್ಲಿ ಬಿಡುಗಡೆಗೆ ಶಿಫಾರಸ್ಸು ಮಾಡಿದ ತಳಿ / ಸಂಕರಣ ತಳಿಗಳ ವಿವರ

Table 25 : Varieties / hybrids recommended for release during 2020-21

ಬೆಳೆಗಳು / Crops	ಸಂಖ್ಯೆ/No.	ತಳಿ/Variety/ ಸಂಕರಣ/Hybrid	ಶಿಫಾರಸ್ಸು ಮಾಡಿ ವಲಯ/ Zone Recommended
ಭತ್ತ Paddy	1	ಕೆ.ಎಂ.ಪಿ. 220 KMP 220	ವಲಯ 6 Zone 6
ಭತ್ತ Paddy	1	ಎಂ.ಎಸ್.ಎನ್. 99 MSN-99	ವಲಯ 6 Zone 6
ರಾಗಿ Ragi	1	ಕೆ.ಎಂ.ಆರ್. 316 KMR-316	ವಲಯ 5 ಮತ್ತು 6 Zone 5 and 6
ನವಣೆ Foxtail Millet	1	ಜಿ.ಪಿ.ಯು.ಎಫ್. 3 GPUF-3	ವಲಯ 5 ಮತ್ತು 6 Zone 5 and 6
ಸಾಮೆ Little Millet	1	ಜಿ.ಪಿ.ಯು.ಎಲ್. 6 GPUL-6	ವಲಯ 5 ಮತ್ತು 6 Zone 5 and 6
ಬರಗು Proso Millet	1	ಜಿ.ಪಿ.ಯು.ಪಿ 28 GPUP-28	ವಲಯ 5 ಮತ್ತು 6 Zone 5 and 6
ಬೀಜದ ದಂಟು Grain Amaranth	1	ಕೆ.ಬಿ.ಜಿ.ಎ. 15 KBGA-15	ವಲಯ 5 ಮತ್ತು 6 Zone 5 and 6
ಕಬ್ಬು Sugarcane	1	ಸಿ.ಓ.ವಿ.ಸಿ. 18061 COVC-18061	ವಲಯ 6 Zone 6
ಮೇವಿನ ತೋಕೆಗೋಧಿ Fodder Oats	1	ಆರ್.ಓ.–11–1 RO-11-1	ವಲಯ 5 ಮತ್ತು 6 Zone 5 and 6
ಹಲಸು Jack Fruit	1	ಬೈರಚಂದ್ರ Byrachandra	ವಲಯ 5 Zone 5

ಹುಲ್ಲು ಹಾಗೂ ಧಾನ್ಯದ ಇಳುವರಿಯನ್ನು ನೀಡುತ್ತದೆ. ಆದ ಕಾರಣ ಬೆಂಕಿರೋಗಕ್ಕೆ ತುತ್ತಾಗುವ ಜ್ಯೋತಿ ತಳಿಯ ಬದಲು ಕೆ.ಎಂ.ಪಿ. 220 ತಳಿಯನ್ನು ಬೆಳೆಯಬಹುದಾಗಿದೆ. ಈ ತಳಿಯು ಪ್ರತಿ ಎಕರೆಗೆ 24–26 ಕ್ವಿಂಟಾಲ್ ಧಾನ್ಯದ ಇಳುವರಿ ನೀಡುವ ಸಾಮರ್ಥ್ಯವನ್ನು ಹೊಂದಿರುತ್ತದೆ.ಆ)

ಆ) **ಭತ್ತ: ಎಂ.ಎಸ್.ಎನ್.99 (ಐ.ಇ.ಟಿ. 283490) :** ಕರ್ನಾಟಕ ರಾಜ್ಯದ ದಕ್ಷಿಣ ಒಣ ವಲಯ (ವಲಯ–6)ರ ನೀರಾವರಿ ಪ್ರದೇಶಗಳಲ್ಲಿ ಮುಂಗಾರು (ಜೂನ್–ಜುಲೈ), ತಡವಾದ ಮುಂಗಾರು (ಆಗಸ್ಟ್ – ಸೆಪ್ಟೆಂಬರ್) ಮತ್ತು ಬೇಸಿಗೆ (ಜನವರಿ) ಹಂಗಾಮಿಗೆ ಸೂಕ್ತವಾದ ಅಲ್ಪಾವಧಿ (115–120 ದಿನಗಳು) ತಳಿಯಾಗಿದ್ದು, 100–110 ಸೆಂ.ಮೀ. ಎತ್ತರ ಬೆಳೆಯುತ್ತದೆ. ಇದರ ಕಾಂಡವು ಗಟ್ಟಿಯಾಗಿದ್ದು ನೇರವಾಗಿ ಬೆಳೆಯುವುದರಿಂದ ಚದರ ಮೀಟರಿಗೆ 50–60 ಗುಣಿಗಳ ನಾಟಿಗೆ ಸೂಕ್ತವಾಗಿದೆ. ಈ ತಳಿಯು ಮಧ್ಯಮ ಸಣ್ಣ ಕಾಳನ್ನು ಹೊಂದಿ ಉತ್ತಮ ರುಚಿಕರ ಅನ್ನವನ್ನು ನೀಡುತ್ತದೆ. ಅಗತ್ಯತೆಗನುಗುಣವಾಗಿ ಸೂಕ್ತ ಕೀಟ ಮತ್ತು ರೋಗ ನಿಯಂತ್ರಣ ಕ್ರಮಗಳನ್ನು (ಮುಖ್ಯವಾಗಿ ಗೊನೆ ಬೆಂಕಿರೋಗಕ್ಕೆ) ಕೈಗೊಂಡರ ಪ್ರತಿ ಹೆಕ್ಟೇರಿಗೆ 60–65 ಕ್ವಿಂಟಾಲ್ ಕಾಳು ಮತ್ತು 70–75 ಕ್ವಿಂಟಾಲ್ ಹುಲ್ಲಿನ ಇಳುವರಿಯನ್ನು ನಿರೀಕ್ಷಿಸಬಹುದು.

Hence, KMP-220 can be grown instead of blast suceptible Jyothi variety. The grain yield potential of this variety is 24-26 q/acre.

b) **Paddy: MSN 99 (IET 283490) :** It is an early duration (115-120 days) variety suitable for sowing in kharif (June-July), late kahrif (August – September) and Summer(January) seasons in irrigated areas of Southern Dry Zone (Zone-6) of Karnataka. A medium tall (100-110 cm) variety with strong culm and erect growing habit, favouring close planting with 50-60 hills/ sq.mt. It has medium slender grains with good cooking properties. With need based control measure against pests and diseases, especially neck blast, one can expect 60-65 quintals of grains and 70-75 quintals of straw yield per hectare.

ಇ) **ರಾಗಿ: ಕೆ.ಎಂ.ಆರ್. 316 :** ಈ ತಳಿಯು ಅಲ್ಪಾವಧಿ ತಳಿಯಾಗಿದ್ದು, 100 ರಿಂದ 105 ದಿನಗಳೊಳಗೆ ಕಟಾವಿಗೆ ಬರುತ್ತದೆ. ಈ ತಳಿಯು ಮುಂಗಾರಿಗೆ (ಜೂನ್–ಜುಲೈ) ಹಾಗೂ ತಡ ಮುಂಗಾರಿನಲ್ಲಿ ಬಿತ್ತಲು (ಆಗಸ್ಟ್–ಸೆಪ್ಟೆಂಬರ್) ಸೂಕ್ತವಾಗಿರುತ್ತದೆ. ಈ ತಳಿಯ ಇಲುಕುಗಳು ಉದ್ದವಾಗಿದ್ದು, ತುದಿ ಒಳಮೈಗೆ ಬಾಗಿರುತ್ತದೆ ಹಾಗೂ ತೆನೆಗಳು ಹಸಿರು ಬಣ್ಣದಿಂದ ಕೂಡಿರುತ್ತವೆ. ಸದರಿ ತಳಿಯು ನೀರಾವರಿ ಹಾಗೂ ಮಳೆಯಾಶ್ರಿತ ಪ್ರದೇಶಗಳಿಗೆ ಸೂಕ್ತವಾಗಿದ್ದು, ಬೆಂಕಿರೋಗ ಮತ್ತು ಬುಡಕೊಳೆ ರೋಗಕ್ಕೆ ನಿರೋಧಕತೆಯನ್ನು ಹೊಂದಿರುತ್ತದೆ. ಈ ತಳಿಯು ನೀರಾವರಿಯಲ್ಲಿ ಪ್ರತಿ ಎಕರೆಗೆ 20–22 ಕ್ವಿಂಟಾಲ್ ಹಾಗೂ ಮಳೆಯಾಶ್ರಿತ ಪ್ರದೇಶದಲ್ಲಿ 12–14 ಕ್ವಿಂಟಾಲ್ ಧಾನ್ಯದ ಇಳುವರಿ ನೀಡುವ ಸಾಮರ್ಥ್ಯ ಹೊಂದಿರುತ್ತದೆ.

ಈ) **ನವಣೆ: ಜಿ.ಪಿ.ಯು.ಎಫ್. 3 :** ಈ ತಳಿಯು ಮಧ್ಯಮ ಎತ್ತರವಿದ್ದು ಸುಮಾರು 85–90 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಈ ತಳಿಯು ದಟ್ಟವಾದ ಮತ್ತು ಉದ್ದವಾದ ತೆನೆಯನ್ನು ಹೊಂದಿದ್ದು, ಬೀಜವು ಅಂಡಾಕಾರವಿದ್ದು ಹಳದಿ ಬಣ್ಣದಿಂದ ಕೂಡಿವೆ. ಇದು ತುಕ್ಕು ಮತ್ತು ಎಲೆ ಅಂಗಮಾರಿ ರೋಗಗಳಿಗೆ ಮಧ್ಯಮ ನಿರೋಧಕತೆಯನ್ನು ಹೊಂದಿದೆ. ಈ ತಳಿಯನ್ನು ಮುಂಗಾರು (ಜೂನ್–ಜುಲೈ) ಮತ್ತು ಬೇಸಿಗೆ (ಜನವರಿ) ಕಾಲಗಳಲ್ಲಿ ಬೆಳೆಯಬಹುದು. ಹೆಕ್ಟೇರ್‌ಗೆ ಸುಮಾರು 15 ರಿಂದ 20 ಕ್ವಿಂ. ಇಳುವರಿಯನ್ನು ಪಡೆಯಬಹುದು. ತಳಿಯನ್ನು ರಾಜ್ಯದ ವಲಯಗಳಾದ 5 ಮತ್ತು 6 ರಲ್ಲಿ ಬೆಳೆಯಲು ಶಿಫಾರಸ್ಸು ಮಾಡಲಾಗಿದೆ.

ಉ) **ಸಾಮೆ: ಜಿ.ಪಿ.ಯು.ಎಲ್. 6 :** ಈ ತಳಿಯು ದಟ್ಟವಾದ ಮತ್ತು ಆರ್ಕಿಡ್ ಆಕಾರದ ತೆನೆಯನ್ನು ಹೊಂದಿದ್ದು, ಬೀಜಗಳು ಅಂಡಾಕಾರವಿದ್ದು ಕಂದು ಬಣ್ಣದಿಂದ ಕೂಡಿವೆ. ಈ ತಳಿಯು ಮಧ್ಯಮ ಎತ್ತರವಿದ್ದು, ಸುಮಾರು 85–90 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಈ ತಳಿಯನ್ನು ಮುಂಗಾರು (ಜೂನ್–ಜುಲೈ) ಮತ್ತು ಬೇಸಿಗೆ (ಜನವರಿ) ಕಾಲಗಳಲ್ಲಿ ಬೆಳೆಯಬಹುದು. ಈ ತಳಿಯು ಎಲೆ ಅಂಗಮಾರಿ ರೋಗ ಮತ್ತು ಕಂದು ಚುಕ್ಕೆ ರೋಗಕ್ಕೆ ಸಾಧಾರಣ ನಿರೋಧಕತೆಯನ್ನು ಹೊಂದಿದೆ. ಹೆಕ್ಟೇರ್‌ಗೆ ಸುಮಾರು 15 ರಿಂದ 20 ಕ್ವಿಂ. ಇಳುವರಿಯನ್ನು ಪಡೆಯಬಹುದು. ಈ ತಳಿಯನ್ನು ರಾಜ್ಯದ ವಲಯಗಳಾದ 5 ಮತ್ತು 6 ರಲ್ಲಿ ಬೆಳೆಯಲು ಶಿಫಾರಸ್ಸು ಮಾಡಲಾಗಿದೆ.

ಊ) **ಬರಗು: ಜಿಪಿಯುಪಿ. 28 :** ಈ ತಳಿಯು ಮಧ್ಯಮ ಸಾಂದ್ರತೆ ಮತ್ತು ಗ್ಲೊಬೋಸ್–ಎಲಿಪ್ಟಿಕಲ್ ಆಕಾರದ ತೆನೆಯನ್ನು ಹೊಂದಿದ್ದು, ಬೀಜಗಳು ಅಂಡಾಕಾರವಿದ್ದು ಹಳದಿ ಬಣ್ಣದಿಂದ ಕೂಡಿವೆ. ಈ ತಳಿಯು ಮಧ್ಯಮ ಎತ್ತರವಿದ್ದು ಸುಮಾರು 80–85 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಈ ತಳಿಯನ್ನು ಮುಂಗಾರು (ಜೂನ್–ಜುಲೈ) ಮತ್ತು ಬೇಸಿಗೆ (ಜನವರಿ) ಕಾಲಗಳಲ್ಲಿ ಬೆಳೆಯಬಹುದು. ಈ ತಳಿಯು ಎಲೆ ಅಂಗಮಾರಿ ರೋಗ ಮತ್ತು ಕಂದು ಚುಕ್ಕೆ ರೋಗಕ್ಕೆ ಮಧ್ಯಮ ನಿರೋಧಕತೆಯನ್ನು ಹೊಂದಿದೆ. ಹೆಕ್ಟೇರ್‌ಗೆ ಸುಮಾರು 17 ರಿಂದ 20 ಕ್ವಿಂ. ಇಳುವರಿಯನ್ನು ಪಡೆಯಬಹುದು. ತಳಿಯನ್ನು ರಾಜ್ಯದ ವಲಯಗಳಾದ 5 ಮತ್ತು 6 ರಲ್ಲಿ ಬೆಳೆಯಲು ಶಿಫಾರಸ್ಸು ಮಾಡಲಾಗಿದೆ.

c) **Ragi: KMR 316 :** Short duration variety that can be harvested in 100 to 105 days after sowing and can be cultivated during *kharif* (June - July) and late *kharif* (August-September) seasons. Ear heads of this variety are green in color with longtip incurved fingers. This variety is suitable for cultivation in both irrigated and rainfed condition and is also resistant to blast and foot rot diseases. The grain yield potential of this variety is 20-22 and 12-14 q/acre under irrigated and rainfed situations, respectively.

d) **Foxtail millet: GPUF 3 :** It is a medium duration variety matures in 85 to 90 days. It has semi compact and oblong shaped inflorescence with oval shaped yellow colored seeds. It is moderately resistant to rust and leaf blight diseases. The variety is suitable for sowing in both Kharif(June-July) and summer(January). It yields 15-20 q/ha under protective irrigation. The variety is recommended for cultivation in both zones 5 & 6.

e) **Little millet: GPUL 6 :** This variety has compact panicle with archid shaped inflorescence. Grain is oval shaped with dark brown colour. It is medium duration and matures in 85-90 days. The variety is suitable for sowing in both Kharif(June-July) and summer(January). This variety is moderately resistant to leaf blight and brown spot diseases. It yields 15-20 q/ha under protective irrigation. It is recommended for cultivation in both zones 5 & 6.

f) **Proso Millet: GPUP 28** : This variety has intermediate compact with globose elliptic shaped inflorescence. Grain is oval shaped with golden yellow colour possesses higher test weight. This variety is moderately resistant to leaf blight and resistant to brown spot diseases. The proposed variety is medium duration and matures in 80-85 days. The variety is suitable for sowing in both Kharif(June-July) and summer(January). It yields 17-20 q/ha under protective irrigation. It is recommended for cultivation in both zones 5 & 6.

ಖ) **ಬೀಜದ ದಂಟು: ಕೆಬಿಜಿಎ 15 :** ಈ ತಳಿಯು ಅಧಿಕ ಇಳುವರಿಯನ್ನು ನೀಡುವ ತಳಿಯಾಗಿದ್ದು, ಖುಷ್ಕಿಯಲ್ಲಿ 16–18 ಕ್ವಿ/ಹೆ ಹಾಗೂ ನೀರಾವರಿಯಲ್ಲಿ 22–24 ಕ್ವಿ/ಹೆ ರಷ್ಟು ಪಡೆಯಬಹುದು. ಈ ತಳಿಯು 90–95 ದಿನಗಳಲ್ಲಿ ಕಟಾವಿಗೆ ಬರುತ್ತದೆ ಹಾಗೂ ಗಿಡವು ಹೆಚ್ಚು ಎತ್ತರ ಬೆಳೆಯುತ್ತದೆ (170–180 ಸೆಂ.ಮೀ). ಈ ತಳಿಯು ಹೂ ಗೊಂಚಲು ಗೋಳಾಕಾರ ವಿದ್ದು, ಕುಂಕುಮ ಮಿಶ್ರಿತ ಹಸಿರು ಬಣ್ಣದಿಂದ ಕೂಡಿದ್ದು, ನೋಡಲು ಬಹಳ ಆಕರ್ಷಣೀಯವಾಗಿರುತ್ತದೆ. ಈ ತಳಿಯು ಎಲೆ ತುಕ್ಕು ರೋಗ, ಫಿಲ್ಲೋಡಿ ಮತ್ತು ಎಲೆ ಚುಕ್ಕೆ ರೋಗಗಳು ಹಾಗೂ ಕೀಟಗಳಿಗೆ ಸಹಿಷ್ಣುತೆ ಹೊಂದಿರುತ್ತದೆ. ತಳಿಯನ್ನು ರಾಜ್ಯದ ವಲಯಗಳಾದ 5 ಮತ್ತು 6 ರಲ್ಲಿ ಬೆಳೆಯಲು ಶಿಫಾರಸ್ಸು ಮಾಡಲಾಗಿದೆ).

g) **Grain Amaranth: KBGA 15 :** It is a high yielding variety that yields 16-18 q/ha under rainfed condition and 22-24 q/ha under protective irrigation. It matures in 90-95 days with good plant height(170-180 cm) and pink mixed green coloured attractive inflorescence. The variety is tolerant to leaf rust, phyllody, leaf spot diseases and insect pests. It is recommended for cultivation in both zones 5 & 6.

ಗ) **ಕಬ್ಬು: ಸಿಓವಿಸಿ 18061 :** ಈ ತಳಿಯನ್ನು ಸಿಓ 86032 ಮತ್ತು ಸಿಓ 86011 ತಳಿಗಳ ಸಂಕರಣದಿಂದ ಅಭಿವೃದ್ಧಿಪಡಿಸಲಾಗಿದ್ದು, ದಕ್ಷಿಣ ಕರ್ನಾಟಕದ ವಲಯ 6 ಕ್ಕೆ ಶಿಫಾರಸ್ಸು ಮಾಡಲಾಗಿದೆ. ಈ ತಳಿಗೆ ಸೂಲಂಗಿಯು ಅತಿ ವಿರಳ ಹಾಗೂ ನಿಧಾನವಾಗಿ ಬರುವುದರಿಂದ ವರ್ಷದ ಕಬ್ಬು ಬೆಳೆಯುವ ಎಲ್ಲಾ ಕಾಲಗಳಲ್ಲೂ ನಾಟಿ ಮಾಡಬಹುದಾಗಿದ್ದು ವಿಶೇಷವಾಗಿ ಜನವರಿ–ಫೆಬ್ರವರಿ ತಿಂಗಳಲ್ಲಿ ನಾಟಿ ಮಾಡುವುದಕ್ಕೆ ಯೋಗ್ಯವಾಗಿರುತ್ತದೆ. ಇದು ಮಧ್ಯಮಾವದಿ (12–13 ತಿಂಗಳು) ತಳಿಯಾಗಿದ್ದು ಉತ್ತಮ ಕಬ್ಬಿನ ಇಳುವರಿ (70–80 ಟನ್/ಎಕರೆಗೆ) ಹಾಗೂ ಸಕ್ಕರೆ ಅಂಶದ ಸಾಮರ್ಥ್ಯ ಹೊಂದಿರುತ್ತದೆ. ಈ ತಳಿಯು ಉತ್ತಮ ತೆಂಡೆಯೊಡೆಯುವ ಗುಣ ಹೊಂದಿದ್ದು, ಕಬ್ಬಿನ ಅಗಲ ಸಾಲು ನಾಟಿಗೆ ಸೂಕ್ತವಾಗಿದೆ. ಈ ತಳಿಯ ಕಬ್ಬಿನ ಗಾತ್ರ ಮಧ್ಯಮ ದಪ್ಪವಾಗಿದ್ದು, ಕಬ್ಬಿನ ಬಣ್ಣವು ಹಸಿರು ಮಿಶ್ರಿತ ಹಳದಿ ಬಣ್ಣ ಹೊಂದಿರುತ್ತದೆ. ಎಲೆಗಳು ಹಚ್ಚ ಹಸುರಾಗಿದ್ದು, ಸ್ವಯಂ ಗರಿ ಕಳಚುವ ಗುಣ ಹೊಂದಿರುತ್ತದೆ. ಈ ತಳಿಯು ಉತ್ತಮ ಕೂಳೆ ಬೆಳೆ ಸಾಮರ್ಥ್ಯ ಹೊಂದಿದೆ ಮತ್ತು ಉತ್ಕೃಷ್ಟವಾದ ಬೆಲ್ಲ ತಯಾರಿಕೆಗೆ ಯೋಗ್ಯವಾಗಿರುತ್ತದೆ.

h) **Sugarcane: CoVC 18061 :** It is developed from the cross between Co86032 and Co86011 and recommended for commercial cultivation in zone 6 of Southern Karnataka. It is very sparse and late flowering variety and recommended for all the planting seasons of Sugarcane. It is ideal variety for January- February planting season. It is midlate maturing (12-13 months) with high cane yield (70-80 t/acre) and better quality. It has high tillering potential and suitable for wide row planting. It is a medium thick cane, colour of the cane is greenish yellow and leaf canopy is lush green and semi erect. It has self detrashing habit and possesses good jaggery recovery and also exhibits good ratooning.

ಎ) **ಮೇವಿನ ತೋಕೆ ಗೋಧಿ: ಆರ್‌ಓ–11–1 :** ಮೇವಿನ ತೋಕೆ ಗೋಧಿ ಒಂದು ಪ್ರಮುಖ ಹಿಂಗಾರಿನ ಮೇವಿನ ಬೆಳೆಯಾಗಿದ್ದು, ಮಹಾರಾಷ್ಟ್ರದ, ರಾಹೋರಿ ಕೇಂದ್ರದಿಂದ ಅಭಿವೃದ್ಧಿಪಡಿಸಿರುವ ಆರ್.ಓ.–II–1 ಹೊಸ ತಳಿಯನ್ನು ಅಖಿಲ ಭಾರತ ಮಟ್ಟದಲ್ಲಿ ಪರೀಕ್ಷಿಸಿ ರಾಷ್ಟ್ರಮಟ್ಟದಲ್ಲಿ ಬಿಡುಗಡೆಗೊಳಿಸಲಾಗಿದೆ. ಮಂಡ್ಯದಲ್ಲಿರುವ ಅಖಿಲ ಭಾರತ ಸುಸಂಘಟಿತ ಮೇವಿನ ಬೆಳೆ ಸಂಶೋಧನಾ ಪ್ರಾಯೋಜನೆ ವತಿಯಿಂದ ದಕ್ಷಿಣ ಕರ್ನಾಟಕದ ವಲಯ–5 ಮತ್ತು 6 ಪ್ರದೇಶಗಳಲ್ಲಿ ಇದನ್ನು ಪರೀಕ್ಷಿಸಲಾಗಿದ್ದು, ಹೆಚ್ಚು ಇಳುವರಿ ಹಾಗೂ ಗುಣಮಟ್ಟದ ಹಸಿರು ಮೇವಿನಿಂದಾಗಿ ಇದನ್ನು ಹಿಂಗಾರು ತಿಂಗಳುಗಳಲ್ಲಿ (ನವೆಂಬರ್–ಫೆಬ್ರವರಿ) ಬೆಳೆಯಲು ಅಳವಡಿಸಿಕೊಳ್ಳಲಾಗಿದೆ. ಈ ತಳಿಯ ಬೆಳೆವಣಿಗೆ ಎತ್ತರವಾಗಿದ್ದು (110 ರಿಂದ 120 ಸೆ.ಮೀ), ಎಲೆಯ ಉದ್ದ (48 ರಿಂದ 50 ಸೆ.ಮೀ) ಮತ್ತು ಅಗಲವಾಗಿದ್ದು (2.1 ರಿಂದ 2. ಸೆ.ಮೀ) ಹೆಚ್ಚು ಎಲೆಕಾಂಡ ಅನುಪಾತ (0.55) ಹಾಗೂ ಹೆಚ್ಚು ಕಚ್ಚ ಸಸಾರಜನಕದಿಂದ (3 ರಿಂದ 3.5 ಕ್ವಿ/ಹೆ) ಉತ್ತಮ ಮೇವಿನ ಜೀರ್ಣತೆ ಗುಣಗಳನ್ನು ಹೊಂದಿದೆ. ಈ ತಳಿಯು ಎಲೆ ಅಂಗಮಾರಿ ರೋಗ ಹಾಗೂ ಬೇರು ಕೊಳೆರೋಗಗಳಿಗೆ ಸಹಿಷ್ಣುತೆ ಹೊಂದಿದ್ದು, ಈ ತಳಿಯ ಸಾವಿರ ಕಾಳಿನ ತೂಕ (42.6 ಗ್ರಾಂ) ಕಡಿಮೆ ಇದ್ದು, 80 ಕೆಜಿ/ಹೆ ಬೀಜದ ಪ್ರಮಾಣವು ಉತ್ತಮ ಹಸಿರು ಮೇವಿನ ಇಳುವರಿ ಪಡೆಯಲು ಸಾಕಾಗುತ್ತದೆ.

i) **Fodder Oats: RO-11-1:** Forage Oats is an important Rabi cereal crop and RO-11-1 is a new variety in forage oats developed at AICRP FCU Rahuri centre Maharastra. It is having superior green forage yield(12-16 t / ac) and high crude protein yield(3-3.5 q/ha) it is a tall variety(110-120 cm) with long(48.50 cm) and broad leaves(2.1-2.6 cm) with high leaf stem ratio(0.55) and hence improved quality and digestibility attributes. RO-11-1 is moderately tolerant to leaf blight, root rot and less susceptible to aphids. The compact seeds have lesser thousand grain weight(42.6 g) and the seed rate of 80 kg/ha is sufficient to obtain better yield.

ಏ) **ಹಲಸು: ಬೈರಚಂದ್ರ :** ಇದು ಬೇಗ ಫಸಲಿಗೆ ಬರುತ್ತದೆ (3.5 ವರ್ಷಕ್ಕೆ), ಹಸಿರು ತೊಗಟೆ ಮತ್ತು ಕಿತ್ತಳೆ ಬಣ್ಣದ ತೊಳೆಗಳೊಂದಿಗೆ ಉದ್ದವಾದ ಆಕಾರದ ಹಣ್ಣುಗಳು, ಪ್ರತಿ ಕಿ.ಗ್ರಾಂಗೆ ತೊಳೆಗಳ ತೂಕ 650–700 ಗ್ರಾಂ ಇರುತ್ತದೆ. ತೊಳೆಯು 25 ರಿಂದ 35 ಗ್ರಾಂ ಇರುತ್ತದೆ, ಇದರ ತೊಳೆ ಮತ್ತು ಹಣ್ಣಿನ ಅನುಪಾತವು ಉತ್ತಮವಾಗಿದೆ (0.55), ಹಣ್ಣಿನ ತೊಗಟೆಯು ತೆಳುವಾಗಿದ್ದು ಪ್ರತಿ ಕಿ.ಗ್ರಾಂ ಹಣ್ಣಿಗೆ 300–350 ಗ್ರಾಂ ತೊಗಟೆ ಇರುತ್ತದೆ, ತೊಳೆಗಳ ಸಕ್ಕರೆ ಅಂಶವು 30–33^0 ಬ್ರೀಕ್ಸ್‌ನಷ್ಟಿದೆ, ಬೀಜಗಳು ಚಿಕ್ಕದಾಗಿದ್ದು, ಇಪ್ಪತ್ತು ಬೀಜಗಳ ತೂಕವು ಸರಿಸುಮಾರು 110–130 ಗ್ರಾಂ ಇದೆ, ಕೆಲವು ತೊಳೆಗಳು ಬೀಜರಹಿತವಾಗಿರುತ್ತವೆ, ಹಣ್ಣುಗಳು ಕಾಂಡ ಮತ್ತು ರಂಬೆಗಳಲ್ಲಿ ಬಿಡುತ್ತವೆ ಹಾಗೂ ದೊಡ್ಡದಾಗಿವೆ (>10 ಕಿ.ಗ್ರಾಂ/ಹಣ್ಣು), ತೊಳೆಗಳು ಮಧ್ಯಮ ಗಾತ್ರವಾಗಿದ್ದು, ತಿನ್ನಲು ಮತ್ತು ಮೌಲ್ಯವರ್ಧನೆಗೆ ಹೆಚ್ಚು ಸೂಕ್ತವಾಗಿವೆ, ವರ್ಷಕ್ಕೆ ಸರಾಸರಿ 120 ರಿಂದ 150 ಹಣ್ಣುಗಳು/ಮರ ಮತ್ತು ವರ್ಷಕ್ಕೆ ಎರಡು ಬಾರಿ ಫಲ ನೀಡುತ್ತದೆ (60–75 ಹಣ್ಣುಗಳು ಪ್ರತಿ ಋತುವಿಗೆ/ಮರಕ್ಕೆ), ಇದು ವ್ಯಾಪರಕ್ಕೆ ಮತ್ತು ಕೈ ತೋಟಕ್ಕೆ ಸೂಕ್ತವಾಗಿದೆ. ಇದು ತರಕಾರಿಗೆ ಮತ್ತು ಹಣ್ಣು, ಎರಡಕ್ಕೂ ಸೂಕ್ತವಾಗಿದೆ ಮತ್ತು ಹಣ್ಣಿನ ಗುಣಮಟ್ಟ ಉತ್ತಮವಾಗಿದು, ಅಂಟು ಕಡಿಮೆಯಾಗಿರುತ್ತದೆ.

3.6.2 ಸುಧಾರಿತ ಬೇಸಾಯ ಪದ್ಧತಿಗಳ ಕೈಪಿಡಿಯಲ್ಲಿ ಸೇರ್ಪಡೆಗೆ ಶಿಫಾರಸ್ಸು ಮಾಡಲಾದ ನೂತನ ತಾಂತ್ರಿಕತೆಗಳು

3.6.2.1 ಬೆಳೆ ಅಭಿವೃದ್ಧಿ (5)

ಸಸ್ಯ ಜೈವಿಕ ತಂತ್ರಜ್ಞಾನ (1)

ಅ) **ಶೇಂಗಾ ಬೆಳೆಯಲ್ಲಿ ಹೆಚ್ಚಿನ ಇಳುವರಿಗಾಗಿ ಕನಿಷ್ಟ ಗಾಳಿಯಾಡಿಸಿದ ಕಾಂಪೋಸ್ಟ್ ಟೀ (ಕಾಂಪೋಸ್ಟ್ ಕಷಾಯ) ಸಿಂಪರಣೆ:** ಶೇಂಗಾ ಬೆಳೆಯಲ್ಲಿ ಹೆಚ್ಚಿನ ಇಳುವರಿಗಾಗಿ (25–30%) ಕನಿಷ್ಟ ಗಾಳಿಯಾಡಿಸಿದ ಕಾಂಪೋಸ್ಟ್ ಕಷಾಯವನ್ನು ಸಿಂಪಡಿಸುವ ಸಂಯೋಜಿತ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ. ಏರೇಟರ್ ಬಳಸಿ ಕಾಂಪೋಸ್ಟ್ ಮತ್ತು ನೀರಿನ ಮಿಶ್ರಣವನ್ನು ಸತತವಾಗಿ ಗಾಳಿಯಾಡಿಸಿ ಕಾಂಪೋಸ್ಟ್ ಕಷಾಯವನ್ನು ತಯಾರಿಸಬಹುದು (ಸತತವಾಗಿ ಗಾಳಿಯಾಡಿಸಿದ ಕಾಂಪೋಸ್ಟ್ ಕಷಾಯ). ಈ ಕಾಂಪೋಸ್ಟ್ ಕಷಾಯವನ್ನು ತಯಾರಿಸುವಾಗ, ಕಾಂಪೋಸ್ಟ್ ಮತ್ತು ನೀರಿನ ಮಿಶ್ರಣವನ್ನು, ದಿನಕ್ಕೆ ಒಂದು ಬಾರಿ ಕೋಲಿನಿಂದ ಮಿಶ್ರಣ ಮಾಡಿ ಕನಿಷ್ಟ ಗಾಳಿಯಾಡಿಸಿ, ನಾಲ್ಕು ದಿನಗಳ ಕಾಲ ಇಡುವುದು (ಕನಿಷ್ಟ ಗಾಳಿಯಾಡಿಸಿದ ಕಾಂಪೋಸ್ಟ್ ಕಷಾಯ). ಕನಿಷ್ಟ ಗಾಳಿಯಾಡಿಸಿದ ಕಾಂಪೋಸ್ಟ್ ಕಷಾಯ ಸಿಂಪಡಣೆ ಶೇಂಗಾ ಬೆಳೆಯಯಲ್ಲಿ ಸಸ್ಯ ಜೀವರಾಶಿ, ಸಸ್ಯದ ಕಾಯಿಗಳ ಸಂಖ್ಯೆ, ಶೇಕಡಾವಾರು ಶೆಲ್ಲಿಂಗ್ ಪ್ರಮಾಣ, 100 ಕಾಯಿ ಒಣ ತೂಕ ಮತ್ತು ಇಳುವರಿಯನ್ನು ಹೆಚ್ಚಿಸುತ್ತದೆ. ಕಾಂಪೋಸ್ಟ್ ಕಷಾಯದ ಸಿಂಪಡಣೆಯು ಸಸ್ಯಗಳಲ್ಲಿ ರಕ್ಷಣಾತ್ಮಕ ಕಾರ್ಯಗಳನ್ನು (ಡಿಫೆನ್ಸ್ ಪ್ರೈಮಿಂಗ್) ಚುರುಕುಗೊಳಿಸುತ್ತದೆ. ಈ ತಂತ್ರಜ್ಞಾನವು ರೈತಸ್ನೇಹಿ, ಪರಿಸರಸ್ನೇಹಿ ಮತ್ತು ಆರ್ಥಿಕ ವಾಗಿದ್ದು (ಆದಾಯ:ವೆಚ್ಚ ಅನುಪಾತ 1:13), ಶಿಲೀಂದ್ರನಾಶಕದ ಬಳಕೆಯನ್ನು ಶೇ. 50 ರಷ್ಟು ಕಡಿಮೆಗೊಳಿಸುತ್ತದೆ.

  - ಸಮಗ್ರ ಕೃಷಿ ಪದ್ಧತಿ 5 ರಲ್ಲಿ : ಬೆಳೆ + ತೋಟಗಾರಿಕೆ + ಹೈನುಗಾರಿಕೆ + ಕುರಿ + ಕೋಳಿ ಸಾಕಾಣಿಕೆ ಪದ್ಧತಿಯಲ್ಲಿ ರೂ.12,962 ಗಳ ಖರ್ಚಿಗೆ (Intervention Cost) ರೂ.69,052/– ರಷ್ಟು ಅದಾಯ ಬಂದಿರುತ್ತದೆ.

  - In FS 5: crop + horticulture + dairy +sheep + poultry average cost of intervention was Rs.12962 resulting in a return of Rs.69052/-

  - ಸಮಗ್ರ ಕೃಷಿ ಪದ್ಧತಿ 4 ರಲ್ಲಿ : ಬೆಳೆ + ಹೈನುಗಾರಿಕೆ + ಕೋಳಿ ಸಾಕಾಣಿಕೆ ಸಮಗ್ರ ಕೃಷಿ ಪದ್ಧತಿಯಲ್ಲಿ ರೂ. 9,541 ಗಳ ಖರ್ಚಿಗೆ (Intervention Cost) ರೂ.82,400 ರಷ್ಟು ಆದಾಯ ಬಂದಿರುತ್ತದೆ.

  - In Crop + dairy + poultry FS average cost of intervention was Rs.9541/- resulting in a return of Rs.82400/-

  - ರೈತರ ಸಾಮರ್ಥ್ಯ ಹೆಚ್ಚಿಸಲು ಹಮ್ಮಿ ಕೊಂಡಂತಹ ಸಮಗ್ರ ಬೆಳೆ ನಿರ್ವಹಣೆ ಪದ್ಧತಿಗಳಿಂದ ರೈತರಿಗೆ ಸಮಗ್ರ ಕೀಟ ನಿರ್ವಹಣೆ, ಸಮಗ್ರ ರೋಗ ನಿರ್ವಹಣೆ, ಸಮಗ್ರ ಪೋಷಕಾಂಶ ನಿರ್ವಹಣೆ, ಸಮಗ್ರ ನೀರಿನ ನಿರ್ವಹಣೆ ಬಗ್ಗೆ ಹೆಚ್ಚಿನ ಜ್ಞಾನ ಲಭಿಸಿ, ಬಾಹ್ಯ ಪರಿಕರಗಳನ್ನು ಹಾಗೂ ರಸಾಯನಿಕ ಪರಿಕರಗಳನ್ನು ಬಳಸುವುದು ಕಡಿಮೆಯಾಗಿ ತಮ್ಮ ಸ್ವಂತ ಜಮೀನಿನಲ್ಲಿ ಸಾವಯುವ ಪೋಷಕಾಂಶಗಳ ಉತ್ಪಾದನೆ ಮಾಡಿಕೊಳ್ಳುತ್ತಿದ್ದಾರೆ.

  - Capacity building through training and demonstration of ICM (integrated crop management) practices including IPM, IDM, INM, IWM has resulted in reduction in the use of external purchased inputs. Resource recycling is encouraged.

  - ಜೇನು ಸಾಕಾಣಿಕೆ ಬಗ್ಗೆ ತರಬೇತಿಯಿಂದ – ರೈತರು ಜೇನು ಸಾಕಣಿಕೆ ತತ್ವಗಳನ್ನು ಕಲಿತು, ಜೇನು ಸಾಕಾಣಿಕೆಯಿಂದ ಚೆನ್ನಾಗಿ ಮಾಡುತ್ತಿದ್ದಾರೆ.

  - Training on honey bee rearing – farmers are gaining the skill and performing better

  - ಜಾನುವಾರುಗಳ ಸಾಮಾನ್ಯ ನಿರ್ವಹಣೆ ಬಗ್ಗೆ ತರಬೇತಿ ಕಾರ್ಯಕ್ರಮಗಳು ರೈತರಿಗೆ ನೆರವಾಗಿ ಜಾನುವಾರುಗಳ ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿ ಆಗುತ್ತಿದೆ, ಹೆಚ್ಚಿನ ಪೋಷಕಾಂಶ ನಿರ್ವಹಣೆಯಿಂದ ಜಾನುವಾರುಗಳ ಹಾಲಿನ ಇಳುವರಿ ಹೆಚ್ಚಾಗುತ್ತಿದೆ.

  - Training on general maintenance of livestock has resulted in good health of animals, sanitation, higher milk yield.

- ಟ್ರೈಕೋಡರ್ಮ ಬಳಕೆ ಬಗ್ಗೆ ತರಬೇತಿ ಕಾರ್ಯಕ್ರಮಗಳಿಂದ, ಕೊಟ್ಟಿಗೆ ಗೊಬ್ಬರ ಮತ್ತು ಎರೆ ಹುಳು ಗೊಬ್ಬರಗಳ ಬಳಕೆಯಿಂದ ರಸಾಯನಿಕ ಗೊಬ್ಬರಗಳು ಮತ್ತು ರಸಾಯನಿಕ ಕೀಟನಾಶಕಗಳ ಬಳಕೆಗಳು ಕಡಿಮೆಯಾಗುತ್ತಿವೆ.
- ಅಜೋಲ್ಲಾ ಕೃಷಿಯನ್ನು ಪ್ರೋತ್ಸಾಹಿಸಲಾಗುತ್ತಿದೆ. ಇದರಿಂದ ಜಾನುವಾರುಗಳ ಪಿಷ್ಠ ಅವಶ್ಯಕತೆ ಸ್ವಲ್ಪ ಮಟ್ಟಿಗೆ ಪೂರೈಸ ಲಾಗುತ್ತಿದೆ. ಜೊತೆಯಲ್ಲಿ ಕುರಿ, ಕೋಳಿ ಮುಂತಾದ ಸಣ್ಣ ಜಾನುವಾರುಗಳ ಪಿಷ್ಠ ಅವಶ್ಯಕತೆಯನ್ನು ಸ್ವಲ್ಪ ಮಟ್ಟಿಗೆ ಪೂರೈಸಲಾಗುತ್ತಿದೆ.
- ಹಸು, ಕುರಿ/ಮೇಕೆಗಳ ಖನಿಜ ಮಿಶ್ರಣಗಳ ನಿಯಮಿತ ಬಳಕೆಯಿಂದ ಜಾನುವಾರುಗಳ ಪೋಷಕಾಂಶ ನಿರ್ವಹಣೆ ಚೆನ್ನಾಗಿ ಆಗುತ್ತಿದೆ.

- ಸಣ್ಣ ಮತ್ತು ಅತಿ ಸಣ್ಣ ರೈತರು ಲಾಭಾಂಶ ಮತ್ತು ಜೀವನ ವಿಧಾನ ಸುಧಾರಣೆಗೆ ಅಳವಡಿಸಿಕೊಂಡ ಬೇಸಾಯ ಪದ್ಧತಿ ಮಾದರಿಗಳ ಕ್ಷೇತ್ರ ಮೌಲ್ಯಮಾಪನ.
  - ಅತಿ ಹೆಚ್ಚು ಆದಾಯ:– ರೂ.2,01,458/– ಬೆಳೆ + ತೋಟಗಾರಿಕೆ + ಹೈನುಗಾರಿಕೆ + ಕುರಿ ಸಾಕಾಣಿಕೆ ಪದ್ಧತಿಯಲ್ಲಿ ಬರುತ್ತಿತ್ತು.
  - ಅತೀ ಕಡಿಮೆ ಆದಾಯ:– ರೂ.1,33,068/– ಬೆಳೆ + ಹೈನುಗಾರಿಕೆ + ಕುರಿ + ಕೋಳಿ ಸಾಕಾಣಿಕೆ ಪದ್ಧತಿಯಿಂದ ಬರುತ್ತಿತ್ತು.
  - ಅತಿ ಹೆಚ್ಚು ನಿವ್ವಳ ಆದಾಯವನ್ನು ಬೆಳೆ + ಹೈನುಗಾರಿಕೆ + ಕುರಿ + ಕೋಳಿ ಸಾಕಾಣಿಕೆ ಸಮಗ್ರ ಕೃಷಿ ಪದ್ಧತಿಯಲ್ಲಿ ರೂ. 3,67,693/– (ಪ್ರಾತ್ಯಕ್ಷಿಕೆ ಪೂರ್ವ ವರ್ಷಕ್ಕಿಂತ ಶೇ. 176 ರಷ್ಟು ಹೆಚ್ಚು) ಪಡೆಯಲಾಗಿದೆ.
  - ಕೃಷಿ ತ್ಯಾಜ್ಯ ವಸ್ತುಗಳ ಸಮರ್ಪಕ ಬಳಕೆಯಿಂದ ಮಣ್ಣಿನ ಫಲವತ್ತತೆ ಸುಧಾರಣೆಯಾಗಿದೆ. ಸಾವಯುವ ಇಂಗಾಲ ಮತ್ತು ಲಭ್ಯವಿರುವ ಸಾರಜನಕ, ರಂಜಕ ಹಾಗೂ ಪೊಟ್ಯಾಷ್‌ನ ಅಂಶಗಳು ಕೂಡ ಹೆಚ್ಚಾಗಿರುವುದು ಗಣನೀಯ ಅಂಶಗಳು.

3.7.2.2 ಮಣ್ಣು ವಿಜ್ಞಾನ

ಮಣ್ಣು ಪರೀಕ್ಷೆ ಬೆಳೆ ಸ್ಪಂದನೆ ಪ್ರಾಯೋಜನೆ

- ಬೆಂಡಿ ಬೆಳೆಗೆ ಉದ್ದೇಶಿತ ಇಳುವರಿ ಗುರಿ ಸಮೀಕರಣವನ್ನು ಅಭಿವೃದ್ಧಿಪಡಿಸುವ ಅಧ್ಯಯನ: ಹನಿ ನೀರಾವರಿ ಪದ್ದತಿಯಲ್ಲಿ ಬೆಂಡಿ ಬೆಳೆಗೆ ಮಣ್ಣು ಪರೀಕ್ಷೆ ಮತ್ತು ಬೆಳೆ ಸ್ಪಂದನೆಯ ಉದ್ದೇಶಿತ ಇಳುವರಿ ಗುರಿ ಸಮೀಕರಣದ ಅಭಿವೃದ್ಧಿ: ಹೆಚ್ಚು ಫಲವತ್ತತೆ ತಾಕಿನಲ್ಲಿ ಹೆಚ್ಚಿನ ಬೆಂಡಿ ಇಳುವರಿಯು (16.02 ಟನ್/ಹೆ) ಮತ್ತು ಕಡಿಮೆ ಫಲವತ್ತತೆ ತಾಕಿನಲ್ಲಿ 4.75 ಟನ್/ಹೆ ಬೆಂಡಿ ಇಳುವರಿ ದಾಖಲಾಗಿದೆ. ವಿವಿಧ ರಸಗೊಬ್ಬರಗಳ ಉಪಚಾರ ಮಾಡಿದ ತಾಕುಗಳಲ್ಲಿ, ಹೆಚ್ಚಿನ ಫಲವತ್ತತೆ ತಾಕಿನಲ್ಲಿ (L2) 3–1–1 (ಎನ್.ಪಿ.ಕೆ.) ಮತ್ತು ಕೋಳಿಗೊಬ್ಬರ 15 ಟನ್/ಹೆ ಉಪಚಾರ ಮಾಡಿದ ತಾಕಿನಲ್ಲಿ ಹೆಚ್ಚಿನ ಬೆಂಡಿ ಇಳುವರಿ (25.88 ಟನ್/ಹೆ) ದಾಖಲಾಗಿದೆ. ಹಾಗೆಯೇ, ಕಡಿಮೆ ಫಲವತ್ತತೆ ತಾಕಿನಲ್ಲಿ

- Training on *Trichoderma* usage along with FYM and vermicompost usage has reduced the cost on fertlizers and PP chemical application.
- Azolla rearing is encouraged. It is supplementing the protein requirement of dairy animals, sheeps and poultry birds.
- Use of cow and sheep mineral mixtures is providing good nutrition to livestock. Use of disinfectant liquids is helping in general health maintenance.

- ON-FARM evaluation of farming system modules for improving profitability and livelihood of small and marginal farmers
  - Highest income – Rs.201458 : Crop + horticulture + dairy + sheep farming system
  - Lowest income – Rs.133068 : Crop + dairy + sheep + poultry farming system
  - Highest – Rs.367693 (176% over bench mark) in crop + dairy + sheep + poultry
  - Effective recycling of nutrients has resulted in soil fertility improvement. Improvement in organic carbon and available N, P2O5 and K_2O after intervention due to balanced use of organic and inorganic nutrients.

3.7.2.2 Soil Science

Soil Test Crop Resonse (STCR)

- Experiment on bhendi to develop targeted yield equation under irrigated condition, higher bhendi fruit yield of 16.02 t/ha was recorded in high fertility strip and the lowest fruit yield of 4.75 t/ha was recorded in low fertility strip. Among the treated plots, highest fruit yield of 25.88 t/ha was recorded in L_2 strip where 3-1-1: NPK were applied along with 15 t/ha of poultry manure. The lower yield (5.73 t/ha) was recorded in low fertility strip, where 0-2-2 levels of NPK were applied without poultry manure.

ಕೋಳಿಗೊಬ್ಬರ ಹಾಕದೆ, ಬರೀ ಸಾರಜನಕ, ರಂಜಕ, ಪೊಟ್ಯಾಷ್ (0–2–2) ಹಾಕಿರುವ ತಾಕಿನಲ್ಲಿ ಕಡಿಮೆ ಬೆಂಡಿ ಇಳುವರಿ (5.73 ಟನ್/ಹೆ) ಪಡೆಯಲಾಗಿದೆ.

- ಸೂರ್ಯಕಾಂತಿ ಬೆಳೆಯ ಇಳುವರಿ ಮತ್ತು ಮಣ್ಣಿನ ಗುಣ ಲಕ್ಷಣಗಳ ಮೇಲೆ ವಿವಿಧ ಪ್ರಮಾಣದ ಬೋರಾನ್ ಬಳಕೆಯ ಪ್ರಭಾವ: ಪ್ರತಿ ವರ್ಷ ಒಂದೇ ತಾಕಿನಲ್ಲಿ ವಿವಿಧ ಪ್ರಮಾಣದ ಬೋರಾನ್ ಪೋಷಕಾಂಶ ಹಾಕಿ ಈ ಪ್ರಯೋಗದಲ್ಲಿ ವಿವಿಧ ಬೆಳೆಗಳನ್ನು ಬೆಳೆಯಲಾಗಿದೆ. ಇದು ಐದನೇ ವರ್ಷದ ಅಧ್ಯಯನವಾಗಿದ್ದು, ಈ ವರ್ಷ ಸೂರ್ಯಕಾಂತಿ ಬೆಳೆಯನ್ನು ತೆಗೆದುಕೊಳ್ಳಲಾಗಿದೆ. ಬಿತ್ತನೆ ಮಾಡಿದ 13ನೇ ದಿನದಲ್ಲಿ 2 ಕೆಜಿ ಬೋ. ಹೆ–1. ರಿಂದ 16 ಕೆಜಿ ಬೋ. ಹೆ–1. ಉಪಚರಿಸಿದ ತಾಕುಗಳಲ್ಲಿ ಮೊಳಕೆ ಪ್ರಮಾಣದ ಮೇಲೆ ಗಣನೀಯ ಪರಿಣಾಮ ಬೀರಿದೆ. ಮೊಳಕೆ ಪ್ರಮಾಣವು ಬೋರಾನ್ ಪ್ರಮಾಣ ಹೆಚ್ಚಾದಂತೆ ಕಡಿಮೆಯಾಗಿರುವುದು ಕಂಡು ಬಂದಿದೆ. ಆದರೆ, ಪಾಕೆಟ್‌ಗಳಲ್ಲಿ ಬೆಳೆದ ಸಸಿಗಳನ್ನು ಮತ್ತೆ ಹಾಕಿದ ನಂತರ ಬೆಳೆಯು ಉತ್ತಮವಾಗಿದೆ. ಆದರೆ, ಬೋರಾನ್ ಪ್ರಮಾಣವು ಶ್ರೇಣಿಯವಾಗಿ ಹೆಚ್ಚಾದಂತೆ ಬೆಳೆ ಬೆಳವಣಿಗೆ ಮತ್ತು ಇಳುವರಿ ಕಡಿಮೆಯಾಗಿದೆ. ಬೋರಾನ್ ಹಾಕದೆ ಇರುವ ತಾಕುಗಳಿಗೆ ಹೊಲಿಸಿದರೆ, ವಿವಿಧ ಪ್ರಮಾಣದಲ್ಲಿ ಬೋರಾನ್ (2 ಕೆಜಿ ಹೆ–1. ರಿಂದ 16 ಕೆಜಿ ಹೆ–1.) ನಿರಂತರವಾಗಿ ಹಾಕುವುದರಿಂದ ಸೂರ್ಯಕಾಂತಿ ಬೀಜದ ಇಳುವರಿ ಗಣನೀಯವಾಗಿ ಕಡಿಮೆ ಆಗಿದೆ. ಅದೇ ಪ್ರವೃತ್ತಿಯು ಸೂರ್ಯಕಾಂತಿಯ ಕಾಂಡದ ಇಳುವರಿಯಲ್ಲಿ ಸಹ ಕಂಡುಬಂದಿದೆ. ಅತಿ ಹೆಚ್ಚು ಸೂರ್ಯಕಾಂತಿ ಬೀಜ (20.47 ಕ್ವಿ. ಹೆ–1.) ಮತ್ತು ಕಾಂಡದ (30.88 ಕ್ವಿ. ಹೆ–1.) ಹೆಚ್ಚಿನ ಇಳುವರಿ ಕೇವಲ ಶಿಫಾರಸ್ಸಿನ ಸಾವಯವ ಗೊಬ್ಬರ ಮತ್ತು ರಸಾಯನಿಕ ಗೊಬ್ಬರ ಹಾಕಿದ ತಾಕಿನಲ್ಲಿ ದಾಖಲೆ ಯಾಗಿದೆ. ಬೋರಾನ್ ಪೋಷಕಾಂಶವನ್ನು 2 ಕೆಜಿ. ಹೆ–1. (18.71 ಕ್ವಿ. ಹೆ–1.) ರಿಂದ 16 ಕೆಜಿ ಹೆ–1. (13.28 ಕ್ವಿ. ಹೆ–1.) ನಿರಂತರವಾಗಿ ಹಾಕುವುದರಿಂದ ಸೂರ್ಯಕಾಂತಿ ಬೀಜದ ಇಳುವರಿ ಕಡಿಮೆ ಆಗಿದೆ. ಇದು ಸ್ಪಷ್ಟವಾಗಿ ಸೂಚಿಸುವುದೆನೆಂದರೆ, ಶಿಫಾರಸ್ಸು ಮಾಡಿದ 2 ಕೆಜಿ. ಬೋ. ಹೆ–1. ನ್ನೂ ಸಹ ನಿರಂತರವಾಗಿ ಹಾಕಬಾರದು, ಯಾಕೆಂದರೆ ಮಣ್ಣಿನ ಪರೀಕ್ಷೆ ಮಾಡಿಸದೆ ಬೋರಾನನ್ನು ಹಾಕಿದಾಗ ಅದು ಹೆಚ್ಚು ಶೇಖರಣೆಯಾಗಿ ಬೆಳೆಗಳಿಗೆ ವಿಷಕಾರಿಯಾಗಬಹುದು.

- ಕರ್ನಾಟಕದ ದಕ್ಷಿಣ ಭಾಗದ ಖುಷ್ಕಿ ಭೂಮಿಯ ಒಳಮೈ ಮಣ್ಣಿನಲ್ಲಿ ಗೊಬ್ಬರ ಬಳಸಿ ಬೆಳೆ ಇಳುವರಿ ಹೆಚ್ಚಿಸುವಿಕೆ: ಒಟ್ಟು ನಾಲ್ಕು ಪ್ರಯೋಗಗಳನ್ನು ಕ್ಷಾರಯಕ್ತ ಭೂಮಿಯಲ್ಲಿ ಮತ್ತು ಎರಡು ಪ್ರಯೋಗಗಳನ್ನು ಕೆಂಪು ಭೂಮಿಯಲ್ಲಿ ಎಲ್ಲಿ ಗಟ್ಟಿ ಪದರವಿದೆಯೋ ಅಂತಹ ಭೂಮಿಗಳಲ್ಲಿ ತೆಗೆದುಕೊಳ್ಳಲಾಗಿದೆ. ಒಳಮೈಯಲ್ಲಿ ಗಟ್ಟಿ ಪದರವಿರುವ ಭೂಮಿಯಲ್ಲಿ ಆಳವಾಗಿ ರಿಪ್ಪರ್ ಹೊಡೆದು ವಿವಿಧ ಸಾವಯವ ಗೊಬ್ಬರಗಳನ್ನು ರಸಾಯನಿಕ ಗೊಬ್ಬರದ ಜೊತೆ ಹಾಕಿದ ತಾಕುಗಳಲ್ಲಿ ಹೆಚ್ಚಿನ ಇಳುವರಿ ವಿವಿಧ ಬೆಳೆಗಳಲ್ಲಿ ಕಂಡು ಬಂದಿದೆ. ಎರಡು ವರ್ಷಗಳ ಅಧ್ಯಯನದ ಮೇಲೆ ಉಳಿಕೆ ಪ್ರಯೋಗವನ್ನು ಕೆಂಪು ಭೂಮಿಯಲ್ಲಿ ತೆಗೆದುಕೊಳ್ಳಲಾಯಿತು. ಈ ಎಲ್ಲಾ ಪ್ರಯೋಗಗಳ ಅತ್ಯುತ್ತಮ ಉಪಚಾರದ ಫಲಿತಾಂಶಗಳ ಆಧಾರದ ಮೇಲೆ ರೈತರ ಜಮೀನಿನಲ್ಲಿ ಒಟ್ಟು 25 ಎಕರೆ ಪ್ರಾತ್ಯಕ್ಷಿಕೆಯನ್ನು ತೆಗೆದುಕೊಳ್ಳಲಾಯಿತು. ಒಟ್ಟು 25 ಎಕರೆಯಲ್ಲಿ (ರೈತರು–10

- Influence of different levels of boron on sunflower crop yield: In the 5th year of the study, where different levels of boron was applied in the same plots with different crops. This year due to the application of heavy doses of boron, sunflower germination was completely affected from 2 to 16 kg B/ha applied plots even at 13th DAS. Sunflower seed yield data indicated that continuous application of boron from 2 to 16 kg/ha has drastically reduced the seed yield compared to no boron applied plots. The stalk yield of sunflower also followed the same trend. The significantly highest seed (20.47 q/ha) and stalk (30.88 q/ha) was recorded in only FYM + RDF applied plot, whereas application of boron from 2 kg/ha (18.71 q/ha) to 16 kg/ha (13.28 q/ha) has gradually reduced the seed yield as the B level increased. This indicates that even the recommended dose of 2 kg B/ha should not be applied continuously without soil testing as it may accumulate and cause toxicity and reduce the crop yield.

- Subsoil manuring for enhancing crop productivity in rained farming regions of Southern Karnataka: Totally 4 experiments were conducted in sodic soils and 2 experiments were conducted at red soil over 2 years where subsoil hardpan were identified. Application of double dose of organic manures (Sheep manure /Pressmud/ Poultry manure) along with RDF through deep ripping significantly increased the yield of different crops over the other treatments. Based on the 2 years results obtained, residual studies were also conducted in red soils. Based on the experimental results, demonstration was conducted in 25 acres of farmers' fields with best treatment. Again

ಮತ್ತು ಕೃ.ವಿ.ವಿ–15 ಎಕರೆ) ವಿವಿಧ ಬೆಳೆಗಳ (ಮೆಕ್ಕೆಜೋಳ, ಜೋಳ, ಹತ್ತಿ) ಪ್ರಾತ್ಯಕ್ಷಿಕೆ ಮಾಡಿದಾಗ ಶೇ. 9.00 ರಿಂದ 36.4 ರಷ್ಟು ಹೆಚ್ಚು ಇಳುವರಿ ಕಂಡುಬಂದಿದೆ. ಕ್ಷಾರಯುಕ್ತ ಭೂಮಿ ಮತ್ತು ಕೆಂಪು ಭೂಮಿಯ ಗಟ್ಟಿ ಪದರದ ಒಳಮೈ ಮಣ್ಣಿನಲ್ಲಿ ಗೊಬ್ಬರ ಬಳಸುವುದರಿಂದ ಮಣ್ಣಿನ ಫಲವತ್ತತೆಯನ್ನು ಮತ್ತು ಬೆಳೆಯ ಇಳುವರಿಯನ್ನು ಹೆಚ್ಚಿಸಬಹುದು. ಆದ್ದರಿಂದ ಈ ತಂತ್ರಾಂಶವನ್ನು ಕೃಷಿ ಬೆಳೆಗಳ ಸುಧಾರಿತ ಬೇಸಾಯ ಪದ್ಧತಿಗಳ ಪೂರಕ ಕೈಪಿಡಿಯಲ್ಲಿ ಸೇರಿಸಲಾಗಿದೆ.

based on the 25 acres large scale demonstrations in sodic soils on different crops (Maize, Cotton, Redgram) where yield increase ranged from 9.00 per cent to 36.40 per cent, and residual studies with redgram in red soils, this technology was given for POP for zone 5 & 6 as sub soil manuring in sodic soil/ red soil hard pan areas for improving the fertility status of soil and enhancing crop yields.

ದೀರ್ಘಾವಧಿ ರಸಗೊಬ್ಬರ ಪ್ರಾಯೋಜನೆ

- ರಾಗಿ–ಮೆಕ್ಕೆಜೋಳ ಬೆಳೆಯ ಅನುಕ್ರಮದಲ್ಲಿ ದೀರ್ಘಾವಧಿ ರಸಗೊಬ್ಬರಗಳ ಬಳಕೆಯಿಂದ ರಾಗಿ ಬೆಳೆಯ ಉತ್ಪಾದನೆ ಪೋಷಕಾಂಶಗಳ ಗ್ರಹಿಸುವಿಕೆ ಮತ್ತು ಮಣ್ಣಿನ ರಾಸಾಯನಿಕ ಗುಣಲಕ್ಷಣಗಳ ಮೇಲಾಗುವ ಪರಿಣಾಮಗಳು: ಶೇ. 150 NPK ಉಪಚರಿಸಿದ ತಾಕಿನಲ್ಲಿ ಇತರೆ ಉಪಚರಿಸಿದ ತಾಕುಗಳಿಗಿಂತ ಗಮನಾರ್ಹವಾಗಿ ಹೆಚ್ಚಿನ ರಾಗಿ ಧಾನ್ಯ ಮತ್ತು ಮೇವಿನ ಇಳುವರಿ (ಕ್ರಮವಾಗಿ 36.85 ಮತ್ತು 42.37 ಕ್ವಿ. ಪ್ರತಿ ಹೆಕ್ಟೇರ್) ದಾಖಲಾಗಿದೆ. ಆದರೆ ರಾಗಿ ಧಾನ್ಯ ಇಳುವರಿಯು ಶೇ. 100 NPK + ಕೊಟ್ಟಿಗೆ ಗೊಬ್ಬರ 10 ಟನ್/ಹೆ.+ಸುಣ್ಣ (ಕ್ರಮವಾಗಿ 35.10 ಮತ್ತು 40.84 ಕ್ವಿ. ಪ್ರತಿ ಹೆಕ್ಟೇರ್) ಮತ್ತು ಶೇ. 100 NPK ಮತ್ತು + ಕೊಟ್ಟಿಗೆ ಗೊಬ್ಬರ 10 ಟನ್/ಹೆ. (33.20 ಮತ್ತು 39.56 ಕ್ವಿ. ಪ್ರತಿ ಹೆಕ್ಟೇರ್) ಉಪಚರಿಸಿದ ತಾಕುಗಳಿಗೆ ಸಮಾನವಾಗಿರುತ್ತದೆ.

- ರಾಗಿ–ಮೆಕ್ಕೆಜೋಳ ಬೆಳೆಯ ಅನುಕ್ರಮದಲ್ಲಿ ದೀರ್ಘಾವಧಿ ರಸಗೊಬ್ಬರಗಳ ಬಳಕೆಯಿಂದ ಮೆಕ್ಕೆ ಜೋಳ ಬೆಳೆಯ ಉತ್ಪಾದನೆ, ಪೋಷಕಾಂಶಗಳ ಗ್ರಹಿಸುವಿಕೆ ಮತ್ತು ಮಣ್ಣಿನ ರಾಸಾಯನಿಕ ಗುಣಲಕ್ಷಣಗಳ ಮೇಲಾಗುವ ಪರಿಣಾಮಗಳು.: ಶೇ.100 NPK + ಕೊಟ್ಟಿಗೆ ಗೊಬ್ಬರ 10 ಟನ್/ಹೆ + ಸುಣ್ಣ ಉಪಚರಿಸಿದ ತಾಕಿನಲ್ಲಿ ಇತರೆ ಉಪಚರಿಸಿದ ತಾಕುಗಳಿಗಿಂತ ಗಮನಾರ್ಹವಾಗಿ ಹೆಚ್ಚಿನ ಮೆಕ್ಕೆಜೋಳದ ಧಾನ್ಯ ಮತ್ತು ಮೇವಿನ ಇಳುವರಿ (45.81 ಮತ್ತು 53.67 ಕ್ವಿ. ಪ್ರತಿ ಹೆಕ್ಟೇರ್, ಕ್ರಮವಾಗಿ) ದಾಖಲಾಗಿದೆ ಹಾಗೂ ಶೇ. 150 NPK (40.41 ಮತ್ತು 51.11 ಕ್ವಿ. ಪ್ರತಿ ಹೆಕ್ಟೇರ್, ಕ್ರಮವಾಗಿ) ಉಪಚರಿಸಿದ ತಾಕುಗಳಿಗೆ ಸಮಾನವಾಗಿರುತ್ತದೆ.

- ದೀರ್ಘಾವಧಿ ರಸಗೊಬ್ಬರಗಳ ಬಳಕೆಯ ಆಯ್ದ ತಾಕುಗಳಲ್ಲಿ ಗೊಬ್ಬರ ಮತ್ತು ಸುಣ್ಣ ಉತ್ಕೃಷ್ಟ ಉಪಚರಿಕೆಯಿಂದ ಮೆಕ್ಕೆ ಜೋಳದ ಬೆಳೆಯ ಉತ್ಪಾದನೆ, ಪೋಷಕಾಂಶಗಳ ಗ್ರಹಿಸುವಿಕೆ ಮತ್ತು ಮಣ್ಣಿನ ರಾಸಾಯನಿಕ ಗುಣಲಕ್ಷಣಗಳ ಮೇಲಾಗುವ ಪರಿಣಾಮಗಳು: ಗರಿಷ್ಠ ಮೆಕ್ಕೆ ಜೋಳದ ಧಾನ್ಯ ಮತ್ತು ಮೇವಿನ ಇಳುವರಿಯ ಶೇ. 150 ಮತ್ತು ಜೊತೆಗೆ 10 ಟನ್/ಹೆ. (45.96 ಮತ್ತು 55.62 ಕಿ.ಗ್ರಾಂ/ಹೆ, ಕ್ರಮವಾಗಿ) ಉಪಚರಿಸಿದ ತಾಕಿನಲ್ಲಿ ದಾಖಲಾಗಿದೆ.

ಲಘು, ದ್ವಿತೀಯ ಮತ್ತು ಮಾಲಿನ್ಯಕಾರಕ ಅಂಶಗಳ ಸಂಶೋಧನಾ ಪ್ರಾಯೋಜನೆ

- ಕರ್ನಾಟಕದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಣ್ಣಿನ ದ್ವಿತೀಯ ಹಾಗೂ ಲಘು ಪೋಷಕಾಂಶಗಳ ಸ್ಥಿತಿಗತಿ ಹಾಗೂ ಅವುಗಳಲ್ಲಿನ

Long Term Fertilizer Experiment (LTFE)

- In the Effect of long term application of fertilizers on finger millet productivity, nutrient uptake, and yield sustainability in finger millet – maize cropping sequence: Significantly higher finger millet grain and straw yield was recorded in 150% Rec. NPK (36.85 and 42.37 q/ha, respectively) over other treatments, but it was on par with 100% Rec. NPK + FYM @ 10 t/ha + lime (35.1 and 40.84 q/ha, respectively) and 100 % Rec. NPK+ FYM @ 10 t/ha (33.2 and 39.56 q/ha, respectively).

- Effect of long term application of fertilizers on maize productivity, nutrient uptake, changes in soil quality and sustainability in finger millet – maize cropping sequence: Significantly higher grain and stover yield of maize (45.81 and 53.67 q ha-1, respectively) were recorded in T10 (100% NPK+ FYM + lime) treatment over all other treatments, but it was statistically on par with T3:150% NPK (40.11 & 51.11 q ha-1) treatment with respect to stover yield.

- Effect of manuring on maize productivity, nutrient uptake, changes in soil quality in finger millet–maize cropping sequence after superimposition in selected treatments of long term fertilizer experiment: Treatment 150% NPK gave significantly higher maize grain and stover yield (45.96 and 55.62 q ha-1, respectively)

Micro and Secondary Nutrients and Pollutants Elements in Soil and Plants

- Inoder to delineate and reassess the changes in micro, secondary nutrients and pollutant elements

ಬದಲಾವಣೆಗಳ ಅಧ್ಯಯನದ ಭಾಗವಾಗಿ ಚಿಕ್ಕಬಳ್ಳಾಪುರ (400), ರಾಯಚೂರು (350), ಮೈಸೂರು (400), ಕೋಲಾರ (400) ಜಿಲ್ಲೆಗಳ ರೈತರ ತಾಕುಗಳಲ್ಲಿ ಮಣ್ಣಿನ ಮಾದರಿಗಳನ್ನು ಜಿಪಿಎಸ್ ಸಾಧನದ ಸಹಾಯದಿಂದ ಸಂಗ್ರಹಿಸಲಾಯಿತು ಹಾಗೂ ಸದರಿ ಮಣ್ಣಿನ ಗುಣ ಲಕ್ಷಣಗಳನ್ನು ವಿಶ್ಲೇಷಿಸಲಾಯಿತು.

- ಚಿಕ್ಕಬಳ್ಳಾಪುರ ಜಿಲ್ಲೆಯ ಮಣ್ಣು ತಟಸ್ಥ, ಸಾಮಾನ್ಯ ವಿದ್ಯುತ್ ವಾಹಕತೆ, ಸಾಮಾನ್ಯ ಸಾವಯವ ಇಂಗಾಲ, ಸಾಕಷ್ಟು ಪ್ರಮಾಣದ ವಿನಿಮಯಗೊಳ್ಳುವ ಸುಣ್ಣ ಮತ್ತು ಮೆಗ್ನಿಶಿಯಂ ಅನ್ನು ಹೊಂದಿದ್ದು ಅಧಿಕ ಪ್ರಮಾಣದ ಗಂಧಕ ಮತ್ತು ಲಘು ಪೋಷಕಾಂಶಗಳನ್ನು ಹೊಂದಿದೆ.
- ಮೈಸೂರು ಜಿಲ್ಲೆಯ ಮಣ್ಣಿನ ಮಾದರಿಗಳಲ್ಲಿ 7.03 ರಸಸಾರ, 0.15 dS/m ವಿದ್ಯುತ್ ವಾಹಕತೆ, ಶೇ. 0.84 ಸಾವಯವ ಇಂಗಾಲ, 34.68 kg/ha ರಂಜಕ, 324.27 kg/ha ಪೊಟ್ಯಾಷಿಂ, 9.8 ಮತ್ತು 3.5 meq/100g ವಿನಿಮಯಗೊಳ್ಳುವ ಸುಣ್ಣ ಮತ್ತು ಮೆಗ್ನಿಶಿಯಂ, 21.05 mg/kg ಗಂಧಕ, 16.46 ppm ಕಬ್ಬಿಣ, 11.87 ppm ಮ್ಯಾಂಗನೀಸ್, 2.13 ppm ತಾಮ್ರ, 1.13 ppm ಸತು ಹಾಗೂ 0.81 ppm ಬೋರಾನ್ ಅಂಶವು ಕಂಡುಬಂದಿದೆ.
- ಕೋಲಾರ ಜಿಲ್ಲೆಯ ಮಣ್ಣಿನ ಮಾದರಿಗಳು ತಟಸ್ಥ ರಸಸಾರ, ಸಾಮಾನ್ಯ ವಿದ್ಯುತ್ ವಾಹಕತೆ, ಅಧಿಕ ಸಾವಯವ ಇಂಗಾಲ, ಹೆಚ್ಚಿನ ಪ್ರಮಾಣದ ರಂಜಕ, ಪೊಟ್ಯಾಷಿಂ, ಗಂಧಕ, ವಿನಿಮಯ ಗೊಳ್ಳುವ ಸುಣ್ಣ ಮತ್ತು ಮೆಗ್ನಿಶಿಯಂ ಹಾಗೂ ಲಘು ಪೋಷಕಾಂಶಗಳನ್ನು ಹೊಂದಿದೆ.

ಸುಜಲಾ ಪ್ರಾಯೋಜನೆ

- ತುಮಕೂರು ಜಿಲ್ಲೆಯ 8 ಬೆಂಚ್‌ಮಾರ್ಕ್ ಸ್ಥಳಗಳಲ್ಲಿ ಪಾರ್ಶ್ವ ದೃಶ್ಯಗಳ ಅಧ್ಯಯನ ಮತ್ತು ಮಣ್ಣು ಮಾದರಿ ಸಂಗ್ರಹಣೆ ಮತ್ತು 108 ಮೇಲ್ಮೈಪದರ ಮಣ್ಣಿನ ಮಾದರಿಗಳ ಸಂಗ್ರಹಣೆ. ಪ್ರೊಫೈಲ್ ಮಾದರಿಗಳಿಗೆ ಭೌತಿಕ ಮತ್ತು ರಾಸಾಯನಿಕ ಗುಣ ಧರ್ಮಗಳ ಮತ್ತು ಫಲವತ್ತತೆ ಸ್ಥಿತಿ ವಿಶ್ಲೇಷಣೆ. ಭೂ ಸಂಪನ್ಮೂಲ ಮಾಹಿತಿ ದತ್ತಾಂಶದೊಂದಿಗೆ ತುಲನಾತ್ಮಕತೆ ಕೈಗೊಂಡು ನಕ್ಷೆಗಳ ಉನ್ನತೀಕರಣ ಮಾಡಲಾಗಿದೆ.
- ಚಾಮರಾಜನಗರ ಜಿಲ್ಲೆಯಲ್ಲಿ 2 ಬೆಂಚ್‌ಮಾರ್ಕ್ ಸ್ಥಳಗಳಲ್ಲಿ ಪಾರ್ಶ್ವ ದೃಶ್ಯಗಳ ಅಧ್ಯಯನ ಮತ್ತು ಮಣ್ಣು ಮಾದರಿ ಸಂಗ್ರಹಣೆ ಮತ್ತು 20 ಮೇಲ್ಮೈಪದರ ಮಣ್ಣಿನ ಮಾದರಿಗಳ ಸಂಗ್ರಹಣೆ. ಪ್ರೊಫೈಲ್ ಮಾದರಿಗಳಿಗೆ ಭೌತಿಕ ಮತ್ತು ರಾಸಾಯನಿಕ ಗುಣ ಧರ್ಮಗಳ ಮತ್ತು ಫಲವತ್ತತೆ ಸ್ಥಿತಿ ವಿಶ್ಲೇಷಣೆ. ಭೂ ಸಂಪನ್ಮೂಲ ಮಾಹಿತಿ ದತ್ತಾಂಶದೊಂದಿಗೆ ತುಲನಾತ್ಮಕತೆ ಕೈಗೊಂಡು ನಕ್ಷೆಗಳ ಉನ್ನತೀಕರಣ ಮಾಡಲಾಗಿದೆ.
- ದಾವಣಗೆರೆ ಜಿಲ್ಲೆಯಲ್ಲಿ 2 ಬೆಂಚ್‌ಮಾರ್ಕ್ ಸ್ಥಳಗಳಲ್ಲಿ ಪಾರ್ಶ್ವ ದೃಶ್ಯಗಳ ಅಧ್ಯಯನ ಮತ್ತು ಮಣ್ಣು ಮಾದರಿ ಸಂಗ್ರಹಣೆ ಮತ್ತು 20 ಮೇಲ್ಮೈಪದರ ಮಣ್ಣಿನ ಮಾದರಿಗಳ ಸಂಗ್ರಹಣೆ. ಪ್ರೊಫೈಲ್ ಮಾದರಿಗಳಿಗೆ ಭೌತಿಕ ಮತ್ತು ರಾಸಾಯನಿಕ ಗುಣ ಧರ್ಮಗಳ ಮತ್ತು ಫಲವತ್ತತೆ ಸ್ಥಿತಿ ವಿಶ್ಲೇಷಣೆ. ಭೂ ಸಂಪನ್ಮೂಲ ಮಾಹಿತಿ ದತ್ತಾಂಶದೊಂದಿಗೆ ತುಲನಾತ್ಮಕತೆ ಕೈಗೊಂಡು ನಕ್ಷೆಗಳ ಉನ್ನತೀಕರಣ ಮಾಡಲಾಗಿದೆ.

in the soils of Karnataka, geo referenced surface soil samples (0-15 cm) were collected from Chikkaballapura (400), Mysore (400), Kolar (400) and analyzed for different chemical parameters and the results of the study were presented below

- Chikkaballapura district soils are neutral, non saline, medium in organic carbon, sufficient in exchangeable calcium and magnesium, high in available sulphur and available micronutrients
- In the soils of Mysore district about 7.03 pH, 0.15 dS/m EC, 0.84 % organic carbon, 34.68 kg/ha available phosphorus, 324.27 kg/ha available potassium, 9.8 and 3.5 meq/100 g of exchangeable calcium and magnesium, 21.05 mg/kg of available sulphur, 16.46 ppm Fe, 11.87 ppm Mn, 2.13 ppm Cu, 1.13 ppm Zn and 0.81 ppm B was recorded.
- Kolar district soils have neutral pH, normal salt content, high organic carbon, high available phosphorus, potassium, sulphur, exchangeable calcium, magnesium and micronutrients content.

Sujala Project

- Profile studies and sample collection at 8 Benchmark sites and 108 surface sample collections in Tumkur districts. Analysis of profile samples for physio-chemical properties and fertility status. Updation of maps by comparing with LRI data
- Profile studies and sample collection at 2 Benchmark sites and 20 surface sample collections in Chamarajanagar districts. Analysis of profile samples for physio-chemical properties and fertility status. Updation of maps by comparing with LRI data
- Profile studies and sample collection at 2 Benchmark sites and 20 surface sample collections in Davanagere districts. Analysis of profile samples for physio-chemical properties and fertility status. Updation of maps by comparing with LRI data

3.7.2.3 ಜೇನು ನೊಣ ಮತ್ತು ಪರಾಗಸ್ಪರ್ಶಿಗಳ ಸಂಶೋದನೆ

- ತುಡುವೆ ಜೇನು ಕುಟುಂಬದಲ್ಲಿ ಜೋಡಿ ರಾಣಿ ಜೇನು ಪದ್ದತಿ: ಈ ಪ್ರಯೋಗವನ್ನು ಕೃ.ವಿ.ವಿ., ಜಿಕೆವಿಕೆ, ಬೆಂಗಳೂರು; ಕೆವಿಕೆ, ಮಾಗಡಿ; ಕೆವಿಕೆ, ಕಂದಲಿ, ಹಾಸನ ಮತ್ತು ರೇಷ್ಮೆಕೃಷಿ ಕಾಲೇಜು, ಚಿಂತಾಮಣಿ ಇಲ್ಲಿ ಕೈಗೊಳ್ಳಲಾಗಿತ್ತು ಜೇನುಗೂಡಿನ ಪಲಾಯನ ತಡೆಯುವುದರಲ್ಲಿ ಜೋಡಿ ರಾಣಿ ಜೇನು ಪದ್ದತಿಯು ಯಶಸ್ವಿಯಾಗಿದೆ. ಅಧ್ಯಯನ ಅವಧಿಯಲ್ಲಿ ಕೆವಿಕೆ ಮಾಗಡಿಯಲ್ಲಿ ಯಾವುದೇ ಗೂಡು ಪಲಾಯನಗೊಂಡಿರುವುದಿಲ್ಲ. ಕೃ.ವಿ.ವಿ., ಜಿಕೆವಿಕೆ, ಬೆಂಗಳೂರಿನ ಜೋಡಿ ರಾಣಿ ಜೇನು ಪದ್ದತಿಯ ಉಪಚರದಲ್ಲಿ 16.7% ಜೇನುಗೂಡಿಗಳು ಪಲಾಯನಗೊಂಡಿದೆ. ಹಾಗೆಯೇ ನಿಯಂತ್ರಣದಲ್ಲಿ 66.7% ಗೂಡುಗಳು ಪಲಾಯನ ಗೊಂಡಿದೆ. ಕಂದಲಿ ಕೆವಿಕೆಯಲ್ಲಿ ಜೋಡಿ ರಾಣಿ ಜೇನು ಪದ್ದತಿಯ ಉಪಚರದಲ್ಲಿ 16.7% ಜೇನುಗೂಡುಗಳು ಪಲಾಯನಗೊಂಡಿದ್ದು ನಿಯಂತ್ರಣದಲ್ಲಿ 100% ಗೂಡುಗಳು ಪಲಾಯನಗೊಂಡಿದೆ. ರೇಷ್ಮೆಕೃಷಿ ಕಾಲೇಜು, ಚಿಂತಾಮಣಿಯಲ್ಲಿ ಎರಡೂ ಉಪಚರಗಳಲ್ಲಿ 33.3% ಗೂಡುಗಳು ಮೇಣ ಪತಂಗದ ದಾಳಿಗೆ ಸಿಲುಕಿ ಪಲಾಯನಗೊಂಡಿದೆ. ಸರಾಸರಿ ಎಲ್ಲಾ ಸ್ಥಳಗಳಲ್ಲೂ ನಿಯಂತ್ರಣದಲ್ಲಿ 50% ಪಲಾಯನಗೊಂಡಿದೆ. ಇದಕ್ಕೆ ಹೋಲಿಸಿದರೆ ಜೋಡಿ ರಾಣಿ ಜೇನು ಪದ್ದತಿ ಉಪಚರದಲ್ಲಿ ಸರಾಸರಿ 16.6% ಜೇನುಗೂಡುಗಳು ಪಲಾಯನಗೊಂಡಿರುವುದು ದಾಖಲಾಗಿದೆ.

- ಇತರೆ ಪರಾಗಸ್ಪರ್ಶಗಳ ಕೃತಕ ವಾಸಸ್ಥಾನ: ಇತರೆ ಪರಾಗಸ್ಪರ್ಶಕ ಗಳಿಗಾಗಿ (ಎಲೆ ಕತ್ತರಿಸುವ ದುಂಬಿಗಳು, ನೋಮಿಯ ದುಂಬಿ ಮತ್ತು ಬಡಗಿದುಂಬಿ) ಮಧುವನದಲ್ಲಿ ವಿಭಿನ್ನ ಕೃತಕ ಗೂಡುಗಳನ್ನು ಸ್ಥಾಪಿಸಿ ಅವುಗಳ ಸ್ವೀಕಾರದ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ. ಎಲೆ ಕತ್ತರಿಸುವ ದುಂಬಿಗಳು: 56 ಕೃತಕ ಗೂಡುಗಳ ಆವಾಸ ಸ್ಥಾನದಲ್ಲಿ 73 ಐಪೋಮಿಯಾ (ಕಳೆ) ಕಡ್ಡಿಗಳ 7 ವಿವಿಧ ಮಾದರಿಯ ವಿಧಾನಗಳನ್ನು ಸ್ಥಾಪಿಸಲಾಗಿದೆ. ಶೇ. 31.26 ಕಡ್ಡಿಗಳನ್ನು ದುಂಬಿಗಳು ತಮ್ಮ ಗೂಡು ರಚನೆಯಲ್ಲಿ ವರ್ಷ ಪೂರ್ತಿ ಸ್ವೀಕರಿಸಿದೆ. ಸ್ವೀಕಾರಗೊಂಡಿರುವ ಕೃತಕ ಗೂಡುಗಳನ್ನು ಪ್ರಯೋಗಾಲಯಕ್ಕೆ ತಂದು ಹೊರಹೊಮ್ಮಿದ ದುಂಬಿಗಳನ್ನು ಸಾಯಿಸಿ ಅವುಗಳನ್ನು ಕೀಟಶಾಸ್ತ್ರಜ್ಞರಿಂದ ಗುರುತಿಸಲಾಗಿದೆ.

- ಕರ್ನಾಟಕದ ಜೇನುಸಾಕಣೆ ಜಿಲ್ಲೆಗಳಲ್ಲಿ ಜೇನು ಕುಟುಂಬಗಳಿಗೆ ತಗುಲುವ ಕೀಟ ಮತ್ತು ರೋಗಗಳಿಗೆ ಬಗ್ಗೆ ಮೇಲ್ವಿಚಾರಣೆ: ಕರ್ನಾಟಕದ ಜೇನುಸಾಕಣೆ ಜಿಲ್ಲೆಗಳಲ್ಲಿ ಕೀಟ ಮತ್ತು ರೋಗ ಸಂಭವಿಸುವುದನ್ನು ತಿಳಿಯುವ ಉದ್ದೇಶದಿಂದ 2020–21 ರಲ್ಲಿ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಚಾಮರಾಜನಗರ, ಕೊಡಗು, ಶಿವಮೊಗ್ಗ, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ಹಾಸನ ಮತ್ತು ತುಮಕೂರು, ಜೇನು ಸಾಕಣೆ ಜಿಲ್ಲೆಗಳಲ್ಲಿ ಈ ಸಮೀಕ್ಷೆ ನಡೆಸಲಾಯಿತು. ಒಟ್ಟು 893 ಜೇನು ಕುಟುಂಬ ಗಳನ್ನು ಪರಿಶೀಲಿಸಿದ್ದು ಸುಮಾರು 140 ಕುಟುಂಬಗಳು (ಶೇ. 15.6) ಪರಾರಿಯಾಗಿವೆ. ಮೇಣದ ಪತಂಗ ಮತ್ತು ಥೈ ಸಾಕ್ ಬ್ರೂಡ್ ರೋಗವು ಹೆಚ್ಚು ಬಾಧೆ ನೀಡುತ್ತವೆ ಎಂದು ಕಂಡು ಬಂದಿದೆ. ರೋಗ ಮತ್ತು ಪೀಡೆ ತಡೆಯಲು ಸೂಕ್ತ ನಿರ್ವಹಣಾ ಕ್ರಮಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.

3.7.2.3 Apiculture

- Double Queen System (DQS) for *Apis cerana*: The experiment on DQS was conducted at 4 locations *viz*., UAS, GKVK, Bangalore; KVK, Maagadi; College of Sericulture, Chintamani and KVK Kandali. DQS was successful in management of the absconding behavior. There was no absconding of colonies in KVK, Maagadi during the study period. 16.7 % absconding was recorded in UAS, GKVK, Bangalore in DQS whereas 66.7% colony absconded in control. 16.7 % colony absconding was observed in KVK Kandali whereas 100% colony absconding was recorded in control. In College of Sericulture, Chintamani 33.3% colonies were absconded in both DQS and control.

- Artificial domiciliation of Non-Apis pollinators: Artificial domiciliations were created in different locations in UAS GKVK Bangalore and observations were recorded on acceptance of the nest by non Apis bees like Megachilidae, Nomia and Carpenter bees. Megachilidae: 56 Artificial nesting habitats with total number 0f 73 Ipomoea reeds in 7 different treatments were established for Megachilids in Pigeon pea plots of NSP, IFS and Bee park in GKVK. 31.26 % of reeds were accepted by bees for nesting throughout the year.

- Monitoring bee colonies for pest and diseases in Beekeeping districts of Karnataka: The survey was carried out at beekeeping districts of Karnataka *viz*., Bangalore, Bangalore Rural, Ramanagar, Chamarajanagar, Coorg, Shimoga, Chikkaballapura, Dakshina Kannada, Hassan and Tumkur. Total 893 colonies were observed and 140 colonies contributing to 15.6% colonies were found to be absconded in these visited beekeeping areas. Wax moth was recorded as major pest problem followed by TSBV. The lack of flora and management of bee colonies were attributed to absconding of bee colonies.

- ರಾಸಾಯನಿಕೇತರ ವಿಧಾನಗಳಿಂದ ರೋಗ ನಿರ್ವಹಣೆ: ಗ್ಯಾನೊಡೆರ್ಮಾ ಮೈಸೀಲಿ ಸಾರ (1 ಮಿ.ಲಿ. ಮತ್ತು 3 ಮಿ.ಲಿ.), ಫಿಲಾಂಥಸ್ ನಿರುರಿ ಸಾರ (2 ಗ್ರಾಂ), ಅರಶಿನ ರೈಜೋಮ್ ಸಾರ (2 ಮಿ.ಲಿ.), ತುಳಸಿ (2 ಗ್ರಾಂ), ನಿಗಿಲ್ಲ ಬೀಜ (2 ಗ್ರಾಂ) ಮತ್ತು ನಿಯಂತ್ರಣ ಉಪಚಾರಗಳನ್ನು ತುಡುವೆ ಜೇನು ಕುಟುಂಬಕ್ಕೆ ಬರುವ ಥೈ ಸ್ಯಾಕ್ ಬ್ರೂಡ್ ರೋಗ ನಿರ್ವಹಣೆಗಾಗಿ ದಕ್ಷಿಣ ಕನ್ನಡದ ವಿವಿಧ ಭಾಗಗಳಲ್ಲಿ ಪ್ರಯೋಗ ಕೈಗೊಳ್ಳಲಾಗಿತ್ತು. ಎಲ್ಲ ಉಪಚಾರಗಳಲ್ಲಿ ಫಿಲಾಂಥಸ್ ನಿರುರಿ ಸಾರ, ತುಳಸಿ ಮತ್ತು ನಿಗಿಲ್ಲ ಬೀಜ ಉಪಚರದಲ್ಲಿ ವೈರಾಣು ರೋಗದ ಸೋಂಕು ಕಡಿಮೆಯಾಗಿದೆ ಎಂದು ತಿಳಿದು ಬಂದಿದೆ.

- Evaluation of non chemicals for management of sac brood viruses: Different treatments for evaluation of non-chemicals for management of sac brood virus have been finalized. Ganoderma mycelial extracts(1ml and 3 ml), Phyllanthus niruri extract (2gm), Turmeric rhizome extract (2ml), Tulsi powder (2gm), Nigella seed powder (2 gm) and Control were used to treat TSBV diseases in parts of Dakshina Kannada. Among all the treatments, Phyllanthus niruri extract, Tulsi and khalanji seed extracts showed effective against TSBV when the infection rate is minimum. Molecular diagnosis of TSBV was carried out.

3.7.2.4 ರೇಷ್ಮೆ ಕೃಷಿ

- ಹಿಪ್ಪುನೇರಳೆಯಲ್ಲಿ ರಕ್ಷಣಾ ಕಾರ್ಯವಿಧಾನವನ್ನು ಪ್ರೇರೇಪಿಸಲು ಸಮುದ್ರ–ಕಳೆ ಸಾರಗಳ ಪಾತ್ರ: ಉಷ್ಣವಲಯದ ಸಮುದ್ರ ಕಳೆಗಳ (a.i., Sulfated galactans) ಸಾರಗಳನ್ನು ನಾಲ್ಕು ವಿಭಿನ್ನ ಸೂತ್ರೀಕರಣಗಳೊಂದಿಗೆ (ಎಲ್ಬಿಡಿ–3, ಎಲ್ಬಿಡಿ–12, ಎಲ್ಬಿಎಸ್–6 ಮತ್ತು ಎಲ್ಬಿಎಸ್–13) ಮೂರು ಸಾಂದ್ರತೆಗಳಲ್ಲಿ ಸಮರುವಿಕೆಯಾದ 21 ಮತ್ತು 30 ದಿನಗಳ ನಂತರ ಎಲೆಗಳ ಮೇಲೆ ಸಿಂಪಡಿಸಲು ಬಳಸಬೇಕು. ಈ ಎಲ್ಲಾ ಸಾರಗಳಲ್ಲಿ, ಎಲ್ಬಿಎಸ್–13 @ 1.5 ಮಿ.ಲಿ/ಲಿ ಉಪಯೋಗಿಸಿದಾಗ ಗುಣಮಟ್ಟದ ಎಲೆಯನ್ನು ಹಾಗೂ ಬೆಳವಣಿಗೆಯನ್ನು ಪಡೆಯಬಹುದು.

3.7.2.4 Sericulture

- The role of seaweed extracts in inducing defense in Mulberry: Cultivated tropical sea plant extracts (a.i., *Sulfated galactans*) with four different formulations (LBD3, LBD12, LBS6 and LBS13) were used as a foliar spray in freshly pruned mulberry garden at three different concentrations on 21 and 30 Days after pruning (DAP). Among the treatments, LBS 13 at 1.5 Ml/L is efficient in enhancing the mulberry plant growth as well as leaf quality parameters.

- ಗುಲಾಬಿ ಬಣ್ಣದ ತುಪ್ಪಟದ ತಿಗಣೆ *Maconellicoccus hirsutus* Green ಹತೋಟಿಗೆ ಬಳಸಬಹುದಾದ ಕೀಟನಾಶಕಗಳು ಮತ್ತು ರೇಷ್ಮೆ ಹುಳುವಿನ ಮೇಲೆ ಅವುಗಳ ಪರಿಣಾಮದ ಅಧ್ಯಯನ: ಕೀಟನಾಶಕಗಳಾದ ಡೈನೋಟೆಫ್ಯುರಾನ್ 20 ಎಸ್.ಜಿ @ 0.25 ಗ್ರಾಂ/ಲೀ ಅನ್ನು ಸಿಂಪಡಿಸಿದ 7 ಮತ್ತು 15 ದಿನಗಳ ನಂತರ ಗುಲಾಬಿ ಬಣ್ಣದ ತುಪ್ಪಟದ ತಿಗಣೆಯ ಹೆಚ್ಚಿನ ಮರ್ತ್ಯತೆಯ ಪ್ರಮಾಣವನ್ನು ಪ್ರದರ್ಶಿಸಿತ್ತು, ಇದರ ನಂತರವಾಗಿ ಪೈಮೆಟ್ರೋಜೈನ್ 50 ಡಬ್ಲ್ಯೂ.ಜಿ @ 0.6 ಗ್ರಾಂ/ಲೀ ಮತ್ತು ಅಜ್ಹಾಡಿರಿಕ್ಟಿನ್ ಶೇ.1 @ 2 ಮಿ.ಲಿ/ಲೀ.

- Efficacy of novel insecticides on pink mealybug *Maconellicoccus hirsutus* Green on mulberry and their safety to silkworm: The insecticides, dinotefuron 20 SG @ 0.25 g/l exhibited higher mealybug mortality at both 7 and 15 days after spraying (DAS), followed by pymetrozine 50 WG @ 0.6 g/l and azadirachtin 1 % @ 2 ml/l

- ಫ್ಲೆಚೆರಿ ದುಂಡಾಣುವಿನ ಏಕಾಏಕಿ ರೋಗಕಾರಕ ದುಂಡಾಣುವಿನ ಪರಸ್ಪರ ಪರಿಣಾಮ: ಪಿ.ಎಮ್ x ಸಿ.ಎಸ್.ಆರ್ 2 ರೇಷ್ಮೆ ಹುಳುವಿನ 5ನೇ ಹಂತದ ಮರಿಹುಳುವು 4ನೇ ಮತ್ತು 3ನೇ ಮರಿಹುಳುವಿಗಿಂತ ದುಂಡಾಣುವಿಗೆ ಹೆಚ್ಚಿನ ಸೂಕ್ಷ್ಮತೆಯನ್ನು ಪ್ರದರ್ಶಿಸಿದೆ. 3ನೇ ಮರಿಹುಳುವು ಹೆಚ್ಚಿನ ಸಹಿಷ್ಣುತೆಯನ್ನು ಹೊಂದಿದ್ದು, 4ನೇ ಮರಿಹುಳು (8.54 ಮತ್ತು 10.69) ಹಾಗೂ 5ನೇ ಮರಿಹುಳುಗಳಿಗಿಂತ (6.93 ಮತ್ತು 8.96) ಸರಾಸರಿ ರೋಗಲಕ್ಷಣದ ಅಭಿವ್ಯಕ್ತಿ ಮತ್ತು ಮರಣಕ್ಕೆ (10.99 ಮತ್ತು 13.61) ಹೆಚ್ಚಿನ ದಿನಗಳನ್ನು ತೆಗೆದುಕೊಂಡಿದೆ.

- Interaction effect of pathogenic bacteria on outbreak of bacterial Flacherie: Fifth instar larvae of PM×CSR_{2} found highly sensitive to bacterial administration compared to fourth and third instar larvae. Among three instars, third instar larvae was found tolerable and has taken more number of days for mean symptom expression and mortality (10.99 and 13.61 days) compared to fourth (8.54 and 10.69) and fifth (6.93 and 8.96) instar inoculated batches.

3.7.3 ಸಸ್ಯ ಸಂರಕ್ಷಣೆ

3.7.3.1 ಸಸ್ಯ ರೋಗಶಾಸ್ತ್ರ

ಬೆಳೆಗಳು

ಭತ್ತ

- ಭತ್ತದಲ್ಲಿ ಬೆಂಕಿ ರೋಗದ ನಿರ್ವಹಣೆ: ಐಸೋಪ್ರೊಥಿಯೋಲೇನ್ 40%ಇಸಿ @ 1.5 ಮಿಲೀ/ಲೀ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಿದಾಗ ಎಲೆ ಬೆಂಕಿರೋಗವನ್ನು ನಿಯಂತ್ರಿಸುವಲ್ಲಿ ಪರಿಣಾಮಕಾರಿಯಾಗಿದ್ದು, ಶೇ. 65.20 ರಷ್ಟು ರೋಗವು ಕಡಿಮೆಯಾಗುವುದು ಹಾಗೂ ಶೇ. 26.06 ಹೆಚ್ಚಿನ ಇಳುವರಿ ಹಾಗೂ 1.92 ಲಾಭ ವೆಚ್ಚದ ಅನುಪಾತವನ್ನು ದಾಖಲಿಸಿತು. ಕುತ್ತಿಗೆ ಬೆಂಕಿರೋಗದ ನಿರ್ವಹಣೆಗೆ ಶೇ. 5ರ ತೆನೆ ಬರುವ ಹಂತದಲ್ಲಿ ಸಿಂಪಡಿಸಿದಾಗ ಶೇ. 80.05 ರೋಗದ ಕಡಿತ ಹಾಗೂ 80.74% ಹೆಚ್ಚಿನ ಇಳುವರಿ ಹಾಗೂ 1.98 ಲಾಭ ವೆಚ್ಚದ ಅನುಪಾತವನ್ನು ದಾಖಲಿಸಿತು. ಮುಂದುವರೆದು ಐಸೋಪ್ರೊಥಿಯೋಲೇನ್ 40%ಇಸಿ ಶಿಫಾರಸ್ಸಿನಲ್ಲಿರುವ ಶಿಲೀಂಧ್ರ ನಾಶಕಗಳೊಂದಿಗೆ ಹೋಲಿಸಿದಾಗ ರೋಗ ನಿಯಂತ್ರಿಸುವಲ್ಲಿ ಹಾಗೂ ಇಳುವರಿ ಹೆಚ್ಚಿಸುವಲ್ಲಿ ಸಮನಾಗಿ ಪರಿಣಾಮಕಾರಿಯಾಗಿರುತ್ತದೆ. ಐಸೋಪ್ರೊಥಿಯೋಲೇನ್ 40%ಇಸಿ ಸಿಂಪಡಿಸಿದ 7 & 28 ನೇ ದಿನ ಶೇಷ ವಿಶ್ಲೇಷಣೆ ಮಾಡಿದಾಗ ಗರಿಷ್ಠ ಶೇಷ ಮಟ್ಟಕ್ಕಿಂತ ಕಡಿಮೆ ಪ್ರಮಾಣದಲ್ಲಿ ದಾಖಲಿಸಿರುತ್ತದೆ.

ಸಿರಿ ಧಾನ್ಯಗಳು

- ಬೆಂಕಿರೋಗ ಮತ್ತು ಬುಡಕೊಳೆ ರೋಗವನ್ನು ನಿಯಂತ್ರಿಸಲು ಎರಡು ಉತ್ತಮ ತಂತ್ರಜ್ಞಾನಗಳನ್ನು ಕಂಡುಹಿಡಿಯಲಾಗಿದೆ, ಅವುಗಳೆಂದರೆ:

  ಅ)ಟ್ರೈಸೈಕ್ಲೋಜೋಲ್ ಮತ್ತು ಮ್ಯಾನ್ಕೋಜೆಬ್ 62% ಡಬ್ಲ್ಯೂ.ಪಿ.ಯ ಸಿಂಪರಣಾ ದ್ರಾವಣವನ್ನು ಮೊದಲು ಹೂಬಿಡುವ ಹಂತದಲ್ಲಿ ಹಾಗೂ ಎರಡನೇಯದಾಗಿ 10–15 ದಿನಗಳ ನಂತರ ಸಿಂಪರಣೆಯನ್ನು ಮಾಡುವುದರಿಂದ ಬೆಂಕಿ ರೋಗದ ನಿರ್ವಹಣೆಯನ್ನು ಮಾಡಬಹುದಾಗಿದೆ.

  ಆ)ಕಿಟೊಸಾನ್ 0.25%+ಸ್ಯೂಡೋಮೋನಸ್ ಫ್ಲೂರೋಸೆನ್ಸ್+ ಟ್ರೈಕೋರ್ಡಮಾ ವಿರಡೆ ಟಾಕ್ ಪುಡಿಯನ್ನು 5 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದರಿಂದ ಬುಡಕೊಳೆ ರೋಗವನ್ನು ಪರಿಸರ ಸ್ನೇಹಿಯಾಗಿ ನಿಯಂತ್ರಣ ಮಾಡಬಹುದಾಗಿದೆ.

- ದಕ್ಷಿಣ ಭಾರತದಲ್ಲಿ (ಬೆಂಗಳೂರು ಮತ್ತು ಮಂಡ್ಯ) ಮೊದಲ ಬಾರಿಗೆ ಊದಲು ಬೆಳೆಯಲ್ಲಿ ಎಲೆ ಬೆಂಕಿರೋಗವನ್ನು ದಾಖಲಿಸಲಾಗಿದೆ. ರೂಪ ವಿಜ್ಞಾನದ ಪ್ರಕಾರ ರೋಗಕಾರಕವನ್ನು ಪೈರಿಕ್ಯುಲೇರಿಯಾ ಸಂತತಿ ಎಂದು ಗುರುತಿಸಲಾಗಿದೆ

ತೊಗರಿ

- ಒಟ್ಟಾರೆ 12 ನಮೂದುಗಳು ಸೊರಗು ರೋಗಕ್ಕೆ ಮತ್ತು 51 ನಮೂದುಗಳು ಬಂಜೆರೋಗಕ್ಕೆ ನಿರೋಧಕ ಶಕ್ತಿಯನ್ನು ತೋರಿಸಿರುತ್ತವೆ. 2020 ರ ರೋಗ ಸಮೀಕ್ಷೆಯಲ್ಲಿ, ರಾಮನಗರ

3.7.3 Crop Protection

3.7.3.1 Plant Pathology

Crops

Rice

- **Management of blast disease in Rice:** Isoprothiolane 40% EC @ 1.5 ml/L was effective and on par with the Tebuconazole 50% + trifloxystrobin 25% 75WG and Tricyclazole 75WP in managing the leaf blast disease by recording 65.2% disease reduction and 26.06 % increased yield with cost benefit ratio 1.92. Spraying of isoprothiolane 40%EC @ 1.5 ml/L at 5% panicle emergence stage was effective against neck blast by recording 80.05% disease reduction and 80.74 % increased yield with benefit cost ratio 1.98.The residue detected was below maximum residue limit after 7 & 28 days after spraying.

Small Millets:

- Two promising following strategies were identified for the management of blast and foot rot diseases

  a) Spraying of Tricyclazole + Mancozeb 62% WP 1st spray at the time of flowering followed by second spray 10-15 days later for the managementof blast disease

  b) Seedling root dip with chitosan 0.25% + *Pseudomonas fluorescens* + *Trichoderma viride* (consortium) each 5g/L of water for the eco-friendly management of foot rot in fingr millet.

- Leaf Blast on barnyard millet was recorded for the first time in south India (Bangalore and Mandya).The pathogen was identified as Pyricularia Spp. based on cultural and morphological characters.

Pigeonpea

- Twelve entries of pigeon pea showed resistant reaction to wilt and fifty-one entries showed resistant reaction to SMD. A survey was

ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿ ತೊಗರಿಯಲ್ಲಿ ಸೊರಗು (30–90%), ಬಂಜೆ ರೋಗ (20–30%) ಮತ್ತು ಎಲೆಚುಕ್ಕೆ ರೋಗಗಳು (5–10%) ದಾಖಲಾಗಿವೆ.

ಜಂತುಹುಳು

- ತುಮಕೂರು ಮತ್ತು ಮಂಡ್ಯ ಜಿಲ್ಲೆಯಲ್ಲಿನ ವಿವಿಧ ತಾಲ್ಲೂಕುಗಳಲ್ಲಿ ಕೈಗೊಂಡ ಸಮೀಕ್ಷೆಯ ಪ್ರಕಾರ ಸೌತೆಕಾಯಿ, ಬಾಳೆ, ಟೊಮ್ಯಾಟೊ, ಕನಕಾಂಬರ, ಸೀಬೆ, ದಾಳಿಂಬೆ, ಮೆಕ್ಕೆ ಜೋಳ, ಭತ್ತ, ಉದ್ದು, ಕಬ್ಬು, ಸೌತೆಕಾಯಿ ಗುಂಪಿಗೆ ಸೇರಿದ ಬೆಳೆಗಳಲ್ಲಿ, ಅಲಸಂದೆ ಮತ್ತು ಬೆಂಡೆಕಾಯಿ ಬೆಳೆಗಳಲ್ಲಿ ಪ್ರಮುಖ ಜಂತುಹುಳುಗಳಾದ *ಮೆಲೈಡೊಗೈನೆ ಇನ್ಕಾಗ್ನಿಟಾ, ರಾಡೊಫೊಲಸ್ ಸಿಮಿಲಿಸ್, ಪ್ರಾಟಿಲೆಂಕಸ್ ಪ್ರಭೇದ, ಮೆಲೈಡೊಗೈನೆ ಗ್ರಾಮಿನಿಕೋಲ, ಹಿರ್ಸ್ಚಿಮಾನಿಯಲ್ಲಾ ಓರೈಜೆ, ಮೆಲೈಡೊಗೈನೆ ಎನ್ಟಿರೊಲೋಬಿ, ಟೈಲೆಂಕೋರಿಂಕಸ್ ಪ್ರಭೇದ, ಹೊಪ್ಲೋಲೈಮಸ್ ಇನ್ಡಿಕಸ್* ಮತ್ತು *ಮೆಲೈಡೊಗೈನೆ ಜವಾನಿಕ* ಕಂಡುಬಂದಿವೆ.
- ತುಮಕೂರು ಜಿಲ್ಲೆಯಲ್ಲಿ ಸೌತೆಕಾಯಿ ಬೆಳೆಯಲ್ಲಿ *ಮೆಲೈಡೊಗೈನೆ ಇನ್ಕಾಗ್ನಿಟಾ* (279/200 cc soil) ಮತ್ತು ಬಾಳೆಯಲ್ಲಿ *ರಾಡೊಫೊಲಸ್ ಸಿಮಿಲಿಸ್* (324/200 cc soil) ಜಂತುಹುಳುಗಳು ಹೆಚ್ಚಿನ ಸಂಖ್ಯೆಯಲ್ಲಿರುವುದು ಕಂಡುಬಂದಿದೆ.
- ಮಂಡ್ಯ ಜಿಲ್ಲೆಯಲ್ಲಿ ಭತ್ತದ ಬೆಳೆಯಲ್ಲಿ *ಮೆಲೈಡೊಗೈನೆ ಗ್ರಾಮಿನಿಕೋಲ* (332/200 cc soil) ಜಂತುಹುಳುವಿನ ಬಾಧೆಯು ಹೆಚ್ಚಾಗಿರುವುದು ಕಂಡು ಬಂದಿದೆ.
- ಸೀಬೆ ಬೆಳೆಯಲ್ಲಿ ಕರ್ನಾಟಕದಲ್ಲಿ *ಮೆಲೈಡೊಗೈನೆ ಎನ್ಟಿರೊಲೋಬಿ* ಜಂತು ಹುಳುವು ಮೊದಲಿಗೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, ತೋಟಗಾರಿಕಾ ವಿಶ್ವವಿದ್ಯಾಲಯ, ಜಿಕೆವಿಕೆ ಆವರಣ, ಬೆಂಗಳೂರು ಗ್ರಾಮೀಣ, ಮಂಡ್ಯ ಮತ್ತು ಚನ್ನಪಟ್ಟಣ ತಾಲ್ಲೂಕಿನಲ್ಲಿ ಕಂಡು ಬಂದಿರುವುದು. ಈ ವರ್ಷದಲ್ಲಿ ಸಿರಾ, ಬಾಗಲಕೋಟೆ ಮತ್ತು ಗುಡಿಬಂಡೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿದೆ. ಈ ಜಂತುಹುಳುವು ಕರ್ನಾಟಕದಾದ್ಯಂತ ವೇಗವಾಗಿ ಹರಡಲು ಪ್ರಾರಂಭಿಸಿದೆ.
- ಭತ್ತದ ಸಸಿಮಡಿಗಳಲ್ಲಿ ಡಜೊಮೆಟ್ 40 ಗ್ರಾಂ/ಮಿ2 ಉಪಚರಿಸಿ 15 ದಿನಗಳ ತನಕ ಪಾಲಿಥೀನ್ ಕವರ್ ನ ಹೊದಿಕೆ ಮಾಡಿದಾಗ *ಮೆಲೈಡೊಗೈನೆ ಗ್ರಾಮಿನಿಕೋಲ* ಜಂತು ಹುಳುಗಳ ಬಾಧೆಯು ಕಡಿಮೆ ಪ್ರಮಾಣದಲ್ಲಿ ಕಂಡುಬಂದಿದ್ದು ಅಧಿಕ ಇಳುವರಿಯು ಕಂಡುಬಂದಿದೆ.
- ಸೋರೆಕಾಯಿ ಬೆಳೆಯಲ್ಲಿ *ಸುಡೋಮೊನಾಸ್ ಫ್ಲೋರಸೆನ್ಸ್* (2 ಗ್ರಾಂ ಪ್ರತೀ ಕೆಜಿ ಬೀಜಕ್ಕೆ) ನಿಂದ ಬೀಜೋಪಚಾರ ಮಾಡಿ ಮತ್ತು *ಬಾಸಿಲಸ್ ಅಮೈಲೋಲಿಕ್ವಿಫೇಸಿಯನ್ಸ್* ಅನ್ನು ಬೇವಿನ ಹಿಂಡಿ 2500 ಪ್ರತೀ ಹೆಕ್ಟೇರಿಗೆ ಪುಷ್ಟೀಕರಿಸಿ ಮಣ್ಣಿಗೆ ಸೇರಿಸಿದಾಗ *ಮೆಲೈಡೊಗೈನೆ ಇನ್ಕಾಗ್ನಿಟಾ* ಜಂತು ಹುಳುವಿನ ಬಾಧೆಯ ನಿಯಂತ್ರಣಕ್ಕೆ ಪರಿಣಾಮಕಾರಿಯಾಗಿ ಕಂಡುಬಂದಿದೆ.
- ಹಸಿರು ಮನೆಯಲ್ಲಿ ಬೆಳೆಯುವ ಸೌತೆಕಾಯಿ ಬೆಳೆಯಲ್ಲಿ ಕೊಯ್ಲಿನ ನಂತರದ ಬೇರುಗಳನ್ನು ತೆಗೆಯುವುದು, ಸೌರೀಕರಣದ ನಂತರ

undertaken in the Magadi taluk of Ramanagara district. Diseases noticed are wilt (30-90%), SMD (20-30%), Alternaria leaf spot (5-10%).

Nematodes

- From different taluks of Tumakuru and Mandya districts, major phytonematodes associated with cucumber, banana, tomato, crossandra, guava, pomegranate, maize, paddy, blackgram, suagrcane, cucurbits, cowpea and okra include *M. incognita, R. similis, Pratylenchus* sp., *M. graminicola, H. oryzae, M. enterolobii, Tylenchorhynchus* sp., *Hoplolaimus indicus* and *M. javanica*.
- High populations of *Meloidogyne incognita* (279/200 cc soil) on cucumber, *R. similis* (324/200 cc soil) on banana was recorded from Tumakuru district.
- High populations of *Meloidogyne graminicola* (332 /200 cc soil) on rice was recorded from Mandya district.
- In Karnataka *M. enterolobii* was earlier reported from guava orchards of Chikkaballapur district, UHS campus, GKVK, Bangalore, Bangalore rural, Mandya and Channapattana taluks. This year, it was recorded from Sira (Tumkur dt.), Bagalkote (Bagalkote dt.) and Gudibande (Chikkaballapur dt.). This nematode is spreading in the State.
- Dazomet @ 40g/m2 under polythene cover for 15 days effectively managed *M. graminicola* infesting rice and increased the yield.
- Neem cake enriched with *Baxillus amyliliquefaciens* @ 20g/spot and *Pseudomonas fluroscens* @ 2g/kg of seed was found to be the most effective treatment in reducing root-knot nematode population and increasing the yield in bottle gourd.
- Removal of previous crop roots +solarization+ *P.lilacinum* at 2 kg in 1 ton FYM in beds after

ಪಾಸಿಲೋಮೈಸಿಸ್ ಲಿಲಾಸಿನಮ್ 2 ಕೆಜಿ ಒಂದು ಟನ್ ಕೊಟ್ಟಿಗೆ ಗೊಬ್ಬರದಲ್ಲಿ ಬೆರೆಸಿ ಉಪಚರಿಸಿದ ತಾಕುಗಳಲ್ಲಿ *ಮೆಲೈಡೊಗೈನೆ ಇನ್ಕಾಗ್ನಿಟಾ* ಜಂತು ಹುಳುವಿನ ಬಾಧೆಯ ನಿಯಂತ್ರಣಕ್ಕೆ ಪರಿಣಾಮಕಾರಿಯಾಗಿ ಕಂಡು ಬಂದಿದೆ.

- ಹಸಿರು ಮನೆಯಲ್ಲಿ ಬೆಳೆಯುವ ದಪ್ಪ ಮೆಣಸಿನಕಾಯಿ ಬೆಳೆಯಲ್ಲಿ 100 ಗ್ರಾಂ/ಮೀ2 ಕೋಳಿ ಗೊಬ್ಬರದಿಂದ ಉಪಚರಿಸಿದ ತಾಕುಗಳಲ್ಲಿ ನಂತರದಲ್ಲಿ ಬೇವಿನ ಹಿಂಡಿಯಿಂದ ಉಪಚರಿಸಿದ ತಾಕುಗಳಲ್ಲಿ *ಮೆಲೈಡೊಗೈನೆ ಇನ್ಕಾಗ್ನಿಟಾ* ಜಂತು ಹುಳುವಿನ ಬಾಧೆಯ ನಿಯಂತ್ರಣಕ್ಕೆ ಪರಿಣಾಮಕಾರಿಯಾಗಿ ಕಂಡು ಬಂದಿದೆ.
- *ಟ್ರೈಕೋಡರ್ಮ ಕೊನಿಗಿ* ಮತ್ತು *ಬಾಸಿಲಸ್ ವೆಲೆನ್‌ಜೆನಸಿಸ್* ಪಿ42 ಪ್ರಭೇದದ ಸಿದ್ದಪಡಿಸಿದ ಜೀವಾಣುರಾಶಿಗಳು ಜಂತು ಹುಳುವಿನ ಮೊಟ್ಟೆಯ ಒಡೆಯುವಿಕೆಯನ್ನು ನಿಯಂತ್ರಿಸಿರು ವುದಲ್ಲದೇ ಜಂತು ಹುಳು ಮರಿಹುಳುವಿನ ಮರಣ ದರವು ಹೆಚ್ಚಾಗಿ ಕಂಡುಬಂದಿದೆ. ಮುಂದುವರೆದು, ಟೊಮೋಟೊ ಗಿಡಗಳ ಬೇರಿನ ಮೂಲಕ ಉಪಚರಿಸಿದಾಗ ಜಂತು ಹುಳುವಿನ ಬಾಧೆಯ ನಿಯಂತ್ರಿಸಲು ಪರಿಣಾಮಕಾರಿಯಾಗಿ ಕಂಡು ಬಂದಿದೆ.

3.7.3.2 ಕೀಟಶಾಸ್ತ್ರ

ತೃಣ ಧಾನ್ಯಗಳು

- ರಾಗಿಯಲ್ಲಿ ಸ್ಪೊಡಾಪ್ಟೆರಾ ಫ್ಯೂಜಿಪೆರ್ಡಾ ಬಾಧೆಯನ್ನು ಮೊದಲು ಗಮನಿಸಲಾಯಿತು.
- ರಾಗಿ ಮತ್ತು ಜೋಳದಲ್ಲಿ ಸ್ಪೊಡಾಪ್ಟೆರಾ ಫ್ಯೂಜಿಪೆರ್ಡಾ ಕೀಟದ ತುಲನಾತ್ಮಕ ಜೀವನ ಚರಿತ್ರೆಯನ್ನು ಮಾಡಲಾಯಿತು. ಅದರ ಜೀವನ ಚಕ್ರವನ್ನು 36–42 ದಿನಗಳೊಳಗೆ ಮುಗಿಸುತ್ತದೆ
- ತೃಣಧಾನ್ಯಗಳಲ್ಲಿ ಭಾರತದಲ್ಲಿ ದೊರೆತ ಸುಳಿ ನೊಣಗಳ ಜೈವಿಕ ಭೂಗೋಳದ ನಕ್ಷೆಯನ್ನು ರೂಪಿಸುತ್ತಿದ್ದೇವೆ
- ಕಳೆದ 5 ವರ್ಷಗಳಿಂದ 25 ಸುಳಿನೊಣ ಪ್ರಭೇದಗಳನ್ನು ಗುರುತಿಸಲಾಗಿದೆ.

ತೊಗರಿ

- ಪ್ರಮುಖ ಕಾಯಿಕೊರೆಯುವ ಕೀಟಗಳಿಗೆ ಮಧ್ಯಮ ಅವಧಿಯ 24 ಜರ್ಮ್‌ಪ್ಲಾಸಂಗಳನ್ನು ಪರೀಕ್ಷಿಸಲಾಯಿತು. ಅವುಗಳಲ್ಲಿ 3 ಪರೀಕ್ಷಾ ತಳಿಗಳು ಜಿ.ಸಿ.ಪಿ.ಬಿ. 41, ಜಿ.ಸಿ.ಪಿ.ಬಿ. 15 (5.2%) ಮತ್ತು ಜಿ.ಸಿ.ಪಿ.ಬಿ. 20 (5.41%), ಹೆಲಿಕಾವರ್ಪಾ ಆರ್ಮಿಜರಾ (ಕಾಯಿಕೊರಕ) ದಿಂದ ಕನಿಷ್ಟ ಕಾಯಿಯ ಹಾನಿಯನ್ನು ತೋರಿಸಿರುತ್ತವೆ. ಸುಗ್ಗಿಯ ಸಮಯದಲ್ಲಿ ಕಡಿಮೆ ಶೇಕಡಾವಾರು ಬೀಜಹಾನಿ (2.09%) ಮತ್ತು ಹೆಚ್ಚಿನ ಇಳುವರಿ (2304 ಕೆಜಿ/ಹೆ.), ಡೈನೆಟೋಫ್ಯುರಾನ್ ಉಪಚಾರದಲ್ಲಿ ಕಂಡುಬಂದಿರುತ್ತದೆ. ಕಾಯಿನೊಣ ವಿರುದ್ದ ಮೌಲ್ಯಮಾಪನ ಮಾಡಿದ ಉಪಚಾರ ಗಳಲ್ಲಿ ಅಸಿಟಮಿಪ್ರಿಡ್ ಉಪಚಾರದಲ್ಲಿ ಅತ್ಯಧಿಕ ವೆಚ್ಚಲಾಭ ಅನುಪಾತ (9.24) ಕಂಡುಬಂದಿರುತ್ತದೆ. ರಾಸಾಯನಿಕ ಸಂಸ್ಕರಣೆಯೊಂದಿಗೆ ಅತ್ಯಧಿಕ ಧಾನ್ಯದ ಇಳುವರಿಯನ್ನು,

solarization can effectively manage *M. incognita* population in cucumber grown in polyhouse.

- Application of poultry manure @100g/m2 2 weeks prior to transplanting manages root-knot nematode population in polyhouse cultivated capsicum by increasing yield also considerably.
- The culture filtrate of *Trichoderma koningii* and *Bacillus velenzenesis* strain P42 exhibited inhibition of egg hatching, juvenile mortality and final nematode population of *M. incognita* on tomato.

3.7.3.2 Entomology

Small Millets

- The incidence of *Spodoptera frugiperda* on finger millet is reported for the firsr time.
- Comparaive biology of *Spodopterafrugiperda* was carried out on finger millet and maize crop. It completes its lifecycle within 36- 42 days.
- Mapping of biogeography of Indian shoot flies of small millets is under progress
- Over all around 25 species of shoot fly were identified during last five years

Pigeonpea

- Three entries GCPB-41, GCPB-15 (5.2%) and GCPB-20 (5.41%) showed least pod damage by *Helicoverpa armigera*. Though the lowest per cent seed damage (2.09%) and highest yield (2304 kg/ha) at harvest was observed in the treatment Dinetofuron, the highest cost benefit ratio 9.24 was obtained in the Acetamiprid treatment among the chemical treatments evaluated against pod fly. The highest grain yield was obtained with chemical treatment Chlorantraniliprole @ 0.3 ml per lt (2133 kg/ha) with 3.71 cost benefit ratio followed by Bt.

ಕ್ಲೊರಾಂಟ್ರನಿಲಿಪ್ರೋಲ್ ಉಪಚಾರದಲ್ಲಿ (2133 ಕೆಜಿ/ಹೆ) ಪಡೆಯಲಾಗಿರುತ್ತದೆ. ನಂತರ ಬಿ.ಟಿ. ಕುರಸ್ತಾಕಿ @2.5 ಗ್ರಾಂ/ಲೀ. (1863 ಕೆಜಿ/ಹೆಕ್ಟೇರಿಗೆ), ಬಿ.ಟಿ. ಕುರಸ್ತಾಕಿ @2.25 ಗ್ರಾಂ/ಲೀ. (1843 ಕೆಜಿ/ಹೆಕ್ಟೇರಿಗೆ) ಮತ್ತು ಎನ್.ಎಸ್.ಕೆ.ಯಿ. 5% (1808 ಕೆಜಿ ಪ್ರತೀ ಹೆಕ್ಟೇರಿಗೆ) ಕಂಡುಬಂದಿರುತ್ತದೆ.

ಹತ್ತಿ

- ಹತ್ತಿಯಲ್ಲಿ ಜಿಗಿ ಹುಳುವಿನ ಪ್ರತಿರೋಧಕ್ಕಾಗಿ ವಿವಿಧ ಹತ್ತಿ ತಳಿಗಳ ಪರಿಶೀಲನೆ (IVT): ಒಟ್ಟು 88 ತಳಿಗಳನ್ನು ಪರೀಕ್ಷಿಸಿದ್ದು, ಅವುಗಳಲ್ಲಿ 37, 38 ಮತ್ತು 13 ತಳಿಗಳು ಕ್ರಮಬದ್ಧವಾಗಿ I, II ಮತ್ತು III ನೇ ಹಂತಗಳ ಹಾನಿ ಪ್ರಮಾಣ ಕಂಡುಬಂದಿದೆ.

- ಪ್ರತಿ ವಾರಕ್ಕೊಮ್ಮೆ ರೈತರ ಹತ್ತಿ ತಾಕುಗಳಲ್ಲಿ ಬರುವ ಪ್ರಮುಖ ಕೀಟಗಳ ಸಮೀಕ್ಷೆ ಮಾಡಿ ರೈತರಿಗೆ ಹತೋಟಿ ಕ್ರಮಗಳ ಬಗ್ಗೆ ಸಲಹೆ ಕೊಡುವುದು: ರಸಹೀರುವ ಕೀಟಗಳಲ್ಲಿ ಹಸಿರು ಜಿಗಿಹುಳು ಜುಲೈ ತಿಂಗಳಿನ ಮೂದಲನೇ ವಾರದಿಂದ 55 ತಾಕುಗಳಲ್ಲಿ ಆರ್ಥಿಕ ಮಟ್ಟ ರೇಖೆ ದಾಟಿರುವುದು ಕಂಡುಬಂದಿದೆ. ಅದೇ ರೀತಿ ಸಸ್ಯ ಹೇನುಗಳು 56 ತಾಕುಗಳಲ್ಲಿ ಆರ್ಥಿಕ ಮಟ್ಟ ರೇಖೆ ದಾಟಿರುವುದು ಕಂಡುಬಂದಿದೆ. ಗುಲಾಬಿ ಕಾಯಿಕೊರಕದ ಹಾವಳಿ ಅಗಸ್ಟ್ ತಿಂಗಳಿನಲ್ಲೆ ಕಂಡುಬಂದಿದ್ದು 33 ತಾಕುಗಳಲ್ಲಿ ಆರ್ಥಿಕ ಮಟ್ಟ ರೇಖೆ ದಾಟಿದೆ.

- ಹತ್ತಿಯಲ್ಲಿ ಬರುವ ಕೀಟಗಳ ನಿರ್ವಹಣೆಗಾಗಿ ಸಮಗ್ರ ಕೀಟ ನಿರ್ವಹಣ ಪದ್ದತಿಗಳ ಪರೀಶೀಲನೆ: ಸಮಗ್ರ ಕೀಟ ನಿರ್ವಹಣ ಪದ್ದತಿಗಳ ಉಪಚಾರದಲ್ಲಿ ಕಡಿಮೆ ಪ್ರಮಾಣದ ಬಾಧಿತ ಹೂ, ಕಡಿಮೆ ಪ್ರಮಾಣದ ಕೀಡೆಗಳು ಪ್ರತಿ 20 ಹಸಿರು ಕಾಯಿಗಳಿಗೆ, ಹಸಿರು ಮತ್ತು ತೆರೆದ ಕಾಯಿಗಳಲ್ಲಿ ಕಡಿಮೆ ಪ್ರಮಾಣದ ತೊಳೆಗಳ ಬಾದೆ ಕಂಡುಬಂದು, ಅತಿ ಹೆಚ್ಚಿನ ಇಳುವರಿ (19.25 ಕ್ವಿ/ಹೆ) ಹಾಗೂ ರೂ.49900 ಲಾಭ ಪಡೆಯಲಾಗಿದೆ.

ಕಶೇರುಕ ಪ್ರಾಣಿ ನಿರ್ವಹಣ

- ಪಕ್ಷಿಗಳ ಮೇಲಿನ ಕಣ್ಗಾವಲು ಅಧ್ಯಯನಗಳು ಬಿತ್ತನೆ ಮಾಡಿದ ಕಾಲದಿಂದ ಕೊಯ್ಲಿಗೆ ಎಲ್ಲಾ ಬೆಳೆಗಳು ಪಕ್ಷಿ ಹಾನಿಗೆ ಗುರಿಯಾಗುತ್ತವೆ ಎಂದು ತಿಳಿದುಬಂದಿದೆ. ಮೆಕ್ಕೆಜೋಳ ಮತ್ತು ಸೂರ್ಯಕಾಂತಿಗಳ ಕ್ಷೀರಪಥದಲ್ಲಿ ಅತಿ ಹೆಚ್ಚು ಹಾನಿ ದಾಖಲಾಗಿದ್ದು, ಕ್ರಮವಾಗಿ ಶೇ. 7.5–12.4, 16–34 ಮತ್ತು ಕೊಯ್ಲು ಹಂತದಲ್ಲಿ ರಾಗಿ 4.6–7.90 ರಷ್ಟಿದೆ. ಮೆಕ್ಕೆಜೋಳ ಮತ್ತು ಸೂರ್ಯಕಾಂತಿ ಬೆಳೆಗಳಲ್ಲಿ ಗಿಳಿಗಳು ಪ್ರಧಾನವಾಗಿದ್ದರೆ, ರಾಗಿ ಮತ್ತು ಶೇಂಗಾ ಬೆಳೆಯಲ್ಲಿ ಮಚ್ಚೆಯುಳ್ಳ ಮುನಿಯಾ ಪಕ್ಷಿಗಳು ಕೀಟಗಳಾಗಿವೆ. ಅದಾಗ್ಯು, ಅತಿ ಹೆಚ್ಚು ಸಾಪೀಕ್ಷ ಸಮೃದ್ಧಿ ಶೇ. 22.56ರಷ್ಟು ಶೇಂಗಾ ಮತ್ತು ರಾಗಿಯಲ್ಲಿ ದಾಖಲಿಸಿದೆ. ರಿಂಗ್ಡ್ ಗಿಳಿಗಳು ಮೆಕ್ಕೆಜೋಳ ಮತ್ತು ಸೂರ್ಯಕಾಂತಿಗಳಲ್ಲಿ ಕ್ರಮವಾಗಿ ಶೇ. 28.53 ಮತ್ತು 21.60 ರಷ್ಟು ಕ್ರಮವಾಗಿದೆ.

kurastaki @ 2.5 g/lt (1863 kg/ha), Bt. kurastaki @ 2.25 g/lt (1843 kg/ha and NSKE 5% (1808 kg/ha), among the bio-pesticides evaluated against pod borers in pigeonpea with Chlorantraniliprole as check.

Cotton

- Screening of breeding material for resistance to insect pests of cotton: Totally 88 genotypes were screened for their reaction to insect pest complex in two replications, Out of those 37, 38 and 13 genotypes shown jassid injury grade I, II and III respectively.

- Weekly Pest Status on Cotton in farmer's fields during 2020-21: Among sucking pests, leafhoppers crossed ETL in 55 locations starting from July month. Similarly, 56 locations were suffering from heavy aphids incidence. The incidence of PBW was noticed during August itself and crossed ETL in 33 locations.

- Validation of IPM module for cotton pests: IPM module has recorded less roseste flower, less number of pink bollworm larvae/20 green bolls, minimum green boll damage, locule damage in green bolls and open boll locule damage. Higher yield (19.25/ha) with net return of Rs.49900.00/ha was recorded in IPM module as compare to farmers practice, where in higher incidence of pink bollworm was noticed.

Vertebrate Pest Management

- The surveillance studies on birds revealed the highest damage in milky stage of maize and sunflower with the incidence of 7.5-12.4, 16-34, per cent respectively followed by ragi (4.6-7.90%) during the harvesting stage. In maize and sunflower parakeets were predominant bird pest whereas, in ragi Indian peafowl and spotted munia were the predominant bird pests. The highest relative abundance of 22.56 per cent was recorded by Indian peafowl in ragi, and rose ringed parakeet by 28.53 and 21.60 per cent in maize and sunflower respectively.

- ರಾಗಿಯಲ್ಲಿ ಪಕ್ಷಿಗಳ ನಿರ್ವಹಣೆಗೆ ಸಂಬಂಧಿಸಿದ ವಿವಿಧ ಮಾಡ್ಯೂಲ್‌ಗಳಲ್ಲಿ ಬೆಳೆಗಳನ್ನು ಜೈವಿಕ ಅಕೌಸ್ಟಿಕ್ಸ್ (ಶೇ.2.5) ಮತ್ತು ಪ್ರತಿಫಲಿತ ಟೇಪ್ (ಹೆಕ್ಟೇರಿಗೆ ಶೇ. 3.7, 1756 ಕೆಜಿ) ಆದರೆ, ಮೆಕ್ಕೆ ಜೋಳದಲ್ಲಿ ನೈಲಾನ್ ನಿವ್ವಳ (ಶೇ. 0, 3575 ಕೆ/ಹೆ.) ಮತ್ತು ಜೈವಿಕ ಅಕಸ್ಟಿಕ್ಸ್ (ಶೇ. 7.6, 3326 ಕೆಜಿ./ಹೆ.) ನಿಂದ ರಕ್ಷಿಸಲ್ಪಟ್ಟ ಕ್ಷೇತ್ರಗಳಿಂದ ಕಡಿಮೆ ಬೆಳೆ ಹಾನಿ ಮತ್ತು ಹೆಚ್ಚಿನ ಇಳಿವರಿ ದಾಖಲಾಗಿದೆ. ನೆಲಗಡಲೆಯಲ್ಲಿ ಬಿತ್ತಿದ ಬೀಜಗಳು ಪಕ್ಷಿ ಹಾನಿಗೆ ಒಡ್ಡಿಕೊಳ್ಳುತ್ತವೆ ಮತ್ತು ಬೆಳೆಗಳನ್ನು ಹಾನಿಗೊಳಗಾಗುತ್ತವೆ. ಹೊಲಗಳಲ್ಲಿ ನೈಲಾನ್ ನಿವ್ವಳ (ಶೇ. 0%, 3575 ಕೆಜಿ/ಹೆ.) ಮತ್ತು ಸೆಣಬಿನ ಹಗ್ಗಗಳ ವ್ಯವಸ್ಥೆ (7.6%, 3326 ಕೆಜಿ/ಹೆ.) ಸೂರ್ಯಕಾಂತಿಯಲ್ಲಿ ಹೆಕ್ಟೇರಿಗೆ 1310, 1185 ಕೆಜಿ ಮತ್ತು ಕನಿಷ್ಟ 4.6ರಷ್ಟು ಹಾನಿಯಾಗಿದೆ.

- Among the different modules for the management of birds in ragi the least crop damage and highest yield was recorded when the crops were protected with bio acoustics (2.5 %) and reflective tape (3.7 %, 1756 kg/ha) whereas, in maize the least crop damage and highest yield was recorded by fields protected by nylon net (0 %, 3575 kg/ha) and Bio acoustics (7.6 %, 3326 kg/ha). In groundnut, the sown seeds are exposed to bird damage the least crop damage and highest yield was recorded when the fields were protected with nylon net (0%, 935 kg/ha) and Arranging of jute ropes (7.6%, 856 kg/ha). In sun flower, the highest yield of 1310, 1185 kg/ha and least damage of 4.6 per cent was recorded when the fields were protected with nylon net and bioacoustics respectively.

- ಶೇಂಗಾ ಬೆಳೆಯಲ್ಲಿ ಮುಳ್ಳುತಂತಿಯೊಂದಿಗೆ ಬೇಲಿ ಹಾಕುವುದು, ಎಚ್‌ಡಿಇಪಿ ನೈಲಾನ್ ನಿವ್ವಳವನ್ನು ಇಡುವುದು ಮತ್ತು ಕಾಡುಹಂದಿ ನಿರ್ವಹಣೆಗೆ ಜೈವಿಕ ಅಕೌಸ್ಟಿಕ್‌ಅನ್ನು ಬಳಸುವುದು ಉತ್ತಮ ಆರ್ಥಿಕ ಕ್ರಮಗಳು. ಹೆಕ್ಟೇರಿಗೆ 1122.4 ಕೆಜಿ, 1132.6 ಮತ್ತು 1071.6 ಕೆಜಿ/ಗ್ರಾಂ ಇಳುವರಿ ದಾಖಲಾಗಿದೆ, ನಿಯಂತ್ರಣಕ್ಕಿಂತ (ಹೆಕ್ಟೇರಿಗೆ 703.21ಕೆಜಿ) ಈ ಕೆಳಗಿನ ಚಿಕಿತ್ಸೆಗಳೊಂದಿಗೆ ಮೆಕ್ಕೆಜೋಳದಲ್ಲಿ ಇದೇ ರೀತಿಯ ಪ್ರವೃತ್ತಿಯನ್ನು ದಾಖಲಿಸಲಾಗಿದೆ, ಇದು ಹೆಕ್ಟೇರಿಗೆ 3475, 3456, 3247 ಕೆಜಿ / ಇಳುವರಿ ದಾಖಲಾಗಿದ್ದು ಹೊಲಗಳನ್ನು ಮುಳ್ಳುತಂತಿಯೊಂದಿಗೆ ಬೇಲಿ ಹಾಕುವ ಮೂಲಕ ರಕ್ಷಿಸಿದಾಗ, ಎಚ್‌ಡಿಇಪಿ ನೈಲಾನ್ ನಿವ್ವಳ ನಿಯೋಜನೆ ಮತ್ತು ಜೈವಿಕ ಅಕೌಸ್ಟಿಕ್ಸ್‌ಅನ್ನು ಕ್ರಮವಾಗಿ ಬಳಸಲಾಯಿತು.

- In ground nut crop, the best economic measures were fencing with barbed wire, placement of HDEP nylon net and use of bioacoustics for wild boar management. The yield of 1122.4 kg/ha, 1132.6 and 1071.6 kg/h was recorded, respectively with the following above treatments than the control (703.21 kg/ha). Similar trends were also recorded in maize which recorded in yield of 3475, 3456, 3247 kg/ha was recorded when the fields were protected with fencing with barbed wire, placement of HDEP nylon net and use of bioacoustics, respectively.

- ಕೋತಿಗಳ ಸಾಮಾಜಿಕ ರಚನೆಯ ಅಧ್ಯಯನಗಳು, ಗುಂಪು ಗಾತ್ರ, ಸಾಂದ್ರತೆ, ಗಂ:ಹೆ ಅನುಪಾತವನ್ನು ದೊಡ್ಡಬಳ್ಳಾಪುರ, ಕನಕಪುರ, ಚಾಮರಾಜನಗರ, ಮಾಗಡಿ ಮತ್ತು ಶಿವಮೊಗ್ಗಗಳಲ್ಲಿ ಹಾನಿಯನ್ನು ದಾಖಲಿಸಲಾಗಿದೆ. ಗುಂಪಿನ ಸರಾಸರಿ ಗಾತ್ರ 18 ರಿಂದ 52 ಮತ್ತು ಎಂ:ಎಫ್ ಅನುಪಾತ 2:1.5 ಎಂದು ದಾಖಲಿಸಲಾಗಿದೆ ಎಂದು ಅಧ್ಯಯನವು ಸೂಚಿಸಿದೆ. ಕೋತಿಗಳು ಆಹಾರಕ್ಕಾಗಿ ಹೊಲ ಮತ್ತು ತೋಟಗಾರಿಕಾ ಬೆಳೆಗಳಿಗೆ ಆದ್ಯತೆ ನೀಡಿತು ಮತ್ತು ಸಂಜೆ ತಡವಾಗಿ ಎಲ್ಲಾ ಕೋತಿಗಳು ಕೃಷಿ ಹೊಲಗಳಿಗೆ ಹತ್ತಿರವಿರುವ ಮರಗಳ ಮೇಲೆ ವಾಸಿಸುತ್ತಿದ್ದವು.

- Studies on social structure of the monkeys viz. group size, density, M: F ratio and damage pattern at Doddaballapura, Kanakapura, Chamaraja-nagara, Magadi, and Shivamogga was recorded. The study indicated mean group size of 18 to 52 and M:F ratio of 2:1.5 was recorded. The monkeys preferred the field and horticultural crops for feeding and at late evening all the monkeys resided on trees close to the agricultural fields.

- ಕೋತಿಗಳ ಬೆಳೆ ಆಧ್ಯತೆಯ ಅಧ್ಯಯನದಲ್ಲಿ ಕೋತಿಗಳು ಹಣ್ಣುಗಳಿಗೆ (ಶೇ.53) ಆಧ್ಯತೆ ನೀಡಿವೆ, ನಂತರ ತರಕಾರಿಗಳು (ಶೇ.25), ಸಿರಿಧಾನ್ಯಗಳು (ಶೇ.8), ಸಕ್ಕರೆ (ಶೇ.6) ಗೆಡ್ಡೆಗಳು (ಶೇ.6), ಮಸಾಲೆಗಳು (ಶೇ.2) ಮತ್ತು ಬೆಳೆದಾಳಿ ಆವರ್ತನವು ಎರಡು ಬಾರಿ ದುರ್ಬಲವಾಗಿತ್ತು.

- In the crop preference studies by monkeys found that monkeys preferred Fruits (53%) followed by Vegetables (25%), Cereals (8%), Sugar (6%), Tubers (6%), Spices (2%) and the crop raiding frequency was weakly twice.

- ಮೆಕ್ಕೆಜೋಳ, ತರಕಾರಿ ಮತ್ತು ದ್ರಾಕ್ಷಿ ತೋಟಗಳಲ್ಲಿ ಅಳಿಲುಗಳ ಜನಸಂಖ್ಯೆಯನ್ನು ಅಂದಾಜಿಸಲಾಗಿದೆ, ಬೆಳೆಗಳಲ್ಲಿ ಹೆಚ್ಚಿನ

- Population of Indian palm squirrel was estimated in maize, vegetables and grape gardens, among

ಸಂಖ್ಯೆಯ ಅಳಿಲುಗಳು ದ್ರಾಕ್ಷಿ ತೋಟಗಳಲ್ಲಿ (22 / ಎಕರೆಗೆ) ದಾಖಲಾಗಿದ್ದು, ನಂತರ ಮೆಕ್ಕೆಜೋಳ (19 / ಎಕರೆಗೆ). ಆಹಾರ ಆಧ್ಯತೆಯ ಅಧ್ಯಯನಗಳು ಅಳಿಲು ಆಧ್ಯತೆಯ ಬೀಜಗಳು (ಶೇ.21), ಕೀಟಗಳು (ಶೇ.18), ಹಣ್ಣುಗಳು (ಶೇ.11), ಹೂವಿನ ಮೊಗ್ಗುಗಳು (ಶೇ.9), ತೊಗಟೆ (ಶೇ.8) ಮತ್ತು (ಶೇ.6).

ಮಣ್ಣು ಸಂಧಿಪದಿ ಪೀಡೆಗಳು

- ಭಾರತದಿಂದ ವರದಿಯಾಗಿರುವ ಪೊಪಿಲಿಯ ಡಿಜೇನ್ (ಕೊಲಿಯಾಪ್ಟರ : ಸ್ಕ್ಯಾರಾಬಿಡೆ : ರುಟೆಲಿನೆ) ಪಂಗಡದ 40 ಪ್ರಭೇದಗಳ ತಾಳೆಪಟ್ಟಿಯನ್ನೂ ಸಿದ್ಧಪಡಿಸಲಾಯಿತು.
- ಸ್ಥಳೀಯ ಶಿಲೀಂದ್ರ UASBBbl6 ಕಬ್ಬಿನ ಬೇರುಹುಳು ಮತ್ತು ಅಡಿಕೆ ಬೇರುಹುಳುಗಳ ವಿರುದ್ಧ ಪರಿಣಾಮಕಾರಿಯಾಗಿರುವುದು ಕಂಡುಬಂದಿತು.

ಕೃಷಿ ನುಸಿ

- ಟೊಮ್ಯಾಟೋ ಬೆಳೆಯಲ್ಲಿ ಜೇಡನುಸಿಗಳಿಂದಾಗುವ ಹಾನಿಯ ಪ್ರಮಾಣವನ್ನು ನಿಗದಿ ಮಾಡುವುದು: ಟೊಮ್ಯಾಟೋ ಬೆಳೆಯಲ್ಲಿ ಜೇಡನುಸಿಗಳಿಂದಾಗುವ ಹಾನಿಯ ಪ್ರಮಾಣವನ್ನು ಕಂಡುಹಿಡಿಯಲು 18.9 ಚ. ಮೀ. ಅಳತೆಯ ತಲಾ 7 ಮಡಿಗಳಲ್ಲಿ 2019ರ ನವೆಂಬರ್ ತಿಂಗಳಿನಲ್ಲಿ ಟೊಮ್ಯಾಟೊ ಬೆಳೆ ನಾಟಿ ಮಾಡಲಾಯಿತು. ಒಂದು ಗುಂಪಿನ 7 ಮಡಿಗಳಲ್ಲಿ ನುಸಿನಾಶಕ ಗಳನ್ನು ಸಿಂಪಡಿಸಿ ಸಂಪೂರ್ಣ ನುಸಿ ನಿಯಂತ್ರಣ ಮಾಡಿ, ಮತ್ತೊಂದು ಗುಂಪಿನ 7 ಮಡಿಗಳಲ್ಲಿ ಜೇಡನುಸಿಗಳನ್ನು ಕೃತಕವಾಗಿ ಬಿಡುಗಡೆಗೊಳಿಸಿ ನುಸಿಬಾಧೆಯುಂಟಾಗುವಂತೆ ಮಾಡಲಾಯಿತು. ಎರಡೂ ಗುಂಪುಗಳಿಂದ ದೊರೆತ ಟೊಮ್ಯಾಟೋ ಹಣ್ಣಿನ ಇಳುವರಿಯನ್ನು ತುಲನೆ ಮಾಡಿ ಜೇಡನುಸಿಗಳಿಂದ ಟೊಮ್ಯಾಟೋ ಬೆಳೆಯಲ್ಲಾಗುವ ಇಳುವರಿಯ ನಷ್ಟವನ್ನು ಕಂಡುಹಿಡಿಯಲಾಗಿ, ಟೊಮ್ಯಾಟೋ ಹಣ್ಣಿನ ಇಳುವರಿಯ ನಷ್ಟವು ಶೇ. 30.00 ರಷ್ಟಿತ್ತು. ಪ್ರಸ್ತುತ ನಡೆಸಲಾದ ಪ್ರಯೋಗವು ಮೂರನೆಯ ಹಂಗಾಮಿನದಾಗಿದ್ದು, ಇದರ ಜೊತೆಗೆ ಈ ಮೊದಲೇ ತೆಗೆದುಕೊಂಡಿದ್ದ ಇತರೆ ಎರಡು ಪ್ರಯೋಗಗಳ ಸರಾಸರಿ ಇಳುವರಿ ನಷ್ಟವನ್ನು (ಶೇ. 30.7 ಮತ್ತು ಶೇ. 13.3) ಸೇರಿಸಿದಾಗ ಒಟ್ಟಾರೆ ಸರಾಸರಿ ಇಳುವರಿ ನಷ್ಟವು ಶೇ. 24.7 ಆಗಿರುವುದು ತಿಳಿದುಬಂದಿತು.
- ಕಬ್ಬು ಬೆಳೆಯಲ್ಲಿ ಜೇಡ ನುಸಿಗಳು ಹಾಗೂ ಇರಿಯೋಫಿಡ್ ನುಸಿ ಬಾಧೆಯ ಬಗ್ಗೆ ಉಸ್ತುವಾರಿ ಅಧ್ಯಯನ ನಡೆಸುವುದು: ಕಬ್ಬು ಬೆಳೆಯ ಜೇಡ ನುಸಿಗಳು ಹಾಗೂ ಇರಿಯೋಫಿಡ್ ನುಸಿಗಳ ಬಾಧೆಯ ಬಗ್ಗೆ ಮಾಹಿತಿ ಪಡೆಯಲು ಮಂಡ್ಯ ಜಿಲ್ಲೆಯ ಮಂಡ್ಯ ಹಾಗೂ ಮದ್ದೂರು ತಾಲ್ಲೂಕುಗಳ ದೊಡ್ಡರಸಿನಕೆರೆ, ಹೆಮ್ಮಿಗೆ, ತಂಡಸನಹಳ್ಳಿ ಹಾಗೂ ತಗ್ಗಳ್ಳಿಗಳಲ್ಲಿ 3 ರಿಂದ 6 ತಿಂಗಳಿನ ಕಬ್ಬಿನ ತಾಕುಗಳಲ್ಲಿ 2020 ರ ಜೂನ್ ತಿಂಗಳಿನಲ್ಲಿ ನುಸಿಬಾಧೆಯ ಸರ್ವೇಕ್ಷಣೆ ಮಾಡಲಾಯಿತು. ಜೇಡನುಸಿ ಒಲಿಗೋನಿಕಸ್ ಇಂಡಿಕಸ್ ಬಾಧೆಗೊಳಗಾದ ಕವಲುಗಳ ಸಂಖ್ಯೆ ಹಾಗೂ ಪ್ರತಿ ಎಲೆಯಲ್ಲಿ ಇರುವ ನುಸಿಗಳ ಸಂಖ್ಯೆಯು ಕ್ರಮವಾಗಿ ಶೇ. 1 ರಿಂದ 4 ಹಾಗೂ 0 ಯಿಂದ 27 ನುಸಿಗಳು ಪ್ರತಿ 0.4 ಚ.ಸೆ.ಮೀ. ಎಲೆಯ ಮೇಲೆ ಕಂಡುಬಂತು. ಜೇಡನುಸಿ ಸೈಜೋಟೆಟ್ರಾನಿಕಸ್ ಕ್ರಂಗ್ತೆಪೆನ್ಸಿಸ್‌ಯ

the crops highest number of squirrels were recorded in grape gardens (22/acre) followed by maize (19/acre). The food preference studies indicated the squirrel preferred nuts (21%), insects (18%), seeds (16%), fruits (11%), flower buds (9%), bark (8%), and pith (6%).

Soil Arthropod Pests

- A comprehensive checklist for 40 species of the genus *Popillia* Dejean (Scarabaeidae: Rutelinae) of India is prepared.
- A native fungal isolate UASBBb16 showed promising results against sugarcane and arecanut white grubs.

Agril. Acarology

- Assessment of crop loss due to spider mite on tomato crop: Crop loss study was conducted in tomato during November 2019. Protected plots were sprayed with acaricides, buprofezin, fenazaquin and propargite at 10-15 days interval for complete protection against mites. Marketable fruit yield data from different pickings were pooled and analyzed for estimation of loss in the yield of tomato fruits due to spider mite infestation. The loss in yield of tomato due to spider mite, Tetranychus urticae was estimated to be 29.95%. The mean loss in tomato fruit yield from the last three trials (30.7%, 13.3% & 30%) was found to be 24.7%.
- Monitoring the incidence of spider mites Oligonychus indicus, Schizotetranychus krungthepensis and eriophyid mite Abacarus sacchari on sugarcane in Mandya district: Survey was carried out in four villages of Mandya district during June, 2020 to assess the incidence of spider mites Oligonychus indicus, Schizotetranychus krungthepensis and eriophyid mite Abacarus sacchari on 3-6 months old sugarcane crop. Oligonychus indicus infestation on tillers (% infestation) and mite population (0.4 cm2leaf area) were recorded, which ranged from 1 to 4% and 0 to 26.52 mites, respectively. The

ಬಾಧೆಯು ದೊಡ್ಡರಸಿನಕೆರೆಯ ತಾಕಿನಲ್ಲಿ ಮಾತ್ರ ಕಂಡು ಬಂದಿದ್ದು, ಇದು ಶೇ. 100ರಷ್ಟು ಕಬ್ಬಿನ ಗುಣಿಗಳಲ್ಲಿ ಹಾಗೂ ಶೇ. 80ರಷ್ಟು ಕಬ್ಬಿನ ಕವಚಗಳಲ್ಲಿ ಕಂಡುಬಂದಿದೆ. ಅಂತೆಯೇ ವಿ.ಸಿ.ಎಫ್. 0517 ತಳಿಯ ಕಬ್ಬು ಬೆಳೆಯ ಮೇಲೆ 1.2 ರಿಂದ 7.3 ಇರಿಯೋಫಿಡ್ ನುಸಿಗಳು ಪ್ರತಿ 0.4 ಚದರ ಮಿ.ಮೀ. ಪ್ರದೇಶದಲ್ಲಿ ಇರುವುದು ಕಂಡುಬಂದಿತು.

- ಹಿಪ್ಪು ನೇರಳೆ ಬೆಳೆಯ ಮೇಲೆ ಹಳದಿ ನುಸಿಯಿಂದಾಗುವ ಹಾನಿಯ ಬಗ್ಗೆ ಅಧ್ಯಯನ: ಜಿಕೆವಿಕೆ ರೇಷ್ಮೆಕೃಷಿ ವಿಭಾಗದಲ್ಲಿ ಬೆಳೆಸಲಾಗಿರುವ 20 ಹಿಪ್ಪುನೇರಳೆ ತಳಿಗಳ ಮೇಲೆ ಹಳದಿ ನುಸಿಯ ಬಾಧೆಯ ಪ್ರಮಾಣವನ್ನು ಡಿಸೆಂಬರ್ 2019 ರಿಂದ ಜನವರಿ 2021ರ ವರೆಗೆ ಪ್ರತಿ ತಿಂಗಳಿಗೊಮ್ಮೆ ಸಂಗ್ರಹಿಸಲಾಯಿತು. ಎಲ್ಲಾ ತಳಿಗಳ ಮೇಲೆ ಹಾಗೂ ವರ್ಷದ ಎಲ್ಲಾ ತಿಂಗಳು ಗಳಲ್ಲಿಯೂ ನುಸಿ ಬಾಧೆ ಕಂಡುಬಂದಿತು. ಹಿಪ್ಪುನೇರಳೆ ಎಲೆಯ ಪ್ರತಿ ಚದರ ಸೆ.ಮೀ. ನಲ್ಲಿ ಸರಾಸರಿ 28 ರಿಂದ 205 ನುಸಿಗಳಿರುವುದು ಕಂಡುಬಂದಿದ್ದು, ಹೆಚ್ಚಿನ ಸಂಖ್ಯೆಯ ನುಸಿಗಳು ಅಕ್ಟೋಬರ್ ತಿಂಗಳಿನಲ್ಲಿ (153–205) ಕಂಡುಬಂದಿದ್ದು ತಿಳಿಯಿತು.

- ಕರ್ನಾಟಕ ಹಾಗೂ ಇತರೆ ರಾಜ್ಯಗಳಲ್ಲಿ ಸಸ್ಯಧಾರಿತ ನುಸಿಗಳ ಅಧ್ಯಯನ ಹಾಗೂ ಡಿ.ಎನ್.ಎ. ಆಧಾರಿತ ನುಸಿಗಳ ಗುರುತಿಸುವಿಕೆ: 2020–21 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ 32 ತಾಲ್ಲೂಕುಗಳನ್ನೊಳಗೊಂಡ 77 ಸ್ಥಳಗಳು ಹಾಗೂ ಇತರೆ 3 ರಾಜ್ಯಗಳ 3 ಸ್ಥಳಗಳಿಂದ ನುಸಿಬಾಧಿತ ಸಸ್ಯಗಳ ಮಾದರಿಗಳನ್ನು ಸಂಗ್ರಹಿಸಿ ನುಸಿಗಳ ಜೀವವೈವಿಧ್ಯತೆಯನ್ನು ವಿಶ್ಲೇಷಣೆ ಮಾಡಲಾಗಿ, 23 ನುಸಿ ಕುಟುಂಬಗಳ 70 ನುಸಿ ಪ್ರಭೇದಗಳನ್ನು ಗುರುತಿಸಲಾಯಿತು. ಇವುಗಳಲ್ಲಿ ಟಟ್ರಾನಿಕಿಡೆ ಹಾಗೂ ಫೈಟೊಸಿಡೆ ನುಸಿ ಕುಟುಂಬಗಳ ನುಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದಿದ್ದು ಕ್ರಮವಾಗಿ 31 ಹಾಗೂ 14 ನುಸಿ ಪ್ರಭೇಧಗಳು ದಾಖಲಾಗಿವೆ.

3.7.4 ಒಳನಾಡು ಮೀನುಗಾರಿಕೆ

- ಒಟ್ಟಾರೆ ಹತ್ತು ಕಾರ್ಯನಿರ್ವಹಿಸುವ ಅಕ್ವಾಫೋನಿಕ್ಸ್ ವಿವಿಧ ಮಾದರಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಅವುಗಳೆಂದರೆ ಕೃಷಿ ಹೊಂಡ ಆಧಾರಿತ ಅಕ್ವಾಫೋನಿಕ್ಸ್ (3 ಸಂಖ್ಯೆ), ಲಂಬ ಜೋಡಣೆಯ ಅಕ್ವಾಫೋನಿಕ್ಸ್, ಸಿಮೆಂಟ್ ಕಾಂಕ್ರೀಟ್ ತೊಟ್ಟಿಗಳಲ್ಲಿ ವಿವಿಧ ಬೆಳೆ ಹಾಸಿಗೆಗಳುಳ್ಳ ಅಕ್ವಾಫೋನಿಕ್ಸ್, ಎಫ್.ಆರ್.ಪಿ. ತೊಟ್ಟಿಗಳಲ್ಲಿ ತೇಲುವ ತೆಪ್ಪಗಳ ಅಕ್ವಾಫೋನಿಕ್ಸ್, ಅಡ್ಡ ಗೆರೆಯಾಕೃತಿಯ ಅಕ್ವಾಫೋನಿಕ್ಸ್ (2 ಸಂಖ್ಯೆ), ಸೌರಶಕ್ತಿಯುತ ಮೇಲ್ಛಾವಣಿ ಅಕ್ವಾಫೋನಿಕ್ಸ್ (2 ಸಂಖ್ಯೆ: ಐ.ಬಿ.ಸಿ= ಇಂಟರ್‌ಮೀಡಿಯೇಟ್ ಬಲ್ಕ್ ಕಂಟೈನರ್ ಆಧಾರಿತ ಅಕ್ವಾಫೋನಿಕ್ಸ್ ಮತ್ತು ಪ್ಲಾಸ್ಟಿಕ್ ಸ್ನಾನದ ತೊಟ್ಟಿ ಆಧಾರಿತ), ಸೌರಶಕ್ತಿಯುತ ಮೈಕ್ರೋಗ್ರೀನ್ ಉತ್ಪಾದಿತ ಅಕ್ವಾಫೋನಿಕ್ಸ್, ಹಸಿರು ಮನೆಯಲ್ಲಿ ವೃತ್ತಿಪರ ಅಕ್ವಾಫೋನಿಕ್ಸ್ ಮತ್ತು ಪ್ರದರ್ಶನದ ಮಾದರಿ ಅಕ್ವಾಫೋನಿಕ್ಸ್ ವ್ಯವಸ್ಥೆಗಳಾಗಿವೆ.

infestation of Schizotetranychus krungthepensis was found in one location, Doddarasinakere recording 100 percent clump infestation and 80 per cent cane infestation. The eriophyid mite population on sugarcane variety VCF 0517 ranged from 1.2 to 7.3 mites/0.4 cm2 leaf area.

- Bio-ecology of yellow mite Polyphagotarsonemus latus on mulberry: Observations recorded on the incidence of yellow mite Polyphagotarsonemus latus on 20 cultivated varieties of mulberry maintained in the experimental fields of Department of Sericulture, at GKVK, Bengaluru from December 2019 to January 2021. The mite incidence was found on all the varieties and the incidence was noticed throughout the year. The number of mites recorded per sq cm leaf area ranged from 28 to 205 and the peak population of mites was seen during October month 153-205 mites/cm2.

- Study of plant associated mite fauna in Karnataka and other states: Regular survey was conducted for plant associated mites in Karnataka and other states during 2020-21. In Karnataka plant samples were collected from 77 locations spread across 32 taluks & 19 districts and also mite specimens/mite infested plant samples were obtained from 3 locations covering 3 other Indian states. The data revealed 70 mite species from 23 families associated with 83 host plant species, of which mite families Tetranychidae and Phytoseiidae were dominant with 31 and 14 species, respectively.

3.7.4 Inland Fisheries Unit

- In total, ten working models of aquaponics systems have been developed: Farmpond based aquaponics (3 No.s: Vertical aquaponics, Aquaponics in RCC cisterns with growbed media, Aquaponics in FRP troughs with floating rafts), Horizontal aquaponics (2 No.s), Solar-powered rooftop aquaponics (2 No.s: Intermediate Bulk Container-based aquaponics and Bathtub-based), Solar-powered microgreens aquaponics, Vocational aquaponics in polyhouse and Exhibition model aquaponics.

- ಸೌರಶಕ್ತಿಚಾಲಿತ ಮೇಲ್ಛಾವಣಿ ಅಕ್ವಾಫೋನಿಕ್ಸ್ ಆಹಾರ ಉತ್ಪಾದನಾ ವ್ಯವಸ್ಥೆ ಮಾದರಿಗೆ ಹಕ್ಕು ಸ್ವಾಮ್ಯತೆ (ಪೇಟೆಂಟ್) ಪಡೆಯಲು ಅರ್ಜಿಸಂಖ್ಯೆ: 202141011449 ಯನ್ನು ಸಲ್ಲಿಸಲಾಗಿದ್ದು ಇಂಡಿಯನ್ ಪೇಟೆಂಟ್ ಜರ್ನಲ್ ಸಂಖ್ಯೆ: 13/2021, ಪುಟ ಸಂಖ್ಯೆ: 15393ನಲ್ಲಿ ದಿನಾಂಕ: 26.03.2021ರಂದು ಪ್ರಕಟಿಸಲಾಗಿದೆ.

- ಕರ್ನಾಟಕ ರಾಜ್ಯದ ಪ್ರಥಮ ಹಾಗೂ ಏಕೈಕ – ಜೆನೆಟಿಕಲಿ ಇಂಪ್ರೂವ್ಡ್ ಫಾರ್ಮ್‌ಡ್ ತಿಲಾಪಿಯಾ (ಗಿಫ್ಟ್) ಹ್ಯಾಚರಿಯಿಂದ 34,530 ಸರ್ವಪುರುಷ ತಿಲಾಪಿಯಾ ಮೀನುಮರಿಗಳನ್ನು ರೈತರಿಗೆ ಮಾರಾಟ ಮಾಡಿದ್ದು ಉಳಿದ ಮೀನುಮರಿಗಳನ್ನು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಅಕ್ವಾಫೋನಿಕ್ಸ್ ಪ್ರಾಯೋಜನೆಯ ಪ್ರಾಯೋಗಗಳಿಗೆ ಬಳಸಲಾಗಿದೆ.

3.7.5 ಗೃಹ ವಿಜ್ಞಾನ (ಆಹಾರ ಮತ್ತು ಪೋಷಣೆ)

- ಈ ಅಧ್ಯಯನದಿಂದ ತಿಳಿದುಬಂದಿರುವುದೇನೆಂದರೆ, ಆಹಾರ ವೈವಿಧ್ಯತೆಯ ಅಂಶವು ನಗರ ಪ್ರದೇಶಗಳಲ್ಲಿ ಹೆಚ್ಚಾಗಿದ್ದು (39.4%), ತದನಂತರ ಗ್ರಾಮೀಣ ಹಾಗೂ ಅರೆನಗರಗಳಲ್ಲಿ ಕ್ರಮವಾಗಿ 38.6 ಮತ್ತು 37.5% ರಷ್ಟಿದೆ. ಇದರಿಂದ ತಿಳಿದುಬಂದುದೇನೆಂದರೆ, ಗರಿಷ್ಠ ವೈವಿಧ್ಯ ಆಹಾರ ಗುಂಪುಗಳನ್ನು ನಗರ ಪ್ರದೇಶಗಳಲ್ಲಿ ಹಾಗೂ ಕನಿಷ್ಠ ವೈವಿದ ಆಹಾರ ಗುಂಪುಗಳನ್ನು ಅರೆನಗರಗಳಲ್ಲಿ ಪ್ರತಿದಿನ ಬಳಸಲಾಗುತ್ತಿದೆ. ಹೆಚ್ಚಿನ ಶಕ್ತಿಯುತ ಹಾಗೂ ಸಂಸ್ಕರಿಸಿದ ಆಹಾರಗಳ ಸೇವನೆಯು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಆಹಾರ ಪರಿವರ್ತನೆಯ ಸೂಚಕಗಳಾಗಿವೆ. ಇದರಿಂದಾಗಿ, ಕಡಿಮೆ ತೂಕವುಳ್ಳವರಿಗಿಂತ ಬೊಜ್ಜು ಹಾಗೂ ಹೆಚ್ಚಿನ ದೇಹ ತೂಕವುಳ್ಳವರು ಹೆಚ್ಚಾಗಿರುವುದು ಕಂಡುಬಂದಿದೆ. ನಗರ ಹಾಗೂ ಗ್ರಾಮೀಣ ಪ್ರದೇಶದ ಮನೆಗಳಲ್ಲಿ ಶೇ.25ರಷ್ಟು ಮಧುಮೇಹಿಗಳು ಇರುವುದು ಕಂಡುಬಂದಿದೆ. ಗ್ರಾಮೀಣ ಮತ್ತು ಅರೆನಗರಗಳಲ್ಲಿ ಮಹಿಳೆಯರಲ್ಲಿ ಕಡಿಮೆ ಬೊಜ್ಜುಳ್ಳವರು (13.5%) ಮತ್ತು ಬೊಜ್ಜುಳ್ಳವರು (34.87%) ಪುರುಷರಿಗೆ ಹೋಲಿಸಿದರೆ ಹೆಚ್ಚಾಗಿ ಕಂಡುಬಂದಿದ್ದಾರೆ. ಈ ಪೋಷಣೆ ಮತ್ತು ಆರೋಗ್ಯ ಸ್ಥಿತಿಗಳು ಹಲವು ರೀತಿಯ ಸಾಮಾಜಿಕ–ಸಂಸ್ಕೃತಿಕ ರೂಢಿಗಳಿಂದ ಮತ್ತು ಹೆಚ್ಚುತ್ತಿರುವ ನಗರೀಕರಣದಿಂದ ಪ್ರಭಾವಿತವಾಗಿರುತ್ತವೆ.

ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿ ವಿಸ್ತರಣೆ ಸೇವೆಯಲ್ಲಿ ಡಿಪ್ಲೊಮಾ ಕಾರ್ಯಕ್ರಮದ (ದೇಸಿ) ನೋಡಲ್ ತರಬೇತಿ ಕೇಂದ್ರವಾಗಿ ಸಂಸ್ಥೆಯು ಪ್ರಸಕ್ತ ಸಾಲಿನಲ್ಲಿ 40 ಅಭ್ಯರ್ಥಿಗಳನ್ನು ಒಳಗೊಂಡ ಒಂದು ತಂಡವನ್ನು ಆಯೋಜಿಸಿದ್ದು, 30 ತರಗತಿಗಳು, 03 ಕ್ಷೇತ್ರ ಭೇಟಿ ಹಾಗೂ 03 ಕ್ವಿಜ್ ಮತ್ತು 01 ಮಧ್ಯಂತರ ಪರೀಕ್ಷೆಗಳನ್ನು ಆಯೋಜಿಸಲಾಗಿದೆ.

4.4.5 ಕೃಷಿ ಮಾಹಿತಿ ಘಟಕ

ಕೃಷಿ ಮಾಹಿತಿ ಘಟಕದ ಉದ್ದೇಶಗಳು: ಸಮೂಹ ಮಾಧ್ಯಮಗಳೊಂದಿಗೆ ಸಂಪರ್ಕ ಮತ್ತು ಸುಧಾರಿತ ಬೇಸಾಯ ಪದ್ಧತಿಗಳು / ಆಧುನಿಕ ನಿರ್ವಹಣಾ ಪದ್ಧತಿಗಳು, ಪುಸ್ತಕಗಳ ಪ್ರಕಟಣೆ, ಕೃಷಿ ತಾಂತ್ರಿಕತೆಗಳ ಪ್ರಕಟಣೆ, ಕೃಷಿಮೇಳ ಹಾಗೂ ಕೃಷಿ ವಸ್ತು ಪ್ರದರ್ಶನಗಳ ಆಯೋಜನೆ / ಭಾಗವಹಿಸುವಿಕೆ ಮತ್ತು ಶ್ರವಣ–ದೃಶ್ಯ ಸಾಧನಗಳ ಅಭಿವೃದ್ಧಿ ಪಡಿಸುವುದು. ಪ್ರಸ್ತುತ ವರ್ಷದಲ್ಲಿ ಘಟಕವು ಈ ಮುಂದಿನ ಚಟುವಟಿಕೆಗಳನ್ನು ಕೈಗೊಂಡಿದೆ.

ಅ) **ಪತ್ರಿಕಾ ಪ್ರಕಟಣೆ :** ಘಟಕವು ಸಮೂಹ ಮಾಧ್ಯಮಗಳಿಗೆ 56 ಪತ್ರಿಕಾ ಪ್ರಕಟಣೆಗಳನ್ನು ಬಿಡುಗಡೆ ಮಾಡಿದೆ. ಸ್ನಾತಕ, ಸ್ನಾತಕೋತ್ತರ ಹಾಗೂ ಡಿಪ್ಲೊಮಾ ಕೋರ್ಸ್‌ಗಳ ಪ್ರಕಟಣೆಗಳು ಮತ್ತು ಪ್ರವೇಶ, ಘಟಿಕೋತ್ಸವ, ಸಂಸ್ಥಾಪನಾ ದಿನ, ಕೃಷಿಮೇಳ, ವಿಚಾರ ಸಂಕಿರಣ / ಕಾರ್ಯಗಾರ / ಸಮಾವೇಶ, ಆಚರಣೆಗಳು, ಪ್ರಶಸ್ತಿಗಳು ಮತ್ತು ವಿಶ್ವವಿದ್ಯಾನಿಲಯದ ಸಾಧನೆಗಳು.

ಆ) **ಸಮೂಹ ಮಾಧ್ಯಮ ಭೇಟಿ ಮತ್ತು ಮಾಧ್ಯಮ ಪ್ರಸಾರ:** ಘಟಕವು 16 ಬಾರಿ ಸಮೂಹ ಮಾಧ್ಯಗಳ ಕಛೇರಿಗೆ ಭೇಟಿ ನೀಡಿದೆ ಮತ್ತು 383 ಸಲ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆಗಳು ಪ್ರಕಟಗೊಂಡಿವೆ / ಬಿತ್ತರಗೊಂಡಿವೆ.

ಇ) **ಪತ್ರಿಕಾ ಗೋಷ್ಠಿ:** ವಿಶ್ವವಿದ್ಯಾನಿಲಯದ ಪ್ರಮುಖ ಕಾರ್ಯಕ್ರಮಗಳು / ಚಟುವಟಿಕೆಗಳನ್ನು ಆಯೋಜಿಸುವ ಮೊದಲು ಅವುಗಳ ಗುರಿ, ಉದ್ದೇಶ ಮತ್ತು ವಿಶ್ವವಿದ್ಯಾನಿಲಯದ ಸಾಧನೆಗಳನ್ನು ಸಾರ್ವಜನಿಕರ ಮಾಹಿತಿಗಾಗಿ ಪತ್ರಿಕಾ ಗೋಷ್ಠಿಗಳನ್ನು ಆಯೋಜಿಸುವುದು ಕೃಷಿ ವಿಶ್ವವಿದ್ಯಾನಿಲಯದ ಸಂಪ್ರದಾಯವಾಗಿದೆ. ಒಟ್ಟು 02 ಪತ್ರಿಕಾ ಗೋಷ್ಠಿಗಳನ್ನು ಘಟಿಕೋತ್ಸವ, ಕೃಷಿ ಮೇಳ ಮತ್ತು ವಿಶ್ವವಿದ್ಯಾನಿಲಯದ ಪ್ರಮುಖ ಕಾರ್ಯಚಟುವಟಿಕೆಗಳನ್ನು ಕುರಿತು ಆಯೋಜಿಸಲಾಗಿತ್ತು. ಕುಲಪತಿಗಳ ಅಧ್ಯಕ್ಷತೆಯಲ್ಲಿ ಮತ್ತು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಉಪಸ್ಥಿತಿಯಲ್ಲಿ ಪತ್ರಿಕಾ ಗೋಷ್ಠಿಗಳನ್ನು ಆಯೋಜಿಸಲಾಗಿತ್ತು.

ಈ) **ಜನಪ್ರಿಯ ಲೇಖನಗಳು / ಯಶೋಗಾಥೆಗಳು:** ಘಟಕವು ಪ್ರಸ್ತುತ ವರ್ಷ, ವಿಶ್ವವಿದ್ಯಾನಿಲಯದ ತಂತ್ರಜ್ಞಾನ ಮತ್ತು ಪ್ರಶಸ್ತಿ ವಿಜೇತ ಮತ್ತು ಪ್ರಗತಿಪರ ರೈತ / ರೈತ ಮಹಿಳೆಯರ ಕುರಿತು 11 ಜನಪ್ರಿಯ ಲೇಖನಗಳು / ಯಶೋಗಾಥೆಗಳನ್ನು ಪ್ರಮುಖ ದಿನ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳಲ್ಲಿ ಪ್ರಕಟಿಸಲಾಗಿದೆ.

ಉ) **ವಿದ್ಯುನ್ಮಾನ ಸಂಯೋಜಿತ ಕಾರ್ಯಕ್ರಮಗಳು:** ಘಟಕವು ವಿಶ್ವವಿದ್ಯಾನಿಲಯದ ತಂತ್ರಜ್ಞಾನ ಮತ್ತು ಕಾರ್ಯಚಟುವಟಿಕೆ

As a nodal training centre, one batch of DAESI (Diploma in Agriculture Extension Service for Input Dealers) sponsored by MANAGE, Hyderabad was started and 30 classes, three Field visits, three Quiz and one Midterm exam were conducted.

4.4.5 Farm Information Unit (FIU)

The objectives of the Farm Information Unit (FIU) are to co-ordinate with mass media, publication of package of practices / management practices, publication of technical literature, organizing / participating in agricultural exhibitions & Krishimelas and developing audio-visual aids. The unit carried out the following activities during 2020-21.

a) **Press releases:** The unit released 56 press releases to the mass media. The releases were on U.G., P.G and Diploma courses notifications & admissions, convocation, foundation day, krishimela, seminars / workshops / symposium, celebration of events, awards and achievements of the University.

b) **Press visits and media coverage:** The unit made 16 press visits to different print and electronic media. As many as 383 press coverage's of the University activities were covered through different media.

c) **Press Conference:** It is a customary of the University to organize Press Conference by the Vice-Chancellor and Officers of the University prior to organizing important functions / activities to brief the press about the aims and objectives and also to share the achievements of the University. Two (02) press conferences were addressed by the Vice-Chancellor and Officers of the University in view of Convocation, Krishimela and other important activities of the University.

d) **Popular / success stories:** During the year, the unit published 11 Popular Articles / Success Stories on the technologies of the University and Success Stories of the Award Winning and Progressive Farmers / Farm Women in leading newspapers and magazines.

e) **TV / Radio programmes Co-ordinated:** The unit co-ordinated with Prasarabharathi

ಗಳನ್ನು ಕುರಿತು 195 ಕಾರ್ಯಕ್ರಮಗಳನ್ನು ಪ್ರಸಾರಭಾರತಿ (ದೂರದರ್ಶನ ಮತ್ತು ಆಕಾಶವಾಣಿ) ಮತ್ತು ಇತರೆ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಪ್ರಸಾರ ಮಾಡಲು ಸಂಯೋಜನೆ ಕೈಗೊಂಡಿತ್ತು.

ಊ) **ವಿಶೇಷ ಲೇಖನಗಳು / ಕಾರ್ಯಕ್ರಮಗಳು :** ಘಟಕವು ವಿವಿಧ ಮಾಧ್ಯಮಗಳು ವಿಶ್ವವಿದ್ಯಾನಿಲಯದ ತಂತ್ರಜ್ಞಾನಗಳನ್ನು ಕುರಿತು 55 ವಿಶೇಷ ಲೇಖನಗಳು / ಕಾರ್ಯಕ್ರಮಗಳನ್ನು ಪ್ರಕಟಿಸಲು / ಪ್ರಸಾರ ಮಾಡಲು ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳ ಜೊತೆ ಸಂಯೋಜನೆ ಕೈಗೊಂಡಿತ್ತು.

ಋ) **ಕೃಷಿ ಮೇಳ / ಕೃಷಿ ವಸ್ತುಪ್ರದರ್ಶನ:** ಘಟಕವು ವಿಶ್ವವಿದ್ಯಾಲಯದ ತಂತ್ರಜ್ಞಾನವನ್ನು ಪ್ರಸರಿಸಲು ರಾಜ್ಯ ಮತ್ತು ರಾಷ್ಟ್ರಮಟ್ಟದ 03 ಕೃಷಿ ಮೇಳಗಳು / ಕೃಷಿ ವಸ್ತು ಪ್ರದರ್ಶನಗಳನ್ನು ಆಯೋಜಿಸಿತ್ತು / ಭಾಗವಹಿಸಿತ್ತು. ಒಟ್ಟು 06 ಶ್ರವಣ–ದೃಶ್ಯ ಸಾಧನಗಳನ್ನು ತಯಾರಿಸಲಾಗಿದ್ದು, ಕೃಷಿ ವಿಶ್ವವಿದ್ಯಾನಿಲಯದ ತಂತ್ರಜ್ಞಾನಗಳು ಮತ್ತು ಕಾರ್ಯಚಟುವಟಿಕೆಗಳ ಕುರಿತ ಶ್ರವಣ–ದೃಶ್ಯ ಸಾಧನ ಗಳನ್ನು ಸಮರ್ಪಕವಾಗಿ ಪ್ರದರ್ಶಿಸಲಾಯಿತು.

ಎ) **ಕೃಷಿ ತಾಂತ್ರಿಕತೆಗಳ ಪ್ರಕಟಣೆ :** ಘಟಕವು ಕೃಷಿ ಬೆಳೆಗಳ ಸುಧಾರಿತ ಬೇಸಾಯ ಪದ್ಧತಿಗಳು (3ನೇ ಆವೃತ್ತಿ) ಮತ್ತು ರೇಷ್ಮೆ ಕೃಷಿ ಆಧುನಿಕ ಬೇಸಾಯ ಪದ್ಧತಿಗಳು ಪುಸ್ತಕಗಳನ್ನು ಪ್ರಕಟಿಸಿರುತ್ತದೆ.

4.4.6 ದೂರ ಶಿಕ್ಷಣ ಘಟಕ

ದೂರ ಶಿಕ್ಷಣ ಘಟಕವು ರೈತ ಹಾಗೂ ಯುವರೈತರ ಪ್ರಯೋಜನಕ್ಕಾಗಿ ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸುತ್ತಿದೆ. 1) ಕೃಷಿಯಲ್ಲಿ ಸ್ನಾತಕೋತ್ತರ ಡಿಪ್ಲೊಮಾ 2) ಕೃಷಿಯಲ್ಲಿ ಒಂದು ವರ್ಷದ ಡಿಪ್ಲೊಮಾ 3) ಸಮಗ್ರ ಕೃಷಿ ಪದ್ಧತಿ 4) ಸಾವಯವ ಕೃಷಿ ಮತ್ತು 5) ಜೇನುಸಾಕಣೆ. ಇದರೊಂದಿಗೆ, MANAGE ಪ್ರಾಯೋಜಿತ ಕೃಷಿ ವಿಸ್ತರಣಾ ನಿರ್ವಹಣೆಯಲ್ಲಿ ಒಂದು ವರ್ಷದ ಸ್ನಾತಕೋತ್ತರ ಡಿಪ್ಲೊಮಾದ ನೋಡಲ್ ಕೇಂದ್ರವಾಗಿರುತ್ತದೆ. ವಿವರಗಳನ್ನು ಅನುಬಂಧ 3.6 ರಲ್ಲಿ ನೀಡಲಾಗಿದೆ.

4.4.7 ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ

ಕೇಂದ್ರದ ಉದ್ದೇಶಗಳೆಂದರೆ, 1) ಸಾಂಸ್ಥಿಕ ಮಟ್ಟದಲ್ಲಿ ಏಕಗವಾಕ್ಷಿ ವ್ಯವಸ್ಥೆಯಡಿ ಕಾರ್ಯನಿರತವಾಗಿ ಕೃಷಿ ಮಾಹಿತಿ ಹಾಗೂ ಉತ್ಪನ್ನ ಗಳನ್ನು ರೈತರಿಗೆ ಒದಗಿಸುವುದು, 2) ವಿವಿಧ ವಿಷಯ ತಜ್ಞರುಗಳಿಂದ ರೈತರ ಸಮಸ್ಯೆಗಳಿಗೆ ತಾಂತ್ರಿಕ ಸಲಹೆಗಳನ್ನು ನೀಡುವುದು, 3)ಸುಧಾರಿತ ಕೃಷಿ ತಂತ್ರಜ್ಞಾನಗಳನ್ನು ಪ್ರಕಟಣೆಗಳು ಮತ್ತು ಮಾಧ್ಯಮಗಳ ಮೂಲಕ ರೈತರಿಗೆ ತಲುಪಿಸುವುದ,ಎ 4) ಬಳಕೆದಾರರ ಅನಿಸಿಕೆ ಮತ್ತು ಅನುಭವಗಳನ್ನು ದಾಖಲಿಸಿ ಕೃಷಿ ವಿಶ್ವವಿದ್ಯಾನಿಲಯಕ್ಕೆ ಒದಗಿಸುವ ವ್ಯವಸ್ಥೆಯನ್ನು ಕಲ್ಪಿಸುವುದು, 5) ಮಾಹಿತಿ ಸಂವಹನಾ ತಂತ್ರಜ್ಞಾನಗಳ ಮೂಲಕ ತಾಂತ್ರಿಕ ಮಾಹಿತಿಯನ್ನು ಒದಗಿಸುವುದು.

(Doordarshan & Akashavani) / Other Electronic Media in telecasting / broad casting 195 programmes on University activities and technologies.

f) **Special / Feature article:** The Unit co-ordinated with electronic and print media for publication / telecasting 55 special articles / features on agricultural technologies.

g) **Krishimela / Agricultural Exhibitions:** The Unit arranged / participated in three (03) Krishimelas / Agricultural Exhibitions at regional, state and national level to showcase the technologies of the University. In order to exhibit the technologies effectively during the year Six (06) exhibits were prepared and the exhibits related to agriculture and allied activities on the important technologies released by UAS-B were displayed in the exhibitions.

h) **Publication of Technical Literature:** The unit has published Package of Practices of Agriculture Crops (3rd edition) and Improved Sericutlure Package of Practices.

4.4.6 Distance Education Unit (DEU)

The unit is offering following Diploma and certificate programmes for the benefit of farmers and farm youth; 1) Post Graduate Diploma in Agriculture (PGDA). 2) One Year Diploma in Agriculture. 3) Integrated Farming System. 4) Organic Farming. 5) Jenusakane (Apiculture). In addition, DEU is a Nodal Center for MANAGE sponsored one year Post Graduate Diploma in Agricultural Extension Management (PGDAEM). The details are provided in Annexure 3.6.

4.4.7 Agricultural Technology Information Centre (ATIC)

The main objectives of the Centre are 1) To serve as single window delivery system for agricultural inputs and other products at institutional level 2)To render farm advisory services to solve problems through multidisciplinary approach from different Subject Matter Specialists 3) To provide agriculture improved technologies through publications and other medias to the farmers 4) To establish a mechanism to get the feedback from the users to the University 5) To

ಈ ಉದ್ದೇಶಗಳೊಂದಿಗೆ ಕೆಳಗಿನ ಚಟುವಟಿಕೆಗಳನ್ನು ಆಯೋಜಿಸಲಾಗಿದೆ.

ಸಲಹಾ ಸೇವೆಗಳು : ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರವು 18 ಕ್ಷೇತ್ರ ಭೇಟಿ, 2185 ದೂರವಾಣಿ ಕರೆ, 2281 ಸಮಾಲೋಚನೆಗಳು, ಕೇಂದ್ರಕ್ಕೆ 26289 ರೈತರ ಹಾಗೂ ವಿಸ್ತರಣಾ ಕಾರ್ಯಕರ್ತರ ಭೇಟಿ ಹಾಗೂ 2514 ವಾಟ್ಸಪ್ ಸಲಹೆಗಳು ಒಳಗೊಂಡಂತೆ ಒಟ್ಟು 33287 ರೈತರಿಗೆ ಸಲಹಾ ಸೇವೆಗಳನ್ನು ಒದಗಿಸಲಾಗಿದೆ.

ಕೃಷಿ ಪ್ರಕಟಣೆಗಳು, ಬೀಜ, ಸಸಿಗಳು ಇತ್ಯಾದಿ ಉತ್ಪನ್ನಗಳ ಮಾರಾಟ: ಕೇಂದ್ರವು ಬೀಜ, ಸಸಿಗಳು, ಕೃಷಿ ಪ್ರಕಟಣೆಗಳು ಇತ್ಯಾದಿಗಳ ಮಾರಾಟದಿಂದ ರೂ.1,09,57,415/– (ಒಂದು ಕೋಟಿ ಒಂಬತ್ತು ಲಕ್ಷ ಐವತ್ತೇಳು ಸಾವಿರದ ನಾಲ್ಕು ನೂರ ಹದಿನೈದು ರೂಪಾಯಿಗಳು ಮಾತ್ರ) ವಹಿವಾಟು ನಡೆಸಿದೆ. ಈ ಕೇಂದ್ರದ ಚಟುವಟಿಕೆ ಮತ್ತು ಮಾರಾಟ ವಿವರಗಳನ್ನು ಅನುಬಂಧ 3.7 ರಲ್ಲಿ ನೀಡಲಾಗಿದೆ.

ಇ–ಕೃಷಿ ಯುಎಎಸ್–ಬಿ ಪೋರ್ಟಲ್: ಕೃಷಿ ಪೋರ್ಟಲ್ ಕೃಷಿ, ತೋಟಗಾರಿಕೆ, ಪಶು ಸಂಗೋಪನೆ, ರೇಷ್ಮೆ ಕೃಷಿ ಹಾಗೂ ಮೀನು ಸಾಕಣೆಯ ಉತ್ಪಾದನಾ ತಾಂತ್ರಿಕತೆಗಳು ಮತ್ತು ಕೃಷಿಗೆ ಸಂಬಂಧಿಸಿದ ಇತರೆ ಪೂರಕ ತಾಂತ್ರಿಕತೆಗಳ ಬಗ್ಗೆ ತಾಂತ್ರಿಕ ಮಾಹಿತಿಯನ್ನು ಹೊಂದಿದೆ. ಇದುವರೆಗೂ 31,54,817 ಆಸಕ್ತರು ಕೃಷಿ ಪೋರ್ಟಲ್ ಅನ್ನು ವೀಕ್ಷಿಸಿರುತ್ತಾರೆ (30 ಮಾರ್ಚ್, 2021 ರವರೆಗೆ) ಮತ್ತು ಇ–ಕೃಷಿ ಯುಎಎಸ್–ಬಿ ಪೋರ್ಟಲ್‌ನಲ್ಲಿ ನೀಡಲಾಗಿರುವ ಮಾಹಿತಿಯನ್ನು ರೈತರು / ರೈತ ಮಹಿಳೆಯರು / ಯುವ ರೈತರು / ವಿಸ್ತರಣಾ ಕಾರ್ಯಕರ್ತರು ಮತ್ತು ಇತರೆ ಆಸಕ್ತಿಯುಳ್ಳವರು ವೀಕ್ಷಿಸಲು 'ಕಿಯೋಸ್ಕ್' ಸೌಲಭ್ಯವನ್ನು ಸಹ ಈ ಕೇಂದ್ರದಲ್ಲಿ ಒದಗಿಸಲಾಗಿದೆ.

ವೀಡಿಯೊ ಕಾನ್ಫರೆನ್ಸಿಂಗ್ ಸೌಲಭ್ಯ: 2020–21 ನೇ ಸಾಲಿನಲ್ಲಿ ವೀಡಿಯೊ ಕಾನ್ಫರೆನ್ಸಿಂಗ್ ಸೌಲಭ್ಯದ ಮೂಲಕ 4 ಸಭೆಗಳನ್ನು ಆಯೋಜಿಸಲಾಗಿದೆ. ಈ ಸೌಲಭ್ಯದಿಂದ ಸ್ಥಳದಲ್ಲೇ ತಾಂತ್ರಿಕ ಪರಿಹಾರಗಳನ್ನು ನೀಡಲು ಸುಗಮಗೊಳಿಸಲಾಗಿದೆ.

4.4.8 ಕೃಷಿ ವಿಜ್ಞಾನ ವಸ್ತುಸಂಗ್ರಹಾಲಯ

ಜಿ.ಕೆ.ವಿ.ಕೆ. ಕ್ಯಾಂಪಸ್‌ನ ಪ್ರವೇಶದ್ವಾರದಲ್ಲಿ ಸ್ಥಾಪಿಸಲಾದ ಕೃಷಿ ವಿಜ್ಞಾನಗಳ ವಸ್ತು ಸಂಗ್ರಹಾಲಯದಲ್ಲಿ ಕೃಷಿಗೆ ಸಂಬಂದಿಸಿದ ಇತಿಹಾಸ, ತಂತ್ರಜ್ಞಾನ, ನಾವಿನ್ಯತೆ, ಇತ್ಯಾದಿ ಮಾಹಿತಿಯನ್ನು ವಿಧ್ಯಾರ್ಥಿಗಳ, ರೈತರ ಹಾಗೂ ಸಾರ್ವಜನಿಕರ ಮಾಹಿತಿಗೆ ಮತ್ತು ಉಪಯೋಗಕ್ಕೆ ಅಚ್ಚುಕಟ್ಟಾಗಿ ಪ್ರದರ್ಶಿಸಲಾಗಿದೆ. ಪೋಸ್ಟರ್, ನಕ್ಷೆ, ಗ್ರಾಫಿಕ್ಸ್, ಛಾಯಾಚಿತ್ರ, ಮಾದರಿಗಳು ಮುಂತಾದ ಶ್ರವಣ ದೃಷ್ಟಿ ಮಾಧ್ಯಮದ ಮೂಲಕ ಕೃಷಿ ವಿಚಾರವನ್ನು ಪರಿಣಾಮಕಾರಿಯಾಗಿ ಸಂದರ್ಶಕರ ಮನಮುಟ್ಟಲು ಪ್ರಯತ್ನಿಸಲಾಗಿದೆ. ಸುಮಾರು 800 ಚದುರ ಮೀಟರ್‌ಗಳ ಪ್ರದೇಶದ ವಸ್ತು ಸಂಗ್ರಹಾಲಯ ಕಟ್ಟಡವನ್ನು ನಿರ್ಮಾಣ ಮಾಡಿ ಕೃಷಿ ಮಾಹಿತಿಯನ್ನು ಪ್ರದರ್ಶಿಸಲು ಕೃಷಿ ಇತಿಹಾಸ, ಕರ್ನಾಟಕದ ಕೃಷಿ, ಕೃಷಿ ವಿಶ್ವವಿದ್ಯಾನಿಲಯದ ಸ್ಥಾಪನೆ ಮತ್ತು ಬೆಳವಣಿಗೆ, ರೇಷ್ಮೆಕೃಷಿ, ಜೇನು ಸಾಕಾಣಿಕೆ, ಕೃಷಿ ಅರಣ್ಯ, ಹವಾಮಾನ ಬದಲಾವಣೆ ಹಾಗೂ ಕೃಷಿ ಯಾಂತ್ರಿಕರಣಗಳ ಸಂಬಂಧಿತ ವಿಷಯಗಳ ಬಗ್ಗೆ ಪ್ರದರ್ಶನವನ್ನು ಈಗಾಗಲೇ ಏರ್ಪಡಿಸಲಾಗಿದೆ. ಕಳೆದ ಸಾಲಿನಲ್ಲಿ ಪುನರ್‌ಬಳಕೆ ಇಂಧನ, ಧಾನ್ಯ ಶೇಖರಣೆ ಮತ್ತು ವಿಸ್ತರಣಾ

disseminate technical information through Information and communication tools. In order to accomplish the objectives, the following activities were taken up during the year.

Advisory Services: The ATIC rendered 33,287 farm advisories comprising of 18 field visits, 2185 telephone calls, 2281 consultations, 26289 visit of farmers and extension workers to the centre and 2514 whatsapp messages.

Marketing of different products / plants / literatures: The ATIC realized an amount of Rs. 1,09,57,415/- (Rupees one crore nine lakhs fifty seven thousand four hundred and fifteen only) by sale of products, plants, literature, seeds, etc., and the details are provided in Annexure 3.7

e-Krishi UASB portal : It contains technical information on production technologies of agricultural and horticultural crops, animal husbandry, sericulture, fisheries, etc. So far 31,54,817 visitors viewed the agri-portal (up to 31st March, 2021) and the unit provided KIOSK facility for the farmers / farm women / farm youth/ extension personnel and other stake holders to view the uploaded information in the UAS-B agri-portal.

Video Conference Facility: The unit organized four meetings through Video-Conferencing facility during the year 2020-21 that facilitated on spot technical solutions to the stakeholders.

4.4.8 Agricultural Sciences Museum (ASM)

Information about history, technologies, innovations and other information related to agriculture have been displayed systemically at Agricultural Sciences Museum for the benefit of student, farmers and general public. The museum has been established at the entrance of GKVK Campus. Posters, charts, photographs, graphics, modals, live specimens and other audio visual format have been developed and employed to depict the information convincingly to the visitors. Nearly 800 Sq.mts building has been constructed exclusively for the said purpose. Exhibits related to history of agriculture, Karnataka agriculture, genesis of growth of agricultural university, sericulture, apiculture, farm forestry, climate change and farm mechanization have been developed and displayed.

ತಂತ್ರಜ್ಞಾನದ ವಿಷಯಗಳಿಗೆ ಸಂಬಂಧಿಸಿದಂತೆ ಪ್ರದರ್ಶನದ ಕೆಲಸ ಕಾಮಗಾರಿಗಳನ್ನು ಮುಕ್ತಾಯಗೊಳಿಸಲಾಗಿದೆ. ಕೃಷಿಮಾರುಕಟ್ಟೆ, ಹೈನುಗಾರಿಕೆ, ಕೋಳಿಸಾಕಾಣಿಕೆ ಮತ್ತು ಮೀನು ಸಾಕಾಣಿಕೆ ವಿಷಯಗಳ ಬಗ್ಗೆ ಪ್ರದರ್ಶನ ಏರ್ಪಡಿಸಲು ನೀಲ ನಕ್ಷೆ ಸಿದ್ದವಾಗಿದ್ದು, ಅನುಷ್ಠಾನ ಗಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಕೋವಿಡ್–19 ಹಿನ್ನಲೆಯಲ್ಲಿ ಶಾಲಾ ಕಾಲೇಜುಗಳನ್ನು ಮುಚ್ಚಿದ್ದರಿಂದ 2020–21ರಲ್ಲಿ 1,800 ಜನ ವಸ್ತುಸಂಗ್ರಹಾಲಯಕ್ಕೆ ಭೇಟಿನೀಡಿದ್ದಾರೆ.

During the year display work with respect to bio-energy, grain storage and extension technologies have been completed. Blue print on topics related to agriculture marketing, animal husbandry, poultry and fisheries have been developed for implementation. Due to Covid-19 and closer of schools & collages only 1,800 people visited the museum during the year 2020-21.

4.4.9 ವಿಸ್ತರಣಾ ಶಿಕ್ಷಣ ಘಟಕ

ವಿಸ್ತರಣಾ ಶಿಕ್ಷಣ ಘಟಕಗಳು ಮೈಸೂರು ತಾಲೂಕಿನ ನಾಗನಹಳ್ಳಿ ಮತ್ತು ಕೋಲಾರದಲ್ಲಿ (ಸಿಬ್ಬಂದಿ ತರಬೇತಿ ಘಟಕದಡಿ) ಕಾರ್ಯನಿರ್ವಹಿಸುತ್ತಿದ್ದು, ಸಂಶೋಧನಾ ಫಲಿತಾಂಶಗಳ ಕಾರ್ಯಕ್ಷಮತೆಯ ಮೌಲ್ಯಮಾಪನ, ರುಜುವಾತಾದ ಫಲಿತಾಂಶಗಳ ಪ್ರಾತ್ಯಕ್ಷಿಕೆ, ತರಬೇತಿ ಕಾರ್ಯಕ್ರಮಗಳ ಆಯೋಜನೆ ಹಾಗೂ ಇತರ ಅಭಿವೃದ್ಧಿ ಇಲಾಖೆಗಳ, ಪರಿಕರ ಏಜೆನ್ಸಿಗಳ ಮತ್ತು ಸರಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ವಿಸ್ತರಣಾ ಚಟುವಟಿಕೆಗಳ ಆಯೋಜನೆಯ ಆಧ್ಯಾದೇಶವನ್ನಾಗಿಸಿಕೊಂಡಿದೆ. ಘಟಕವು ಪ್ರಸ್ತುತ ವರದಿಯ ವರ್ಷದಲ್ಲಿ ಈ ಮುಂದಿನ ಚಟುವಟಿಕೆಗಳನ್ನು ಕೈಗೊಂಡಿದೆ.

ಕ್ಷೇತ್ರ ಪ್ರಯೋಗಗಳು: ರೈತರ ಜಮೀನುಗಳಲ್ಲಿ ಸಂಶೋಧನೆಯ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಲು ಸಂಶೋಧನೆಯ ಅಂತಿಮ ಹಂತವಾಗಿ ವಿಸ್ತರಣಾ ಶಿಕ್ಷಣ ಘಟಕ ನಾಗನಹಳ್ಳಿ, ಮೈಸೂರು ಹಾಗೂ ಕೋಲಾರ ರವರ ವತಿಯಿಂದ 16 ಕ್ಷೇತ್ರ ಪ್ರಯೋಗಗಳನ್ನು 60 ರೈತರನ್ನೊಳಗೊಂಡಂತೆ (01 ಕ್ಷೇತ್ರ ಪ್ರಯೋಗ ಮುಂದುವರೆದಿದೆ) ವಿವರಗಳನ್ನು ಅನುಬಂಧ 3.8 ರಲ್ಲಿ ನೀಡಲಾಗಿದೆ.

ಮುಖ್ಯಾಂಶಗಳು

1. ಭತ್ತದ ತಳಿ ಕ್ಷೇತ್ರ ಪ್ರಯೋಗದಲ್ಲಿ ಕೆ.ಎಂ.ಪಿ–220 ತಳಿಯು ಹೋಲಿಕೆ ತಳಿಯಾದ ಜ್ಯೋತಿ ತಳಿಗಿಂತ ಶೇ. 21.05 ರಷ್ಟು ಹೆಚ್ಚಿನ ಕಾಳಿನ ಇಳುವರಿ ಹೊಂದಿರುತ್ತವೆ
2. ಭತ್ತದ ತಳಿ ಕ್ಷೇತ್ರ ಪ್ರಯೋಗದಲ್ಲಿ ಎಂ.ಎಸ್.ಎನ್–99 ತಳಿಯು ಹೋಲಿಕೆ ತಳಿ ರಕ್ಷಾ ತಳಿಗಿಂತ ಶೇ. 13.6 ರಷ್ಟು ಹೆಚ್ಚಿನ ಕಾಳಿನ ಇಳುವರಿ ಹೊಂದಿರುತ್ತವೆ
3. ನೇಪಿಯರ್ ಹುಲ್ಲಿನ ಬೆಳೆಯಲ್ಲಿ ಸಾರಜನಕ ನಿರ್ವಹಣೆ ಕ್ಷೇತ್ರ ಪ್ರಯೋಗದಲ್ಲಿ ಶೇ. 100 ರಷ್ಟು ಶಿಫಾರಸ್ಸು ಮಾಡಿದ ಸಾರಜನಕ ಬಳಸಿದ ನೇಪಿಯರ್ ಹುಲ್ಲಿನ ತಾಕಿಗಿಂತ (193ಟ/ಹೆ.) ಶೇ. 175 ರಷ್ಟು ಶಿಫಾರಸ್ಸು ಮಾಡಿದ ಸಾರಜನಕ ಬಳಸಿದ ನೇಪಿಯರ್ ಹುಲ್ಲಿನ ತಾಕಿನಲ್ಲಿ (272ಟ/ಹೆ.) ಶೇ. 40.93 ರಷ್ಟು ಹೆಚ್ಚಿನ ಮೇವಿನ ಇಳುವರಿ ದಾಖಲಾಗಿರುತ್ತದೆ
4. ಡ್ರಂ ಸೀಡರ್ ಭತ್ತ ಬೆಳೆಯ ಉದಯಪೂರ್ವ ಕಳೆನಾಶಕದ ಕ್ಷೇತ್ರ ಪ್ರಯೋಗದಲ್ಲಿ ಡ್ರಂಸೀಡರ್ ಭತ್ತದ ಬೆಳೆಯಲ್ಲಿ ಕೈಯಿಂದ ಕಳೆ ತೆಗೆಯುವುದಕ್ಕಿಂತ ಬಿತ್ತನೆ ಮಾಡಿದ 5 ದಿನದೊಳಗೆ ಉದಯ ಪೂರ್ವಕ ಕಳೆನಾಶಕವಾದ ಬೆನ್ಸಲ್ಫುರಾನ್ ಮೀಥೈಲ್ 0.6% ಜಿ @ 60 ಗ್ರಾಂ / ಎ.ಐ + ಪ್ರೆಟಿಲ್ಲಾಕ್ಲೋರ್ 6% @ 600 ಗ್ರಾಂ / ಎ.ಐ / ಹೆ. (10 ಕೆ.ಜಿ / ಹೆ.) ಬಳಕೆಯಿಂದ ಕಳೆಗಳ ಸಮರ್ಪಕ ನಿರ್ವಹಣೆಯಲ್ಲದೇ, ಶೇ. 7.4 ರಷ್ಟು ಹೆಚ್ಚಿನ ಕಾಳಿನ ಇಳುವರಿ ಬಂದಿರುತ್ತದೆ

4.4.9 Extension Education Units (EEUs)

The Extension Education Unit (EEU), Naganahalli, Mysuru and Kolar functioning in the staff training unit have the mandate to evaluate the performance of research findings, to demonstrate the proven research findings and to conduct training programmes and other extension educational activities in collaboration with developmental departments, input agencies and NGO's. The following activities were performed during the year under report.

Farm trials: The farm trials were conducted to evaluate the performance of research findings in the farmer's field as a tail end research. In total 16 farm trials (1 trail is continuing) were conducted by involving **60** farmers. The details are provided in annexure 3.8.

Highlights

1. KMP-220 paddy variety recorded higher grain yield of 59.80 q/ha over check variety of Jyothi (49.40 q/ha) and resulted in 21.05 per cent increase in grain yield
2. Paddy variety of MSN-99 resulted in13.60 per cent higher grain yield than check variety of Raksha
3. Application of 175 per cent recommended dose of nitrogen (RDN) resulted higher green fodder yield of Napier grass (272 t/ha) compared to 100 per cent recommended dose of nitrogen (193 t/ha) and resulted 40.93 per cent increase in grain yield
4. Application of Bensulfuron methyl 0.6 per cent G @ 60 G + Pretilachlor 6 per cent G @ 600 g/a.i/ha (10 kg/ha) 5 days after sowing in drum seeded rice resulted in 7.4 higher yield with better weed control compared to hand weeding at 25 and 45 days after sowing

5. ಬೀಜದ ದಂಟು ಕ್ಷೇತ್ರ ಪ್ರಯೋಗದಲ್ಲಿ ಕೆ.ಬಿ.ಜೆ.ಎ. 15 ತಳಿಯು (1635 ಕೆ.ಜಿ/ಹೆ.) ಹೋಲಿಕೆ ತಳಿಯಾದ ಕೆ.ಬಿ.ಜೆ.ಎ. 04 ತಳಿಗಿಂತ (1420 ಕೆ.ಜಿ./ಹೆ.), ಶೇ. 15.14 ರಷ್ಟು ಹೆಚ್ಚಿನ ಕಾಳಿನ ಇಳುವರಿ ಹೊಂದಿರುತ್ತದೆ

6. ಕಬ್ಬಿನ ಧ್ರವ ರೂಪದ ಜೈವಿಕ ಗೊಬ್ಬಗಳನ್ನು ನೀರಾವರಿ ಮೂಲಕ ಪೂರೈಸುವ ಕ್ಷೇತ್ರ ಪ್ರಯೋಗದಲ್ಲಿ ಶೇ. 75% ರಷ್ಟು ಶಿಫಾರಸ್ಸು ಮಾಡಿದ ಗೊಬ್ಬರ ಸಾ.ರಂ.ಪೊ + ಸೂಕ್ಷ್ಮಾಣು ಜೀವಿಗಳ ಸಮೂಹ (ಅಜಟೂಬ್ಯಾಕ್ಟರ್+ಅಜೋಸ್ಪೈರಿಲಂ+ಬ್ಯಾಸಿಲಸ್+ ಸೂಡೂಮೊನಾಸ್) ಉಪಚಾರವು ಶಿಫಾರಸ್ಸಿನಂತೆ 250 : 100 : 125 ಎನ್.ಪಿ.ಕೆ./ಹೆ ಸೂಕ್ಷ್ಮಾಣು ಜೀವಿಗಳ ಸಮೂಹ (ಅಜಟೂಬ್ಯಾಕ್ಟರ್ 1 ಕೆ.ಜಿ + ಆಗ್ರೋಬ್ಯಾಕ್ಟೀರಿಯಂ/ಆಸ್ಪರ್ಜಿಲಸ್ ಕೆ.ಜಿ/ಎ) ಉಪಚಾರಕ್ಕಿಂತ ಶೇ. 8.1 ರಷ್ಟು ಹೆಚ್ಚಿನ ಕಬ್ಬಿನ ಇಳುವರಿಯನ್ನು ದಾಖಲಿಸಿದೆ

7. ಸೂಕ್ಷ್ಮಾಣು ಜೀವಿ ಸಮೂಹವನ್ನು ಬಳಸಿ ಕಬ್ಬಿನಲ್ಲಿ ತರಗು ನಿರ್ವಹಣೆ ಮಾಡುವ ಕ್ಷೇತ್ರ ಪ್ರಯೋಗದಲ್ಲಿ 5000 ಎಂ.ಎಲ್ ದ್ರವ ರೂಪದ ಸೂಕ್ಷ್ಮಾಣು ಜೀವಿ ಸಮೂಹ (ಸೂಡೂಮೊನಾಸ್ + ಬ್ಯಾಸಿಲಸ್ + ಸೆಲ್ಯುಲೊಮೊನಾಸ್) 5000 ಗ್ರಾಂ ಪುಡಿ ರೂಪದ (ಅಜೋಸ್ಪೈರಿಲಂ + ಫೆನೊರೋಕೆಟೆ + ಪ್ಲುರೋಟಸ್ + ಟ್ರೈಕೋಡರ್ಮಾ) 30 ಕೆ.ಜಿ ಕೊಟ್ಟಿಗೆ ಗೊಬ್ಬರ + 30 ಕೆ.ಜಿ ಯೂರಿಯಾ) ಉಪಚಾರವು 40 ಕೆ.ಜಿ : 20 ಕೆ.ಜಿ : 10 ಕೆ.ಜಿ (ಯೂರಿಯಾ : ಕೊಟ್ಟಿಗೆ ಗೊಬ್ಬರ : ಪ್ಲುರೋಟಸ್) ಉಪಚಾರಕ್ಕಿಂತ ಶೇ. 7.89 ರಷ್ಟು ಹೆಚ್ಚಿನ ಕಬ್ಬಿನ ಇಳುವರಿಯನ್ನು ಹೊಂದಿದೆ

8. ಕಬ್ಬಿನ ಹೊಸತಳಿ ಕ್ಷೇತ್ರ ಪ್ರಯೋಗದಲ್ಲಿ ಹೊಸ ತಳಿಯಾದ CoVC–18061 ತಳಿಯು ಹೋಲಿಕೆ ತಳಿಯಾದ Co–86032 ತಳಿಗಿಂತ ಶೇ. 15.38 ರಷ್ಟು ಹೆಚ್ಚಿನ ಕಬ್ಬಿನ ಇಳುವರಿಯನ್ನು ಪಡೆದಿರುತ್ತದೆ

9. ರಾಗಿ ತಳಿ ಕೆ.ಎಂ.ಆರ್. 316 ರೊಂದಿಗೆ ಪರೀಕ್ಷಾತಳಿ ಕೆಎಂಆರ್ 630 ಹೋಲಿಸಿದಾಗ ಕೆಎಂಆರ್ 316 ಹೆಚ್ಚಿನ ಇಳುವರಿ (35.23 ಕ್ವಿ/ಹೆ), ತೆಂಡೆಗಳು (4.86), ಇಳುಕುಗಳು (6.86) ಮತ್ತು ಮೇವು (5.16 ಟನ್/ಹೆ) ದಾಖಲಾಗಿದೆ

10. ನವಣೆ ತಳಿ ಜಿಪಿಯುಎಫ್ 3 ಪರೀಕ್ಷಾತಳಿ ಎಸ್ಐಎ 3156 (11.92 ಕ್ವಿ/ಹೆ) ರೊಂದಿಗೆ ಹೋಲಿಸಿದಾಗ ಜಿಪಿಯುಎಫ್ 3 ಹೆಚ್ಚಿನ ಇಳುವರಿ (15.20 ಕ್ವಿ/ಹೆ) ನೀಡಿರುತ್ತದೆ. ಆದರೆ ರೈತರು ಸಂಸ್ಕರಣೆ ಮತ್ತು ಮಾರಾಟದಲ್ಲಿ ತೊಂದರೆ ವ್ಯಕ್ತಪಡಿಸಿರುತ್ತಾರೆ

11. ಬರಗು ತಳಿ ಜಿಪಿಯುಪಿ 28 ಪರೀಕ್ಷಾತಳಿ ಜಿಪಿಯುಪಿ 21 (13.92 ಕ್ವಿ/ಹೆ) ರೊಂದಿಗೆ ಹೋಲಿಸಿದಾಗ ಹೆಚ್ಚಿನ ಇಳುವರಿ 17.00 ಕ್ವಿ/ಹೆ ದಾಖಲಾಗಿರುತ್ತದೆ

12. ಸಾಮೆ ತಳಿ ಜಿಪಿಯುಎಲ್ 6 ಪರೀಕ್ಷಾತಳಿ ಬಿಎಲ್ 6 (11.60 ಕ್ವಿ/ಹೆ) ರೊಂದಿಗೆ ಹೋಲಿಸಿದಾಗ ಹೆಚ್ಚಿನ ಇಳುವರಿ (15.19 ಕ್ವಿ/ಹೆ) ದಾಖಲಾಗಿರುತ್ತದೆ

ಪ್ರಾತ್ಯಕ್ಷಿಕೆಗಳು : ವಿಸ್ತರಣಾ ಶಿಕ್ಷಣ ಘಟಕ, ನಾಗನಹಳ್ಳಿ ಮೈಸೂರು ಹಾಗೂ ಕೋಲಾರ ಇಲ್ಲಿ 22 ಪ್ರಾತ್ಯಕ್ಷಿಕೆಗಳನ್ನು ಸುಮಾರು 946 ಜನ ರೈತರನ್ನು ಒಳಗೊಂಡಂತೆ 157.2 ಹೆ. ಕ್ಷೇತ್ರದಲ್ಲಿ ಮೈಸೂರು,

5. Grain amaranthus variety of KBJA-15 recorded higher grain yield of 1635 kg/ha than check variety of KBJA-4 (1420 kg/ha) and resulted in 15.14 per cent increase in grain yield

6. Application of 75 per cent recommended dose of NPK+ microbial consortium (Azatobacter + Azospirulum+Bacillus+Pseudomonas) through flood irrigation in sugarcane recorded higher yield of 212 t/ha, compared to check RDF (250 : 100 : 125 kg N:P:K/ha) + (Azatobacter 2.5kg + Agrobacterium /Aspergilus 10kg/ha) (196t/ha) and resulted 8.1 per cent increase in sugarcane yield

7. Application of 5000 ml microbial consortium liquid formulation (Pseudomonas + bacillus + cellulomonas) +5000 g powder form (Azospirillum + Phenorokete +Pleurotus +Ttrichoderma) + 30 kg Cow dung+ 30 kg urea/ha recorded 7.89 per cent higher sugarcane in comparison with check 40 kg urea : 20 kg cowdung:10 kg pleurotus (Urea: Cowdung; Pleurotus)

8. Varietal performance of CoVC 18061 variety of sugarcane resulted in 15.38 per cent higher yield than check variety of Co-86032

9. Ragi variety KMR 316 performed better compared to check KMR 630 in respect of yield (35.23 Q/ha), tillers 4.86, fingers 6.86 and fodder 5.16 t /ha

10. Foxtail variety (Navane) of GPUF-3 recorded higher grain yield of 1920 kg/ha than check variety of SIA-3156 (1700 kg/ha), which in turn resulted in 15.20q/ha. increase in yield.

11. Proso millet (Baragu) variety of GPUP-28 resulted in 17q/ha. higher grain yield over check variety of GPUP-21 (13.92q/ha.)

12. GPUL-6 variety of little millet resulted in 15.19 q/ha. higher grain yield than check variety of BL 6 (11.60q/ha.)

Demonstrations: The Extension Education Unit, Naganahalli, Mysuru and Kolar conducted 22 demonstrations in 946 locations involving 946 farmers

ನಂಜನಗೂಡು, ಕೆ.ಆರ್.ನಗರ, ಹೆಚ್.ಡಿ.ಕೋಟೆ, ಹುಣಸೂರು ಮತ್ತು ಟಿ.ನರಸೀಪುರ ಸ್ಥಳಗಳಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗಿತ್ತು. ಶ್ರೀ ಪದ್ಧತಿಯಲ್ಲಿ ಭತ್ತದ ಬೇಸಾಯ, ನೇರ ಭತ್ತದ ಬೇಸಾಯ ಪದ್ಧತಿ, ಭತ್ತದ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ, ರಾಗಿ ಬೆಳೆಯಲ್ಲಿ ಸಮಗ್ರ ನಿರ್ವಹಣೆ, ತೊಗರಿ ಬೆಳೆಯಲ್ಲಿ ತಳಿಗಳ ಪ್ರಾತ್ಯಕ್ಷಿಕೆ, ಅವರೆ ಬೆಳೆಯಲ್ಲಿ ತಳಿಗಳ ಪ್ರಾತ್ಯಕ್ಷಿಕೆ, ಟೊಮ್ಯಾಟೋ ಬೆಳೆಯಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ, ಮೆಣಸಿನಕಾಯಿಯಲ್ಲಿ ಬೆಳೆಯಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ, ಅಣಬೆ ಬೇಸಾಯ, ಪೌಷ್ಠಿಕ ಕೈತೋಟ, ರೇಷ್ಮೆ ದ್ವಿತಳಿ ಗೂಡಿನ ಪರಿಚಯ, ಮುಸುಕಿನ ಜೋಳದಲ್ಲಿ ಹೊಸ ತಳಿ ಪರಿಚಯ, ಮುಸುಕಿನ ಜೋಳದಲ್ಲಿ ಸೈನಿಕ ಹುಳು ನಿರ್ವಹಣೆ, ಸಾವಯವ ಕೃಷಿಯಲ್ಲಿ ಭತ್ತ ಬೆಳೆಯುವ ಪ್ರಾತ್ಯಕ್ಷಿಕೆ ಹಾಗೂ ನವಣೆ ಬೆಳೆಯಲ್ಲಿ ಹೊಸ ತಳಿ ಪರಿಚಯ ಹಾರಕ & ಬಹುಕಟಾವು ಮೇವು ಪ್ರಾತ್ಯಕ್ಷಿಕೆಗಳನ್ನು ಪರಿಚಯಿಸಲು ಕೈಗೊಳ್ಳಲಾಗಿತ್ತು. ಪ್ರಾತ್ಯಕ್ಷಿಕೆಗಳ ವಿವರಗಳನ್ನು ಅನುಬಂಧ 3.9 ರಲ್ಲಿ ನೀಡಲಾಗಿದೆ.

ಮುಂಚೂಣಿ ಪ್ರಾತ್ಯಕ್ಷಿಕೆಯ ಮುಖ್ಯಾಂಶಗಳು

1. ಭತ್ತದ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆ ಮಾಡಿದಾಗ (ಕೆ.ಆರ್.ಹೆಚ್. 4 ಹೈಬ್ರಿಡ್ ಭತ್ತದ ಮತ್ತು ಇತರೆ ಉತ್ತಮ ಉತ್ಪಾದನಾ ಪದ್ಧತಿ) ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಗಿಂತ ಶೇ. 12.92 ರಷ್ಟು ಹೆಚ್ಚಿನ ಕಾಳಿನ ಇಳುವರಿ ದಾಖಲಾಗಿರುತ್ತದೆ.

2. ಶ್ರೀ ಪದ್ಧತಿ ಭತ್ತದ ಬೇಸಾಯ ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಯಾದ ನಿರಂತರವಾಗಿ ನೀರು ನಿಲ್ಲಿಸಿ ಬೆಳೆಯುವ ಪದ್ಧತಿಗೆ ಹೋಲಿಸಿದಲ್ಲಿ ಶೇ. 17.28 ರಷ್ಟು ಹೆಚ್ಚಿನ ಕಾಳಿನ ಇಳುವರಿಯಲ್ಲದೇ, ನೀರಿನ ಉಳಿತಾಯ ಹಾಗೂ ಉತ್ಪಾದನಾ ವೆಚ್ಚದಲ್ಲಿ ಕಡಿಮೆಯಾಗಿರುವುದು ಕಂಡುಬಂದಿದೆ

3. ಕೆಸರು ಗದ್ದೆಯಲ್ಲಿ ನೇರ ಬಿತ್ತನೆ ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಯಾದ ನಿರಂತರವಾಗಿ ನೀರು ನಿಲ್ಲಿಸಿ 25–30 ದಿನದ ಪೈರನ್ನು ನಾಟಿ ಮಾಡುವ ಪದ್ಧತಿಗಿಂತ ನೇರ ಬಿತ್ತನೆ ಪದ್ಧತಿ ಪ್ರಾತ್ಯಕ್ಷಿಕೆಯ ಶೇ. 19.33 ರಷ್ಟು ಹೆಚ್ಚಿನ ಕಾಳಿನ ಹೆಚ್ಚಿನ ಇಳುವರಿ ಜೊತೆಗೆ ಶೇ. 12–15 ರಷ್ಟು ಉತ್ಪಾದನಾ ವೆಚ್ಚದಲ್ಲಿ ಕಡಿತವಾಗಿರುವುದು ದಾಖಲಿಸಿದೆ.

4. ಸಾವಯವ ಬೇಸಾಯದಲ್ಲಿ ಭತ್ತದ ಪ್ರಾತ್ಯಕ್ಷಿಕೆಯಲ್ಲಿ ಅಳವಡಿಸಿದ ತಂತ್ರಜ್ಞಾನಗಳು ರೈತರು ಅಳವಡಿಸಿ ಬೇಸಾಯ ಮಾಡುತ್ತಿರುವ ಸಾವಯವ ಪದ್ಧತಿಗಿಂತ ಶೇ. 12.99 ರಷ್ಟು ಇಳುವರಿ ಪಡೆಯುವುದಲ್ಲದೇ ಸಾವಯವ ಇಂಗಾಲದಲ್ಲಿ ಹೆಚ್ಚಳವನ್ನು ಕಾಣಬಹುದು

5. ರಾಗಿ ಬೆಳೆಯಲ್ಲಿ ಸಮಗ್ರ ಬೆಳೆ ಪ್ರಾತ್ಯಕ್ಷಿಕೆಯಲ್ಲಿ (ರಾಗಿ ಹೊಸತಳಿ ಕೆ.ಎಂ.ಆರ್. 630 ಮತ್ತು ಉತ್ತಮ ಉತ್ಪಾದನಾ ತಾಂತ್ರಿಕತೆಗಳು) ರೈತರ ಪದ್ಧತಿಗಿಂತ ಶೇ. 17 ರಷ್ಟು ಹೆಚ್ಚಿನ ಕಾಳಿನ ಇಳುವರಿಯನ್ನು ಹೊಂದಿರುತ್ತದೆ

6. ಮುಸುಕಿನ ಜೋಳದಲ್ಲಿ ಸಮಗ್ರ ಬೆಳೆ ನಿರ್ವಹಣೆಯು (ಎಂ.ಎ.ಹೆಚ್. 14–5) ಸಂಕರಣ ತಳಿ ಜೊತೆಗ ಸುಧಾರಿತ ಉತ್ಪಾದನಾ ತಾಂತ್ರಿಕತೆಗಳು ಅಳವಡಿಸಿದ ರೈತರ ಪದ್ಧತಿಗಿಂತ ಶೇ.20.88 ರಷ್ಟು ಹೆಚ್ಚಿನ ಕಾಳಿನ ಇಳುವರಿಯನ್ನು ಹೊಂದಿರುತ್ತದೆ.

in an area of 157.2 ha. In EEU, Naganahalli the demonstrations conducted were SRI method of Rice Cultivation, DSR method of paddy cultivation, Integrated Crop Management in Paddy, Integrated Crop Management in Finger millet, Demonstration of Red gram variety and field bean variety, IPDM practices in tomato, IPDM in Chilli, mushroom production Technology, Nutritional garden, Silkworm bivoltine production, Integrated management on fall Armyworm in Maize, paddy production in organic farming, introduction of navane, haraka and multicut fodder varieties.

Highlights of demonstrations:

1. Demonstration of Integrated crop management in paddy involving Hybrid KRH-4 with improved production technologies recorded 12.92 per cent higher grain yield than private hybrid (VNR) with farmer practice.

2. System of rice Intensification method of rice cultivation resulted in 17.28 per cent higher grain yield beside water saving and reduction in cost of cultivation.

3. Demonstration of Direct seeded rice method of rice cultivation recorded in 19.33 per cent higher yield and 12-15 per cent reduction in cost of prodution compared to conventional method of rice cultivation.

4. Organic farming rice cultivation recorded 12.99 per cent higher yield than farmer practice of organic cultivation and also the per cent of organic carbon increased in demonstration plot than check plot.

5. ICM in finger millet (KMR-630 with improved production technologies) resulted in 17.0 per cent higher grain yield than farmers practice (Local variety).

6. ICM in Maize (Introduction of MAH 14-5 newly released hybrid with improved production technologies) recorded 20.88 per cent higher seed yield than farmers practice.

7. ಮುಸುಕಿನ ಜೋಳದಲ್ಲಿ ಸೈನಿಕ ಹುಳುವಿನ ನಿರ್ವಹಣೆಯಲ್ಲಿ ಕೀಟಬಾಧೆ (ಶೇ. 05) ರಷ್ಟು ಕಡಿಮೆಯಾಗಿರುವುದಲ್ಲದೇ ಶೇ. 10.60 ರಷ್ಟು ಹೆಚ್ಚಿನ ಕಾಳಿನ ಇಳುವರಿ ಬಂದಿರುತ್ತದೆ

8. ನವಣೆ ಬೆಳೆಯ ತಳಿ ಪ್ರಾತ್ಯಕ್ಷಿಕೆಯಲ್ಲಿ ಎಸ್.ಐ.ಎ. 3156 ತಳಿಯು ಸ್ಥಳೀಯ ತಳಿಗಿಂತ ಶೇ. 18.82 ರಷ್ಟು ಹೆಚ್ಚಿನ ಕಾಳಿನ ಇಳುವರಿ ಪಡೆದಿರುತ್ತದೆ

9. ತೊಗರಿ ಬೆಳೆಯ ಪ್ರಾತ್ಯಕ್ಷಿಕೆಯಲ್ಲಿ ಬಿ.ಆರ್.ಜಿ. 5 ತಳಿಯು ಸ್ಥಳೀಯ ತಳಿಗಿಂತ ಎತ್ತರವಾಗಿರುವುದಲ್ಲದೇ ಶೇ. 18.77 ರಷ್ಟು ಹೆಚ್ಚಿನ ಕಾಳಿನ ಇಳುವರಿ ಹೊಂದಿದೆ. ವಿಸ್ತರಣಾ ಶಿಕ್ಷಣ ಘಟಕ, ಕೋಲಾರದಲ್ಲಿ ತೊಗರಿ ತಳಿ ಮುಂಚೂಣಿ ಪ್ರಾತ್ಯಕ್ಷಿಕೆಯಲ್ಲಿ ಬಿಆರ್‌ಜಿ 3 ಪರೀಕ್ಷಾತಳಿ (ಬಿಆರ್‌ಜಿ 2 12.75 ಕ್ವಿ/ಹೆ) ಗಿಂತ ಹೆಚ್ಚಿನ ಇಳುವರಿ (14.62 ಕ್ವಿ/ಹೆ) ದಾಖಲಾಗಿದೆ

10. ಅವರೆ ಬೆಳೆಯ ಪ್ರಾತ್ಯಕ್ಷಿಕೆಯಲ್ಲಿ ಹೆಚ್.ಎ. 4 ತಳಿಯು, ರೈತರು ಬಳಸುವ ಸ್ಥಳೀಯ ತಳಿಗಿಂತ ಬೇಗ ಕಟಾವಿಗೆ ಬರುವುದಲ್ಲದೇ ಶೇ. 14.81 ರಷ್ಟು ಹೆಚ್ಚಿನ ಹಸಿಕಾಯಿ ಇಳುವರಿಯನ್ನು ಹೊಂದಿದೆ

11. ಶುಂಠಿ ಬೆಳೆಯಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ ಪ್ರಾತ್ಯಕ್ಷಿಕೆಯಲ್ಲಿ ರೈತರು ಅನುಸರಿಸುತ್ತಿರುವ ಪದ್ಧತಿಗಿಂತ ಶೇ. 12.90 ರಷ್ಟು ಹೆಚ್ಚಿನ ಇಳುವರಿ ಜೊತೆಗೆ ಕೀಟ ಮತ್ತು ರೋಗ ನಿರ್ವಹಣೆಯಾಗಿರುವುದು ಕಂಡುಬಂದಿದೆ

12. ದ್ವಿತಳಿ ರೇಷ್ಮೆ ಗೂಡಿನ ಪ್ರಾತ್ಯಕ್ಷಿಕೆಯಲ್ಲಿ 100 ಮೊಟ್ಟೆ ಮರಿಗಳಿಗೆ 90 ಕೆ.ಜಿ ಗೂಡಿನ ಇಳುವರಿ ಬಂದಿದ್ದು ರೈತರ ಪದ್ಧತಿಯಲ್ಲಿ 100 ಮೊಟ್ಟೆ ಮರಿಗಳಿಗೆ 74 ಕೆ.ಜಿ ಗೂಡಿನ ಇಳುವರಿ ಬಂದಿರುತ್ತದೆ

13. ಪೌಷ್ಠಿಕ ಕೈತೋಟ ಪ್ರಾತ್ಯಕ್ಷಿಕೆಯಿಂದ ರೈತರು ಬಳಸುವ ಆಹಾರ ಪದ್ಧತಿಯಲ್ಲಿ ಹೆಚ್ಚಿನ ಪೌಷ್ಠಿಕಾಂಶತೆ ಇರುವುದು ಕಂಡು ಬಂದಿರುತ್ತದೆ

14. ಬಹುಕಟಾವು ಮೇವಿನ ತಳಿ ಸಿಓಎಫ್‌ಎಸ್ 31 ಪರೀಕ್ಷಾ ತಳಿ (ಸಿಓಎಫ್‌ಎಸ್ 29 (310 ಕ್ವಿ/ಹೆ) ಹೋಲಿಸಿದಾಗ ಶೇ. 20.96 ಹೆಚ್ಚಿನ ಮೇವಿನ ಇಳುವರಿ (375 ಕ್ವಿ/ಹೆ) ದಾಖಲಾಗಿದ್ದು ಸಿಓಎಫ್‌ಎಸ್ 31 ರುಚಿಕತೆ ಉತ್ತಮವಾಗಿರುತ್ತದೆ

ತರಬೇತಿ ಕಾರ್ಯಕ್ರಮಗಳು: ವಿಸ್ತರಣಾ ಶಿಕ್ಷಣ ಘಟಕ, ನಾಗನಹಳ್ಳಿ, ಮೈಸೂರು ಮತ್ತು ಕೋಲಾರದಲ್ಲಿ ಒಟ್ಟು 14 ಒಳಾವರಣ ತರಬೇತಿ ಕಾರ್ಯಕ್ರಮಗಳನ್ನು ಸಾವಯವ ಕೃಷಿ, ಬೀಜೋಪಚಾರ, ಯಾಂತ್ರೀಕೃತ ಭತ್ತದ ಬೇಸಾಯ, ಶುಂಠಿ ಮತ್ತು ಮುಸುಕಿನ ಜೋಳದಲ್ಲಿ ಸಮಗ್ರ ಬೇಸಾಯ ಪದ್ಧತಿ, ತರಕಾರಿ ಬೆಳೆಗಳಲ್ಲಿ ಉತ್ಪಾದನಾ ತಾಂತ್ರಿಕತೆಗಳು, ದ್ವಿದಳ ಧಾನ್ಯ ಬೆಳೆಗಳಲ್ಲಿ ಉತ್ಪಾದನಾ ತಾಂತ್ರಿಕತೆಗಳು ಕಾರ್ಯಕ್ರಮಗಳನ್ನು 611 ರೈತರಿಗೆ, ರೈತ ಮಹಿಳೆಯರಿಗೆ ಮತ್ತು ಗ್ರಾಮೀಣ ಯುವಕರಿಗೆ ನೀಡಲಾಗಿದೆ. ಮುಂದುವರೆದು, 19 ಹೊರಾವರಣ ತರಬೇತಿ ಕಾರ್ಯಕ್ರಮಗಳನ್ನು ರಾಗಿ ಮತ್ತು ಭತ್ತದಲ್ಲಿ ಸಮಗ್ರ ಬೇಸಾಯ ಪದ್ಧತಿಗಳು, ಮುಸುಕಿನ ಜೋಳದಲ್ಲಿ ಸೈನಿಕ ಹುಳುವಿನ ನಿರ್ವಹಣೆ, ಅಣಬೆ ಬೇಸಾಯದ ಉತ್ಪಾದನಾ ತಾಂತ್ರಿಕತೆಗಳು, ಕಿರುಧಾನ್ಯಗಳಲ್ಲಿ, ತೊಗರಿ, ಅವರೆ ಮತ್ತು ಮೇವಿನ ಬೆಳೆಗಳ ವೈಜ್ಞಾನಿಕ ಉತ್ಪಾದನೆ ಕುರಿತು ಒಟ್ಟು 1440 ರೈತರಿಗೆ ಹಮ್ಮಿಕೊಳ್ಳಲಾಗಿತ್ತು. ವಿವರಗಳನ್ನು ಅನುಬಂಧ 3.10 ರಲ್ಲಿ ನೀಡಲಾಗಿದೆ.

7. Integrated management on fall army worm in maize resulted in reduction in pest (5.0 per cent) with increased yield of 10.60 per cent compared to farmers practice

8. In foxtail millet variety SIA-3156 with improved crop management practice produced 18.82 per cent higher grain yield than farmers practice

9. Demonstration of Red gram variety BRG-5 recorded 18.77 per cent increase in yield where as in EEU, Kolar, BRG-3 (14.62q/ha.) recorded higher yield as compared to BRG-2 (12.75q/ha.) variety.

10. Demonstration of Hebbal avare variety HA-4 produced higher green pod yield and resulted in 14.81 per cent increase in yield.

11. Demonstration of IPDM practice in Ginger recorded 12.90 per cent higher yield beside reduction in pest (6.0%) and disease (9.0%).

12. Introduction of New silkworm Hybrid recorded higher cocoon yield of 90kg/100 DFL's compared to check yield of 74kg/100 DFL's.

13. Demonstration of Nutritional garden for farm families has increased nutritional status due to consumption of fresh vegetables.

14. Demonstration of multicut fodder variety COFS-31 (375 Q/ha) recorded 20.96 per cent higher yield compared to check COFS-29 (310 Q/ha). The palatability of COFS-31 is better.

Training Programmes: The Extension Education Unit, Naganahalli, Mysuru and Kolar was organized 14 need based on campus training programmes on organic farming, seed treatment in field crops, mechanized paddy transplanting, integrated crop management in ginger and Maize, production technologies of vegetable crops, agronomic practices in pulse crops etc., for the benefit of 611 farmers, farm women and youths to upgrade their knowledge and skills. Further units also organized 19 off campus training programmes on integrated crop management in rice, ragi, fall army worm management in maize, oyster mushroom production & process technologies, scientific cultivation of small millets, redgram, avare & fodder for the benefit of 1440 farmers. The details are provided in Annexure 3.10.

ವಿಸ್ತರಣಾ ಶಿಕ್ಷಣ ಘಟಕ, ನಾಗನಹಳ್ಳಿ, ಮೈಸೂರು ಎರಡು ತಂಡಗಳಲ್ಲಿ ಪರಿಕರ ವಿತರಕರಿಗಾಗಿ ಕೃಷಿ ವಿಸ್ತರಣೆಯಲ್ಲಿ ಡಿಪ್ಲೊಮೊ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಪ್ರತಿ ತಂಡದಲ್ಲಿ 40 ಜನರಂತೆ ತರಬೇತಿಯನ್ನು ನೀಡುತ್ತಿದೆ.

ಶೈಕ್ಷಣಿಕ ಚಟುವಟಿಕೆಗಳು: ವಿಸ್ತರಣಾ ಶಿಕ್ಷಣ ಘಟಕಗಳು 338 (2031) ಸಮೂಹ ಚರ್ಚೆಸಭೆ, 63 (348) ಪದ್ಧತಿ ಪ್ರಾತ್ಯಕ್ಷಿಕೆ, 508 (2915) ಕ್ಷೇತ್ರ ಭೇಟಿ, 15 (1030) ಕ್ಷೇತ್ರೊತ್ಸವಗಳನ್ನು ಆಯೋಜಿಸಲಾಗಿತ್ತು. ವಿಸ್ತರಣಾ ಶಿಕ್ಷಣಾ ಘಟಕದ ವಿಜ್ಞಾನಿಗಳು 03 ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರಗಳಲ್ಲಿ ಭಾಗವಹಿಸಿ, 2 ಟಿ.ವಿ. ಕಾರ್ಯಕ್ರಮಗಳನ್ನು, 3 ರೇಡಿಯೋ ಕಾರ್ಯಕ್ರಮಗಳನ್ನು, 2 ಕೃಷಿಮೇಳ, 3 ವಸ್ತು ಪ್ರದರ್ಶನ ಮತ್ತು 1775 ರೈತರಿಗೆ ಸಲಹಾ ಸೇವೆಗಳನ್ನು ಒದಗಿಸಿದ್ದಾರೆ.

4.4.10 ರಾಷ್ಟ್ರೀಯ ಕೃಷಿ ವಿಸ್ತರಣಾ ಪ್ರಾಯೋಜನೆ

ರಾಷ್ಟ್ರೀಯ ಕೃಷಿ ವಿಸ್ತರಣಾ ಪ್ರಾಯೋಜನೆಯು ಕರ್ನಾಟಕ ರಾಜ್ಯ ಕೃಷಿ ಇಲಾಖೆ ಮತ್ತು ಇತರೆ ಸಂಬಂಧಿತ ಇಲಾಖೆಗಳ ವಿಸ್ತರಣಾ ಅಧಿಕಾರಿಗಳ ಜ್ಞಾನಮಟ್ಟ ಹೆಚ್ಚಿಸಲು ಮತ್ತು ಕೌಶಲ್ಯ ವರ್ಧಿಸಲು ತರಬೇತಿ ನೀಡಲು ಸ್ಥಾಪಿಸಲಾಗಿದೆ. ಪ್ರಾಯೋಜನೆಯ ಉದ್ದೇಶದಂತೆ ಜಿಲ್ಲಾ ಮಟ್ಟದ ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರ, ಜಿಲ್ಲಾ ಮಟ್ಟದಲ್ಲಿ ಬೆಳೆ ರೋಗ ತಪಾಸಣೆ ಸಮೀಕ್ಷೆ, ಜಿಲ್ಲಾವಾರು ಬೆಳೆ ಮತ್ತು ಕೃಷಿ ಉದ್ಯಮಗಳ ಕುರಿತಾಗಿ ಸಾಹಿತ್ಯ ಸಿದ್ದಪಡಿಸುವಿಕೆ ಹಾಗೂ ಹಂಚಿಕೆ ಹಾಗೆಯೆ ರೈತ ಸಂವಾದ ಗೋಷ್ಟಿಗಳನ್ನು ಆಯೋಜಿಸುವುದು. ಬೆಂಗಳೂರು ಮತ್ತು ಮಂಡ್ಯಗಳಲ್ಲಿರುವ ಸಹ ವಿಸ್ತರಣಾ ನಿರ್ದೇಶಕರ ನೇತೃತ್ವದಲ್ಲಿ 2020–21 ಸಾಲಿನಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಆಯೋಜಿಸಲಾಗಿವೆ:

ಅ) **ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರ :** 10 ಜಿಲ್ಲೆಗಳಲ್ಲಿ 18 ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಯಿತು. ಈ ದ್ವೈಮಾಸಿಕ ಕಾರ್ಯಾಗಾರದ ಸಂದರ್ಭಗಳಲ್ಲಿ ವಿಸ್ತರಣಾ ಕಾರ್ಯಕರ್ತರಿಂದ ತಾಲ್ಲೂಕುವಾರು ಹವಾಮಾನ ಸ್ಥಿತಿಗತಿಗಳ ವಿಶ್ಲೇಷಣೆ, ಕೃಷಿ ಕ್ಷೇತ್ರ ಸಂಬಂಧಿತ ಸಮಸ್ಯೆಗಳನ್ನು ಅವಲೋಕಿಸಿ ಚರ್ಚಿಸಲಾಯಿತು ಮತ್ತು ವಿಶ್ವವಿದ್ಯಾನಿಲಯದ ವಿಜ್ಞಾನಿಗಳ ಮೂಲಕ ಸೂಕ್ತ ಪರಿಹಾರಗಳನ್ನು ಸೂಚಿಸಲಾಯಿತು. ಅಲ್ಲದೆ ವಿಸ್ತರಣಾ ಕಾರ್ಯಕರ್ತರಿಗೆ 14 ಪಠ್ಯಕ್ರಮಗಳನ್ನು ಸಿದ್ದಪಡಿಸಲಾಯಿತು. ಅಗತ್ಯತೆಯನ್ನು ಆಧರಿಸಿ 9 ವಿಶೇಷ ಅತಿಥಿ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಇದರ ಜೊತೆಗೆ 35 ಪದ್ಧತಿ ಪ್ರಾತ್ಯಕ್ಷಿಕೆ, 22 ಗುಂಪು ಚರ್ಚೆಗಳನ್ನು ಆಯೋಜಿಸಲಾಗಿತ್ತು. 82 ಕ್ಷೇತ್ರ ಭೇಟಿ ಮತ್ತು ಸಲಹಾ ಸೇವೆಗಳನ್ನು ರೈತರಿಗೆ ನೀಡಲಾಗಿದ್ದು, ಮೂರು ವಿಶೇಷ ದಿನಾಚರಣೆ, ಏಳು ವಿಶೇಷ ಕಾರ್ಯಕ್ರಮಗಳು ಮತ್ತು ಸರ್ಕಾರದ ವಿವಿಧ ಇಲಾಖೆಗಳ ಮತ್ತು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಆಯೋಜಿಸಲಾದ 90 ಸಭೆಗಳಲ್ಲಿ ಭಾಗವಹಿಸಲಾಯಿತು.

ಆ) **ಕೌಶಲ್ಯ ಪ್ರಾತ್ಯಕ್ಷಿಕೆ:** ವೈಜ್ಞಾನಿಕ ಮಾವಿನ ಕೊಯ್ಲಿನ ವಿಧಾನ, ಕೋವಿಡ್ –19 ಲಾಕ್ ಡೌನ್ ಸಮಯದಲ್ಲಿ ಸ್ಥಳೀಯವಾಗಿ

The Extension Education Unit, Naganahalli, Mysuru conducting 2 batches of DAESI with a capacity of 40 input dealers in each batch.

Educational activities: The EEU, Naganahalli, Mysore and Kolar organized 338 (2031) group discussion meetings, 63 (348) method demonstrations 508 (2915) field visits and 15 (1030) field days. The scientists of EEU, Mysuru participated in three bimonthly technical workshops, two TV programs, three radio programs and participated in two Krishimela and three exhibitions and provided 1775 advisory services to the farmers.

4.4.10 National Agricultural Extension Project (NAEP)

National Agricultural Extension Project (NAEP) was established to provide training to increase knowledge level and to develop skills of extension functionaries of the state department of agriculture and other line department. The objective of this project is to organize district level bi-monthly technical workshops. District level pest and disease surveillance, developing and distribution of literature on crops and agri-enterprises of the district as well as to organize farmer's discussion forums. Under the leadership of Associate Directors of Extension working at Bengaluru and Mandya have carried out the following activities during 2020-21

a) **Bi-monthly Technical Workshop:** 18 bi-monthly technical workshops were organized in 10 districts. Taluka wise weather data was analyzed, field problems observed by extension functionaries were discussed and suitable solutions were worked out with the assistance the University scientists. Accordingly 14 lesson plans were developed and advocated to the extension functionaries. Depending on the requirement 9 special guest lecturers were arranged. In addition 35 method demonstrations, 22 group discussions were conducted. 82 field visits and advisory services were provided to the farmers. Participated in three important days celebration, seven important events and participated in 90 meetings conducted at the university and the government level

b) **Skill Demonstrations:** Scientific method of mango harvesting, during Covid-19 lockdown

ಲಭ್ಯವಿರುವ ವಸ್ತುಗಳನ್ನು ಬಳಸಿ ದ್ರಾಕ್ಷಿಯನ್ನು ಪ್ಯಾಕಿಂಗ್ ಮಾಡುವುದು, ಹರಳು ಬೆಳೆಯಲ್ಲಿ ಸುಳಿ ಚಿವುಟುವಿಕೆ, ಮೆಕ್ಕೆ ಜೋಳದಲ್ಲಿ ಸೈನಿಕ ಹುಳುವಿನ ನಿಯಂತ್ರಣ, ದಾಳಿಂಬೆಯಲ್ಲಿ ರಸ ನೀರಾವರಿ ಅಳವಡಿಕೆ, ಮಾವಿನಲ್ಲಿ ಸುಧಾರಿತ ಸವರುವಿಕೆ ಮತ್ತು ಮಾವಿನ ಗಿಡಗಳ ಸುತ್ತ ಕಂದಕಗಳ ನಿರ್ಮಾಣ ರಸಗೊಬ್ಬರಗಳನ್ನು ನೀಡುವಿಕೆ, ಎನ್‌ಪಿವಿ ಸಿಂಪರಣಾ ದ್ರಾವಣ ತಯಾರಿಸುವಿಕೆ ಮತ್ತು ಭತ್ತದಲ್ಲಿ ಚಾಪೆ ಸಸಿಮಡಿ ತಯಾರಿಸುವಿಕೆ ಪ್ರಾತ್ಯಕ್ಷಿಕೆ, ರಾಗಿಯಲ್ಲಿ ಸತುವಿನ ಸಲ್ಫೇಟ್‌ನ ಬಳಕೆ, ಭತ್ತ, ರಾಗಿ ಯಾಂತ್ರಿಕೃತ ಬಿತ್ತನೆ, ಮತ್ತು ಬೀಜೋಪಚಾರ, ಅಜೋಸ್ಪೈರುಲಂ ಮತ್ತು ರೈಜೋಬೀಯಂಯನ್ನು ತೊಗರಿ ಬೀಜೋಪಚಾರಕ್ಕಾಗಿ ಬಳಕೆ, ಶುಂಠಿಯಲ್ಲಿ ನೀರಿನಲ್ಲಿ ಕರುಗುವ ರಸಗೊಬ್ಬರ ಎಲೆಗಳ ಮೇಲೆ ಸಿಂಪರಣೆ, ಕಬ್ಬಿನಲ್ಲಿ ರೋಗಗಳ ನಿಯಂತ್ರಣಾ ಕ್ರಮಗಳು, ಹುಳಿ ಮತ್ತು ಕ್ಷಾರ ಮಣ್ಣಿನ ಗುರುತಿಸುವಿಕೆ ಕುರಿತು ಕೌಶಲ್ಯ ಪ್ರಾತ್ಯಕ್ಷಿಕೆಗಳನ್ನು ಪ್ರದೇಶಾಧಾರಿತವಾಗಿ ಕೈಗೊಳ್ಳಲಾಗಿದೆ.

ಇ) **ತಪಾಸಣಾ ಕ್ಷೇತ್ರ ಭೇಟಿ :** ದಾಳಿಂಬೆ ಕ್ಷೇತ್ರಗಳಿಗೆ ಭೇಟಿ ನೀಡಿ ರೋಗ ನಿರ್ಣಯದ ಬಗ್ಗೆ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಮತ್ತು ಹಿರೇಹಳ್ಳಿ ಕೆವಿಕೆ ವಿಜ್ಞಾನಿಗಳು ಕ್ಷೇತ್ರ ಸಮಸ್ಯೆಗಳಿಗೆ ಅಗತ್ಯ ಪರಿಹಾರವನ್ನು ತಾವರೆಕೆರೆ ಮತ್ತು ಸುತ್ತಮುತ್ತಲಿನ ಹಳ್ಳಿಗಳು, ಸಿರಾ ತಾಲ್ಲೂಕು ತುಮಕೂರು ಜಿಲ್ಲೆ ರೈತರಿಗೆ ಸೂಚಿಸಲಾಯಿತು. ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ರಾಗಿ, ಕಬ್ಬು ಮತ್ತು ಮೆಕ್ಕೆ ಜೋಳ ಬೆಳೆಗಳಿಗೆ ರೋಗನಿರ್ಣಯದ ಬಗ್ಗೆ ಕ್ಷೇತ್ರ ಭೇಟಿ ನೀಡಿ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಒದಗಿಸಿಲಾಗಿದೆ. ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ 07 ತಪಾಸಣಾಕ್ಷೇತ್ರ ಭೇಟಿಗಳನ್ನು ಹಮ್ಮಿಕೊಳ್ಳಲಾಗಿದ್ದು, ಕ್ಷೇತ್ರ ಭೇಟಿ ಸಮಯದಲ್ಲಿ ಸಮಸ್ಯಾತ್ಮಕ ಭತ್ತದ ಕ್ಷೇತ್ರಗಳು, ಭತ್ತದಲ್ಲಿ ಕುತ್ತಿಗೆ ರೋಗ, ಉದುಬತ್ತ ರೋಗ, ಕಬ್ಬಿನಲ್ಲಿ ಎಲೆ ತುಕ್ಕುರೋಗ, ಹೆಸರು ಮತ್ತು ಉದ್ದಿನಲ್ಲಿ ಹಳದಿ ನಂಜು ರೋಗಗಳ ಸಮಸ್ಯೆಗಳನ್ನು ಗುರುತಿಸಲಾಯಿತು.

ಈ) **ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರದ ಸಂದರ್ಭದಲ್ಲಿ ವರದಿಯಾದ ಸಮಸ್ಯೆಗಳು :** ಉದ್ದು, ಹೆಸರು, ಅಲಸಂದೆ ಮುಂತಾದ ದ್ವಿದಳ ಧಾನ್ಯಗಳಲ್ಲಿ ಹಳದಿ ಅಂಗಮಾರಿ ರೋಗ, ಮುಸುಕಿನ ಜೋಳದಲ್ಲಿ ಸೈನಿಕ ಹುಳುವಿನ ಭಾದೆ, ರಾಗಿಯಲ್ಲಿ ಕಾಂಡ ಕೊರಕ, ಕಬ್ಬಿನಲ್ಲಿ ಕಾಂಡ ಕೊರಕ ಮತ್ತು ಗೊಣ್ಣೆ ಹುಳು ಭಾದೆ, ಭತ್ತದಲ್ಲಿ ಬೆಂಕಿ ರೋಗ, ಗರಿ ಸುತ್ತುವ ಹುಳು, ಬ್ಯಾಕ್ಟಿರೀಯಲ್ ಎಲೆ ಸ್ಟ್ರೀಕ್, ಎಲೆ ಮಡಚುವ ಸುರಂಗ ಕೀಟ ಮತ್ತು ಕಂದು ಚುಕ್ಕೆ, ರಾಗಿಯಲ್ಲಿ ಕಳೆ ನಿಯಂತ್ರಣ, ಟೊಮೊಟೊದಲ್ಲಿ ಫ್ಯುಜೇರಿಯಮ್ ವಿಲ್ಟ್, ತೆಂಗಿನಲ್ಲಿ ಬಿಳಿ ನೊಣ, ಕಳಪೆ ಮಟ್ಟದ ಕೀಟ ಮತ್ತು ಶಿಲೀಂದ್ರ ನಾಶಕಗಳು, ಸೂರ್ಯಕಾಂತಿ ಬೀಜದ ಅಲಭ್ಯತೆ, ಸಿರಿಧಾನ್ಯದಲ್ಲಿ ಮಿಲ್ಲಿಂಗ್ ಮತ್ತು ಮಾರುಕಟ್ಟೆ ಸಮಸ್ಯೆ, ರಾಗಿ ಕೊಯ್ಲಿನ ಸಮಯದಲ್ಲಿ ಯಾಂತ್ರೀಕೃತ ಕಟಾವು ಯಂತ್ರಗಳ ಅಲಭ್ಯತೆ, ರಾಗಿಯಲ್ಲಿ ಬೆಳೆ ಬಾಗುವ ಸಮಸ್ಯೆ ಹಾಗೂ ಉತ್ತಮ ಗುಣಮಟ್ಟದ ಅವರೆ ಮತ್ತು ಮೇವಿನ ಬೀಜಗಳ ಅಲಭ್ಯತೆ.

period packing of grapes using locally available material, nipping in caster, control army warm in maize, fertigation in pomegranate, formation of trenches and application fertilizers in mango, preparation of spray solutions with NPV and spraying of it, seeds treatment in paddy, ragi and pulses, tray nursery in paddy, seed hardening and zinc sulphate treatment in ragi, mechanized sowing of ragi, Azospirullum and rhizobium treatment in redgram, diagnosis of sugarcane diseases, method of identifying saline and alkali soil, foliar application of water soluble fertilizers in ginger and other important technologies which were demanding skill improvement was undertaken in jurisdictional districts.

c) **Diagnostic Field Visits:** Arranged Diagnostic Field Visits to pomegranate plots in Tavarekere and surrounding villages, Sira Taluk, Tumakur district along with the officers of department horticulture and scientists of KVK Hirehalli and provided required solution to the field problems. Arranged diagnostic field visits to ragi, paddy, sugarcane and maize crops in Mandya, Maysore, Hassan and Chamarajanagara districts and diagnosed field problems and provided suitable solutions. The problems identified during seven diagnostic field visits at Mandya district were problematic paddy fields, paddy fieds affected by neckblast, udubatta disease, sugarcane leaf rust and yellow mosoic virus in green and black gram fields.

d) **Field problems reported in the bi-monthly workshops :** Yellow mosaic in blackgram, greengram & cowpea, fall army worm in maize, stem borer in ragi, early shoot borer & rootgrub in sugarcane, bacterial leaf streak, stem borer, brown spot, leaf blast & case worm in paddy, weed control in ragi, fusarium wilt in tomato, white flies in coconut, poor quality of pesticides and fungicides, non availability of sun flower seeds, milling and marketing problem in millets, non availability of mechanized ragi harvesters during harvesting season, poor crop yields in millets, lodging problem in ragi and non availability of good quality field bean and fodder seeds

ಉ) ಕ್ಷೇತ್ರ ಪ್ರಯೋಗ ಮತ್ತು ಪ್ರಾತ್ಯಕ್ಷಿಕೆ ತಾಕುಗಳಿಗೆ ಭೇಟಿ ಆಯೋಜನೆ ಮತ್ತು ಮೇಲ್ವಿಚಾರಣೆ: ಈ ಸಾಲಿನಲ್ಲಿ 15 ತಾಂತ್ರಿಕತೆಗಳ ಮೇಲೆ ಕ್ಷೇತ್ರ ಪ್ರಯೋಗಗಳನ್ನು ಏರ್ಪಡಿಸಲಾಗಿತ್ತು. 70 ಕ್ಷೇತ್ರ ಪ್ರಯೋಗಗಳ ತಾಕಿಗೆ ಭೇಟಿಯನ್ನು ಕೈಗೊಂಡಿದ್ದು, ಈ ಸಂದರ್ಭದಲ್ಲಿ ಪ್ರಯೋಗಗಳ ಕಾರ್ಯನಿರ್ವಹಣೆಯನ್ನು ವಿಕ್ಷೀಸಿ ಕ್ಷೇತ್ರ ಕಾರ್ಯಕರ್ತರುಗಳಿಗೆ ಮಾರ್ಗದರ್ಶನ ನೀಡಲಾಯಿತು. ಕ್ಷೇತ್ರ ಪ್ರಯೋಗಗಳ ವಿವರ: ಕೆಎಮ್‌ಆರ್ 136 ರಾಗಿ ತಳಿ, ಜಿಪಿಯುಎಫ್ 3 ನವಣೆ, ಜಿಪಿಯುಪಿ 28 ಬರಗು, ಕೆಬಿಜಿಎ 15 ಬೀಜದ ದಂಟು, ನೆಲಗಡಲೆ ಕೃಷಿಯಲ್ಲಿ ಸ್ಲ್ಯಾಗ್ ಆಧಾರಿತ ಜಿಪ್ಸಮ್‌ನ ಬಳಕೆ, ಮೇವಿನ ತೋಕೆ ತಳಿ ಆರ್.ಒ. 11 ಮತ್ತು ಓಎಸ್ 6, ಭತ್ತದ ತಳಿ ಕೆಎಂಪಿ 220 ಮತ್ತು ಎಮ್‌ಎಸ್‌ಎನ್ 99 ರಕ್ಷ, ಸಾಮೆಯ ತಳಿ ಜಿಪಿಯುಎಲ್ 6 ಮತ್ತು ಬಿಎಲ್ 6, ನೇಪಿಯರ್ ಹುಲ್ಲಿನಲ್ಲಿ ಹಸಿರು ಮೇವಿನ ಗುಣಮಟ್ಟಕ್ಕಾಗಿ ಸಾರಜನಕ ಬಳಕೆ, ಡ್ರಂಸೀಡೆಡ್ ಭತ್ತದಲ್ಲಿ ಉದಯೋತ್ತರ ಕಳೆನಾಶಕಗಳ ಬಳಕೆ ಬಗ್ಗೆ ಜಿಲ್ಲಾವಾರು ರಾಜ್ಯದ ಕೃಷಿ ಇಲಾಖೆ ಮತ್ತು ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಕೈಗೊಂಡಂತಹ ಪ್ರಯೋಗ ಕ್ಷೇತ್ರಗಳಿಗೆ ಭೇಟಿ ನೀಡಲಾಯಿತು. ಜೋಳದಲ್ಲಿ ಸಮಗ್ರ ಕೀಟಗಳ ಹತೋಟಿ, ರಾಗಿಯಲ್ಲಿ ಕೂರಿಗೆ ಬಿತ್ತನೆ, ಸಮಗ್ರ ಕೃಷಿ ಪದ್ಧತಿಗಳು, ಎಳ್ಳಿನಲ್ಲಿ ಆಧುನಿಕ ಬೇಸಾಯ ಪದ್ಧತಿಗಳ ಅಳವಡಿಕೆ, ಎಣ್ಣೆ ಕಾಳುಗಳ ಉತ್ಪಾದನೆ, ಸಿರಿಧಾನ್ಯದ ಬೀಜೋತ್ಪಾದನೆ, ತೊಗರಿಯಲ್ಲಿ ತಳಿಗಳ ಪ್ರಾತ್ಯಕ್ಷಿಕೆ, ಮಾವಿನಲ್ಲಿ ಕೊಂಬೆ ಸಮರುವಿಕೆ, ಕಬ್ಬಿನಲ್ಲಿ ಸಮಗ್ರ ಪೊಷಕಾಂಶಗಳ ನಿರ್ವಹಣೆ ಮತ್ತು ಭತ್ತದಲ್ಲಿ ತಳಿಗಳ ಪ್ರಾತ್ಯಕ್ಷಿಕೆಗಳಿಗೆ ಭೇಟಿ ನೀಡಲಾಯಿತು.

ಊ) ವಲಯ ಸಂಶೋಧನಾ ವಿಸ್ತರಣಾ ಪ್ರಾಯೋಜನೆಯ ಸಭೆಯಲ್ಲಿ ಮಂಡಿಸಿದ ಸಮಸ್ಯೆಗಳು ಮತ್ತು ಹಿಮ್ಮಾಹಿತಿಗಳು

ಬೆಳೆ ಅಭಿವೃದ್ಧಿ: ರಾಗಿಯಲ್ಲಿ ಉತ್ತಮ ಮೇವು ಮತ್ತು ಧಾನ್ಯಗಳ ಇಳುವರಿ ನೀಡಬಲ್ಲ ಬರ ನಿರೋಧಕ, ಬೆಳೆ ನೆಲಕ್ಕುರುಳುವ ನಿರೋಧಕ ಮತ್ತು ಯಾಂತ್ರಿಕ ಕಟಾವಿಗೆ ಸೂಕ್ತ ತಳಿಯ ಅವಶ್ಯಕತೆಯಿದೆ. ಸಿರಿ ಧಾನ್ಯಗಳಲ್ಲಿ ಅಧಿಕ ಇಳುವರಿ ತಳಿಗಳು, ತೊಗರಿ ಬೆಳೆಯಲ್ಲಿ ಅಲ್ಪಾವಧಿ ಮತ್ತು ಬರ ನಿರೋಧಕ ತಳಿಗಳು, ಮುಸುಕಿನ ಜೋಳದಲ್ಲಿ ಬೂಜು ಮತ್ತು ಎಲೆ ಮಚ್ಚೆ ರೋಗ ನಿರೋಧಕ ತಳಿಗಳು, ಹೆಸರಿನಲ್ಲಿ ಹಳದಿ ನಂಜುರೋಗ ನಿರೋಧಕ ತಳಿಯ ಕೊರತೆ, ಅಧಿಕ ಇಳುವರಿ ಮತ್ತು ಏಕಕಾಲಕ್ಕೆ ಕಟಾವಿಗೆ ಬರುವ ನೆಲಗಡಲೆ ತಳಿ, ಅಧಿಕ ಇಳುವರಿ ಮತ್ತು ರೋಗ ನಿರೋಧಕತೆ ಗುಣ ಇರುವ ಬಿಳಿ ಎಳ್ಳು ಹಾಗೂ ಉಚ್ಚೆಳ್ಳು ತಳಿಗಳು, ಅಧಿಕ ಮತ್ತು ಸ್ಥಿರವಾದ ಕಾಯಿ ಬಿಡುವ ನುಗ್ಗೆ ತಳಿಗಳ ಅಲಭ್ಯತೆ, ಪಪ್ಪಾಯ ಬೆಳೆಯಲ್ಲಿ ವೈರಾಣು ರೋಗ ನಿರೋಧಕ ತಳಿಗಳ ಅವಶ್ಯಕತೆ ಮತ್ತು ಅಧಿಕ ಗೂಡಿನ ಇಳುವರಿಗೆ ರೇಷ್ಮೆ ಹುಳುವಿನ ತಳಿಗಳ ಸುಧಾರಣೆ ಮತ್ತು ಅನುವಂಶಿಕ ಬದಲಾವಣೆ ಬಗ್ಗೆ ಹೆಚ್ಚಿನ ಸಂಶೋಧನೆ.

ಬೆಳೆ ಉತ್ಪಾದನೆ : ಮರ ಪದ್ಧತಿ ಹಿಪ್ಪುನೇರಳೆಯ ಬೇಸಾಯ ಕ್ರಮಗಳು, ಬಿತ್ತನೆ ನಂತರದ ಕಳೆನಾಶಕಗಳ ಲಭ್ಯತೆ, ಗುಣಿ ಪದ್ಧತಿಯಲ್ಲಿನ ರಾಗಿ ಬೇಸಾಯ ಕ್ರಮಗಳು, ತೋಟಗಾರಿಕೆ ಬೆಳೆಯಲ್ಲಿ ರಸಾವರಿ ತಂತ್ರಜ್ಞಾನದ ಬಗ್ಗೆ ಅಧ್ಯಯನ, ಕೊಳವೆ ಬಾವಿ ನೀರಾವರಿಯಲ್ಲಿ ಕ್ಲೋರೈಡ್ ಮತ್ತು ಫ್ಲೋರೈಡ್ ತೊಂದರೆ, ಹಣ್ಣು ಮತ್ತು ತರಕಾರಿ ಬೆಳೆಗಳಲ್ಲಿ ಸತು ಮತ್ತು ಬೋರಾನ್ ಕೊರತೆ, ತರಕಾರಿ ಬೆಳೆಗಳಲ್ಲಿ ಮಣ್ಣಿನ ತೇವಾಂಶ ಹಿಡಿದಿಡಲು ಹೈಡ್ರೋಜೆಲ್ ಬಳಕೆ ಮತ್ತು ರಾಗಿ ಬೆಳೆಯಲ್ಲಿ ಯಾಂತ್ರಿಕರಣಕ್ಕೆ ಸೂಕ್ತವಾಗುವ ಅಂತರ ಬೇಸಾಯ ಪದ್ಧತಿಗಳ ಅಭಿವೃದ್ಧಿ.

e) Field Visit and Supervision of Farm Trials and Demonstrations: During the year, farm trails were conducted on 15 technologies. Visited 70 farm trails plots spread over in the jurisdictional districts and 38 visits to the demonstration plots were carried out to observe the performance of the technologies and to guide the field functionaries. Farm trails on KMR -316 Ragi variety, GPUF- 3 Navane, GPUP- 28 Bargu, KBGA-15 Amaranthus, use of slag gypsum in groundnut and fodder Oats variety - RO-11-1, paddy varieties KMP-220 and MSN- 99 raksha, Saame variety GPUL-6 and BL-6, application of nitrogen to improve the fodder quality in napier and post emergent weedicides in drum seeded paddy were conducted by the KSDA and KVKs in the respective districts. Visited IPM demonstrations in maize, line sowing of ragi, IFS demonstrations, improve method of sesame cultivation, oil seeds production demonstrations, millets seed production, redgram varietal demonstrations, mango pruning, INM in sugarcane as well as paddy varietal demonstrations organized by KSDA and KVKs.

f) Field Problems and Feedback Presented at ZREP Meetings

Crop Improvement: Improved varieties in ragi for higher fodder and grain yield, drought & lodging tolerant and suitable for mechanized harvesting, high yielding varieties in millets, short duration and drought tolerant in redgram, downy mildew and leaf sport resistant varieties in maize, yellow mosaic resistant varieties in green gram, high yielding and uniform maturity varieties in groundnut, high yielding and disease resistant varieties in sesame and niger, sustainable and high yielding varieties in drumstick, virus resistant varieties in papaya and up gradation and genetic modification in silk worm races for higher cocoon productivity.

Crop Production: Cultivation practices for tree mulberry, non availability of post emergent weedicides, cultivation practices for gunipaddathi ragi, fertigation in horticulture crops, chloride and fluoride problem in bore well water, deficiency of zinc and boron in vegetable and fruits crops, use of hydrogel in vegetable cultivation and development of agronomic practices suitable for mechanization in ragi.

ಬೆಳೆ ಸಂರಕ್ಷಣೆ : ಹಿಪ್ಪುನೇರಳೆ ಬೆಳೆಯಲ್ಲಿ ಡಿ.ಡಿ.ವಿ.ಪಿ.ಗೆ ಪರ್ಯಾಯ ಕೀಟನಾಶಕ, ವಿವಿಧ ಬೆಳೆಗಳಲ್ಲಿ ಸೈನಿಕ ಹುಳು ನಿರ್ವಹಣೆ, ತೋಟಗಾರಿಕಾ ಬೆಳೆಗಳಲ್ಲಿ ಸ್ಪೈರಲಿಂಗ್ ಬಿಳಿನೊಣದ ಹಾವಳಿ, ತರಕಾರಿ ಬೆಳೆಗಳಲ್ಲಿ ಸುರುಳಿ ಪೂಚಿ / ಎಲೆ ಸುರಂಗ ಕೀಟ, ಬಳ್ಳಿ ತರಕಾರಿಗಳಲ್ಲಿ ಹಣ್ಣಿನ ನೊಣ, ಹೆಸರಿನಲ್ಲಿ ಹಳದಿ ನಂಜುರೋಗ, ಅಡಿಕೆ ಮತ್ತು ತೆಂಗಿನಲ್ಲಿ ರುಗೋಸ ಬಿಳಿ ನೊಣದ ಹಾವಳಿ, ಮಾವಿನಲ್ಲಿ ಹಣ್ಣಿನ ನೊಣದ ಹಾವಳಿ, ಬಾಳೆಯಲ್ಲಿ ಬೆಂಕಿ ರೋಗ (ಪನಾಮ ವಿಲ್ಟ್), ಹಿಪ್ಪುನೇರಳೆಯಲ್ಲಿ ಬೇರಿನ ಗಂಟು, ಬೇರಿನ ಕೊಳೆಯುವಿಕೆ ಮತ್ತು ನುಸಿ ಬಾದೆ ಹಾಗೂ ರೋಗ ಮತ್ತು ಕೀಟ ಭಾದೆ ನಿಯಂತ್ರಿಸಲು ಕೋಂಬೋ ಪ್ರಾಡೆಕ್ಟ್ಸ್ ಬಗ್ಗೆ ಹೆಚ್ಚಿನ ಅಧ್ಯಯನ.

ಕೃಷಿ ಇಂಜಿನಿಯರಿಂಗ್ ಮತ್ತು ಸಂಸ್ಕರಣೆ : ಕಿರುಧಾನ್ಯಗಳಲ್ಲಿ ಕಡಿಮೆ ವೆಚ್ಚದ ಬೀಜದ ಹೊಟ್ಟು ತೆಗೆಯುವ, ಪಾಪಿಂಗ್ ಮತ್ತು ಉರಿಯುವ ಯಂತ್ರಗಳು, ಹುಣಸೆಯಲ್ಲಿ ಬೀಜ ಮತ್ತು ನಾರು ಬೇರ್ಪಡಿಸುವ ಯಂತ್ರಗಳ ಕೊರತೆ, ಸಣ್ಣ ಹಿಡುವಳಿದಾರರಿಗೆ ಕೊಯ್ಲು ಮತ್ತು ಸಂಸ್ಕರಣಾ ಯಂತ್ರೋಪಕರಣಗಳ ಅಭಿವೃದ್ಧಿ, ಕಚ್ಚಾ ತೆಂಗಿನ ಎಣ್ಣೆ ಮತ್ತು ಡೆಸಿಕೇಟೆಡ್ ತೆಂಗಿನ ಪುಡಿ ಘಟಕವನ್ನು ಸ್ಥಾಪಿಸಲು ಸಣ್ಣ ಪ್ರಮಾಣದ ಯಂತ್ರಗಳು ಮತ್ತು ತೊಗರಿ ಸಂಸ್ಕರಣೆಯಲ್ಲಿ ಸಣ್ಣ ಪ್ರಮಾಣದ ಯಂತ್ರಗಳ ಕೊರತೆ.

ಇತರೆ : ಮಣ್ಣಿನ ಆರೋಗ್ಯ ರಕ್ಷಣೆ ಮತ್ತು ಸುಧಾರಣೆ ತಂತ್ರಜ್ಞಾನಗಳು, ಬ್ಯಾಚ್ ಡ್ರೈಯಿಂಗ್ ಪದ್ಧತಿಯಲ್ಲಿ ಹಪ್ಪಳ ಒಣಗಿಸಲು ಸೂಕ್ತ ತಾಪಮಾನ ಮತ್ತು ಸಮಯವನ್ನು ನಿಗದಿ ಪಡಿಸಲು ಸಂಶೋಧನೆಯನ್ನು ಕೈಗೊಳುವುದು, ಅಧಿಕ ಮಾರುಕಟ್ಟೆ ಅವಕದಿಂದ ಟೊಮಾಟೋ ಮತ್ತು ಮಾವು ಬೆಲೆ ಕುಸಿತ, ಪರಿಕರಗಳ ಗುಣಮಟ್ಟ ಸುಧಾರಿಸುವುದು, ಪ್ರಮಾಣ ಸ್ಥಿರಪಡಿಸುವುದು ಮತ್ತು ದರಗಳನ್ನು ಕಡಿಮೆಗೊಳಿಸುವುದು ಮತ್ತು ಗ್ರಾಹಕರು ಸಾವಯವ ಉತ್ಪನ್ನಗಳ ಗುಣ ಪರಿಶೀಲಿಸಲು ಡಯಾಗ್ನಾಸ್ಟಿಕ್ ಲ್ಯಾಬ್ ಮಾದರಿಯಲ್ಲಿ ಕೇಂದ್ರಗಳನ್ನು ಸ್ಥಾಪಿಸಲು ತಂತ್ರಜ್ಞಾನ ಅಭಿವೃದ್ಧಿ.

4.4.11 ಕೃಷಿ ವಿಜ್ಞಾನ ಕೇಂದ್ರಗಳು

ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ದೇಶದಲ್ಲಿ ಕೃಷಿ ವಿಜ್ಞಾನ ಕೇಂದ್ರಗಳಿಗೆ ಜಾಲವನ್ನು ರಚಿಸಿದೆ. ತಂತ್ರಜ್ಞಾನಗಳ ಪರಿಶೀಲನೆ, ಪರಿಷ್ಕರಣೆ ಹಾಗೂ ಪ್ರಾತ್ಯಕ್ಷಿಕೆಯು ಕೃಷಿ ವಿಜ್ಞಾನ ಕೇಂದ್ರಗಳ ಉದ್ದೇಶವಾಗಿದೆ. ಕೃಷಿ ವಿಜ್ಞಾನ ಕೇಂದ್ರಗಳು, ಕ್ಷೇತ್ರ ಪರೀಕ್ಷೆ, ಮುಂಚೂಣಿ ಪ್ರಾತ್ಯಕ್ಷಿಕೆ ಹಾಗೂ ತರಬೇತಿ ಚಟುವಟಿಕೆಗಳನ್ನು ಒಳಗೊಂಡಿದೆ. ಕೇಂದ್ರಗಳು ಜಿಲ್ಲೆಯ ಕೃಷಿ ಆರ್ಥಿಕತೆಯನ್ನು ಸುಧಾರಿಸಲು, ಸಾರ್ವಜನಿಕ, ಖಾಸಗಿ ಮತ್ತು ಸ್ವಯಂಸೇವ ವಲಯಗಳಲ್ಲಿ ಬೆಂಬಲ ಉಪಕ್ರಮಗಳಾಗಿ ಕೃಷಿ ತಂತ್ರಜ್ಞಾನಗಳ ಜ್ಞಾನ ಕೇಂದ್ರ ಮತ್ತು ಸಂಪನ್ಮೂಲ ಕೇಂದ್ರವಾಗಿಯೂ ಸಹ ಕಾರ್ಯನಿರ್ವಹಿಸುತ್ತವೆ. ಪ್ರಸ್ತುತ ಮುಂದೆ ಸೂಚಿಸಿದ ಉದ್ದೇಶಗಳೊಂದಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಡಿಯಲ್ಲಿ ಏಳು ಕೃಷಿ ವಿಜ್ಞಾನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಉದ್ದೇಶಗಳು

ಅ) ವಿವಿಧ ಬೇಸಾಯ ವ್ಯವಸ್ಥೆಗಳಡಿಯಲ್ಲಿ ಸ್ಥಳ ನಿರ್ದಿಷ್ಟ ಕೃಷಿ ತಂತ್ರಜ್ಞಾನಗಳನ್ನು ಗುರುತಿಸಲು ಕ್ಷೇತ್ರದಲ್ಲಿಯೇ ಪರೀಕ್ಷೆಗಳನ್ನು ಕೈಗೊಳ್ಳುವುದು

ಆ) ವಿವಿಧ ಬೆಳೆಗಳ ಉತ್ಪಾದನಾ ಸಾಮರ್ಥ್ಯ ಮತ್ತು ಉದ್ಯಮ ಗಳನ್ನು ಸ್ಥಾಪಿಸಲು ರೈತರ ಜಮೀನುಗಳಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು

Crop Protection: Alternate chemical for DDVP for pest management in mulberry, control of army worm in different crops, spiraling white flies in horticulture crops, leaf miners in vegetables, fruit flies in vegetable creepers, yellow mosaic in green gram, rugosa white flies in areca nut and coconut, fruit flies in mango, panama wilt in banana and root knot, decaying of roots, mites problem in mulberry, development of combo products for disease and pest management.

Agricultural Engineering and Processing: Low cost de husking, popping and rosting equipments for millets, seed and husk separators in tamarind, harvesting and processing equipments for small farmers, establishment of coconut oil extractor & desiccators and small scale redgram processing equipments.

Others: Protection of soil health and soil improvement technologies, standardization of temperature and duration to dry pappads, crash in the price of tomato and mango due to excessive inflow in the market, maintaining quality and quantity of agri inputs and reduce the price of agri inputs, establishment of diagnostic labs for testing the quality of organic produce by the customers.

4.4.11 Krishi Vigyna Kendras (KVKs)

The Indian Council of Agricultural Research (ICAR) has created network of KVKs in the country. The KVKs aims at assessment, refinement and demonstration of technologies & products. The activities of KVKs include on-farm testing, frontline demonstrations and training. The KVKs also work as resource and knowledge centre of agricultural technology for supporting initiatives of public, private and voluntary sectors for improving the agricultural economy of the district. At present seven KVKs are working under the jurisdiction of UAS-B with the following objectives.

Objectives

a) Conducting on-farm testing to identify the location specificity of agricultural technologies under various farming systems

b) Organizing frontline demonstrations to establish production potentials of various crops and enterprises on the farmer's field

ಇ) ರೈತರಿಗೆ ಆಧುನಿಕ ಕೃಷಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ, ತಂತ್ರಜ್ಞಾನ ಪರಿಶೀಲನೆ, ಪರಿಷ್ಕರಣೆ ಹಾಗೂ ಪ್ರಾತ್ಯಕ್ಷಿಕತೆಯ ಕೌಶಲ ಮತ್ತು ಅರಿವು ವೃದ್ಧಿಸಿಕೊಳ್ಳಲು ಮತ್ತು ವಿಸ್ತರಣಾ ಸಿಬ್ಬಂದಿಗೆ ಮೂಂಚೂಣಿ ಕ್ಷೇತ್ರದಲ್ಲಿ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಲು ಅವರನ್ನು ಪ್ರೋತ್ಸಾಹಿಸಲು ತರಬೇತಿಗಳನ್ನು ಆಯೋಜಿಸುವುದು

ಈ) ಸೂಕ್ತ ವಿಸ್ತರಣಾ ಕಾರ್ಯಕ್ರಮಗಳ ಮೂಲಕ ವಿವಿಧ ಗ್ರಾಹಕರ ಮಧ್ಯ ಸುಧಾರಿತ ಕೃಷಿ ತಂತ್ರಜ್ಞಾನಗಳಿಗೆ ಸಂಬಂಧಿಸಿದಂತೆ ಅರಿವು ಮೂಡಿಸುವುದು

ಉ) ಗುಣಮಟ್ಟದ ಬೀಜ, ಬಿತ್ತನೆ ಸಾಮಗ್ರಿ, ಜಾನುವಾರು ತಳಿಗಳು, ಪ್ರಾಣಿಜನ್ಯ ಉತ್ಪನ್ನಗಳು, ಜೈವಿಕ ಉತ್ಪನ್ನಗಳನ್ನು ಇತ್ಯಾದಿ ವಿವಿಧ ಗ್ರಾಹಕರ ಬೇಡಿಕೆಯ ಮೇರೆಗೆ ಉತ್ಪಾದಿಸಿ ವಿತರಿಸುವುದು

ಊ) ಜಿಲ್ಲೆಯ ಕೃಷಿ ಆರ್ಥಿಕತೆಯನ್ನು ಸುಧಾರಿಸಲು ಸಾರ್ವಜನಿಕ, ಖಾಸಗಿ ಹಾಗೂ ಸ್ವಯಂ ಸೇವಾ ವಲಯಗಳಿಗೆ ಕೃಷಿ ತಂತ್ರಜ್ಞಾನ ಬೆಂಬಲ ಒದಗಿಸಲು ಸಂಪನ್ಮೂಲ ಹಾಗೂ ಜ್ಞಾನ ಕೇಂದ್ರಗಳಾಗಿ ಕಾರ್ಯನಿರ್ವಹಿಸುವುದು

ಈ ಮೇಲಿನ ಉದ್ದೇಶಗಳ ಹಿನ್ನೆಲೆಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಏಳು ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಜಿಲ್ಲಾವಾರು ಇಂತಿವೆ; ಹಾಸನ–ಕಂದಲಿ, ತುಮಕೂರು–ಕೋನೆಹಳ್ಳಿ, ಚಾಮರಾಜನಗರ–ಹರದನಹಳ್ಳಿ, ಮಂಡ್ಯ–ವಿ.ಸಿ. ಫಾರಂ, ಬೆಂಗಳೂರು ಗ್ರಾಮೀಣ–ಹಾಡೋನಹಳ್ಳಿ, ಚಿಕ್ಕಬಳ್ಳಾಪುರ–ಚಿಂತಾಮಣಿ ಹಾಗೂ ರಾಮನಗರ–ಮಾಗಡಿ.

ಈ ಕೃಷಿ ವಿಜ್ಞಾನ ಕೇಂದ್ರಗಳು ವರದಿಯ ಅವಧಿಯಲ್ಲಿ ಈ ಮುಂದಿನ ಚಟುವಟಿಕೆಗಳನ್ನು ಕೈಗೊಂಡಿವೆ.

4.4.11.1 ನಡೆಸಲಾದ ಕ್ಷೇತ್ರ ಪರೀಕ್ಷೆ

ವಿವಿಧ ಬೇಸಾಯ ವ್ಯವಸ್ಥೆಗಳಡಿಯಲ್ಲಿ ಸ್ಥಳ ನಿರ್ದಿಷ್ಟ ಕೃಷಿ ತಂತ್ರಜ್ಞಾನ ಗಳನ್ನು ಗುರುತಿಸಲು ಕ್ಷೇತ್ರದಲ್ಲಿಯೇ ಪರೀಕ್ಷೆಗಳನ್ನು ಕೈಗೊಳ್ಳಲಾಗಿತ್ತು. 2020–21ರಲ್ಲಿ, 107 ರೈತರನ್ನು ಒಳಗೊಂಡಂತೆ 24.28 ಹೆಕ್ಟೇರ್. ಮತ್ತು 06 ಘಟಕಗಳು, ವಿವಿಧ ವಿಷಯಗಳಲ್ಲಿ 27 ತಂತ್ರಜ್ಞಾನ ಗಳನ್ನು ಪರಿಷ್ಕರಿಸಲಾಗಿದೆ. ವಿವರಗಳನ್ನು ಅನುಬಂಧ 3.11 ರಲ್ಲಿ ನೀಡಲಾಗಿದೆ.

ಕ್ಷೇತ್ರ ಪರೀಕ್ಷೆಯ ಫಲಿತಾಂಶಗಳು

1. ಆಲೂಗಡ್ಡೆ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆಯ ಪರಿಶೀಲನೆ: ಸುಣ್ಣ ಮತ್ತು ಗಂಧಕ ಪೋಷಕಾಂಶಗಳನ್ನು ನೀಡಿರುವ ಪರಿಣಾಮವಾಗಿ ಉತ್ಪನ್ನದ ಗುಣಮಟ್ಟ (ಗೆಡ್ಡೆಗಳ ಸಂಖ್ಯೆ ಮತ್ತು ತೂಕ) ಉತ್ತಮಗೊಂಡು ಗೆಡ್ಡೆ ಕೊಳೆರೋಗದ ಬಾಧೆ ಕಡಿಮೆಯಾಗಿದೆ (6.10 %). ಆದಾಯ ವೆಚ್ಚ ಅನುಪಾತ ಹೆಚ್ಚಾಗಿರುತ್ತದೆ (1: 3.70).

2. ನ್ಯಾನೋ ಸಾರಜನಕ ಬಳಕೆಯಿಂದ ಆಲೂಗೆಡ್ಡೆ ಬೆಳೆಯ ಮೇಲೆ ಪರಿಣಾಮದ ಪರಿಶೀಲನೆ : ಆಲೂಗಡ್ಡೆ ಬೆಳೆಯ ಮೇಲೆ

c) Organizing need based training for farmers to update their knowledge and skills in modern agricultural technologies related to technology assessment, refinement and demonstration and training of extension personnel to orient them in the frontier areas of technology development

d) Creating awareness about improved agricultural technologies among various clientels through an appropriate extension programmes

e) Production of quality seeds, planting material, livestock breeds, animal products, bio-products etc. as per the demand and supply the same to different clienteles

f) Work as resource and knowledge centre of agricultural technologies to support the initiatives of public, private and voluntary sectors for improving the agricultural economy of the district

Keeping in view the above objectives, seven KVKs have been established under the jurisdiction of UAS, Bangalore in the districts viz., Kandali (Hassan), Konehally (Tumakuru), Haradanahalli (Chamarajanagar), V.C. Farm (Mandya), Hadonahalli (Bengaluru Rural), Chintamani (Chickballapur) and Magadi (Ramanagara).

The following activities were carried out by seven KVKs during the period under report

4.4.11.1On Farm Testing (OFTs)

On-Farm Testings were conducted to identify the location specificity of agricultural technologies under various farming systems. About 27 technologies were assessed under different disciplines/areas during 2020-21 involving 107 farmers in an area of 24.28 ha and 6 units. The details are furnished in the Annexure 3.11

Findings of On Farm Testings

1. Assessment of nutrient management in Potato: As a result of additional application of calcium and sulphur nutrition, resulted increase in yield and marketable quality of the tubers. Besides reduction in incidence of soft rot (6.10 %) was also noticed. Recorded the cost benefit ratio of 3.70 highest compared to other treatments.

2. Assessment of spray of Nano Nitrogen particles on yield of Potato: Spray of nanonitrogen particles

ನ್ಯಾನೋಸಾರಜನಕದ ಸಿಂಪರಣೆಯಿಂದ ಶೇ. 29.5% ಗೆಡ್ಡೆಯ ಇಳುವರಿಯು ರೈತರ ಪದ್ದತಿಗಿಂತ ಹೆಚ್ಚು ಕಂಡು ಬಂದಿದೆ

3. ಕಡಲೆ ಬೆಳೆಯಲ್ಲಿ ಸೊರಗು ರೋಗ ನಿರೋಧಕ ತಳಿಯ ಪರಿಶೀಲನೆ: ಕಡಲೆ ತಳಿ ಸೂಪರ್ ಅನ್ನಿಗೆರೆ 1 ಸೊರಗು ರೋಗ ನಿರೋಧಕತೆ ಹೊಂದಿದ್ದು, ಸ್ಥಳೀಯ (ಜಾಕಿ–ರೈತರ ಪದ್ದತಿ) ತಳಿಗಿಂತ ಉತ್ತಮ ಇಳುವರಿ 9.86 ಕ್ವಿ/ಹೆ ದಾಖಲಿಸಿದೆ.

4. ತಡವಾದ ಮುಂಗಾರಿಗೆ ಅಧಿಕ ಇಳುವರಿ ಮತ್ತು ಆದಾಯಕ್ಕಾಗಿ ನವಣೆ ತಳಿಗಳ ಪರೀಶೀಲನೆ: ಡಿ.ಎಚ್.ಎಫ್.ಟಿ.–109–3 ತಳಿಯು ಉದ್ದ ತೆನೆ ಹೊಂದಿದ್ದು ಹೆಚ್ಚಿನ ಇಳುವರಿ ನೀಡುತ್ತದೆ ಹಾಗೂ ತಡವಾದ ಮುಂಗಾರಿಗೆ ಬಿತ್ತನೆ ಮಾಡಿದರೂ ಬೆಳೆಯ ಬಹುದಾಗಿದೆ.

5. ಮೆಣಸಿನ ಕಾಯಿಯ ಸಂಕರಣ ತಳಿಗಳಾದ ಕೆ.ಬಿ.ಸಿ.ಹೆಚ್ 1 ಮತ್ತು ಅರ್ಕಾ ಖ್ಯಾತಿಯ ಮರುಪರಿಶೀಲನೆ : ಕೆ.ಬಿ.ಸಿ.ಹೆಚ್ 1 ಹೈಬ್ರೀಡ್ ತಳಿಯಿಂದ ಹೆಚ್ಚಿನ ನಿವ್ವಳ ಆದಾಯ ಬಂದಿರುತ್ತದೆ ಮತ್ತು ಬೂದಿ, ಚಿಬ್ಬು ರೋಗ, ದುಂಡಾಣುವಿನ ಸೊರಗು ರೋಗದ ಭಾದೆ ಕಡಿಮೆ ಕಂಡುಬಂದಿದೆ.

6. ಬರ ಪೀಡಿತ ಪ್ರದೇಶದಲ್ಲಿ ತೊಗರಿ ತಳಿಗಳ ಮರುಪರಿಶೀಲನೆ : ಹೆಚ್ಚಿನ ಇಳುವರಿಯು ಬಿ.ಆರ್.ಜಿ. 2 ರಲ್ಲಿ ಕಂಡುಬಂದಿದ್ದು, ಆದರೆ ಬೇರೆ ತಳಿಗಳಿಗೆ ಹೋಲಿಸಿದರೆ 25 ರಿಂದ 30 ದಿನಗಳ ಹೆಚ್ಚಿನ ಅವಧಿ ಗಮನಿಸಲಾಗಿದೆ. ಪಲ್ಸ್ ಮ್ಯಾಜಿಕ್ ಸಿಂಪರಣೆ ಯಿಂದ ಹೂ ಉದುರುವಿಕೆಯು ಕಡಿಮೆಯಾಗಿದೆ.

7. ತರಕಾರಿಗಾಗಿ ತೊಗರಿಯ ಸೂಕ್ತ ತಳಿಗಳ ಪರಿಶೀಲನೆ : ತೊಗರಿಯ ಉಜ್ವಲ (ಪಿ.ಜೆ.ಟಿ.ಎಸ್.ಎ.ಯು, ತೆಲಂಗಾಣ) ತಳಿಯು, 130–140 ದಿನಗಳಲ್ಲಿ 33.2 ಕ್ವಿ/ಹೆ ಇಳುವರಿಯನ್ನು ನೀಡಿದ್ದು, ಲಾಭ ವೆಚ್ಚ ಅನುಪಾತವು 1 : 2.58 ರಷ್ಟಿದೆ.

8. ಹೀರೆಕಾಯಿಯಲ್ಲಿ ಮೊಸಾಯಿಕ್ ನಂಜುರೋಗದ ಹತೋಟಿ ಸಮಗ್ರ ನಿರ್ವಹಣಾ ಕ್ರಮಗಳ ಪರಿಶೀಲನೆ : ಕ್ಷೇತ್ರ ಪ್ರಯೋಗದಲ್ಲಿ ಐ.ಐ.ವಿ.ಆರ್, ವಾರಣಾಸಿಯ ತಂತ್ರಜ್ಞಾನವನ್ನು ಬಳಸಿದ್ದು ನಂಜು ರೋಗದ ಬಾಧೆ ಕಡಿಮೆ ಇದ್ದು, 33.76 ಟ/ಹೆ. ಇಳುವರಿಯು ಕಂಡು ಬಂದಿದ್ದು, ಲಾಭ ವೆಚ್ಚ ಅನುಪಾತವು 4.63 ರಷ್ಟಿದೆ.

9. ಹಿಪ್ಪುನೇರಳೆ ಬೆಳೆಯಲ್ಲಿ ಬೇರು ಗಂಟು ರೋಗದ ಪರಿಸರ ಸ್ನೇಹಿ ನಿರ್ವಹಣಾ ಕ್ರಮಗಳ ಪರಿಶೀಲನೆ : ಹಿಪ್ಪುನೇರಳೆ ಬೇರುಗಂಟು ಜಂತುವಿನ ನಿರ್ವಹಣೆಗೆ ಯುಎಎಸ್(ಬಿ) ಸೂಕ್ಷ್ಮಾಣುಜೀವಿ ಸಂಕೀರ್ಣ @ 40 ಮಿ.ಲೀ/ಲೀ ಬಳಸುವುದರಿಂದ ಜಂತುವಿನ ಸಂಖ್ಯೆ (77.57%) ಗಮನಾರ್ಹ ಇಳಿಕೆ ಕಂಡುಬಂದಿದೆ, ಎಲೆ ಇಳುವರಿ 40.97% ಮತ್ತು ಗೂಡಿನ ಇಳುವರಿ 48.34% ರಷ್ಟು ಹೆಚ್ಚಾಗಿದೆ.

10. ಹಿಪ್ಪುನೇರಳೆಯಲ್ಲಿ ಪೋಷಕಾಂಶಗಳ ನಿರ್ವಹಣೆಗಾಗಿ ಪರಿಸರ ಸ್ನೇಹಿ ಎಲೆ ಸಿಂಪರಕಗಳ ಪರಿಶೀಲನೆ : ಕಟಾವಾದ 25–30 ದಿನಗಳ ನಂತರ ವೇಸ್ಟ್ ಡೀಕಾಂಪೋಸರ್ ಸಿಂಪಡಿಸುವುದರಿಂದ ಹಿಪ್ಪುನೇರಳೆ ಎಲೆಗಳ ಗುಣಮಟ್ಟ ಹೆಚ್ಚಾಗುತ್ತದೆ, ಎಲೆ ಇಳುವರಿ

on potato crop has resulted in 29.50% increase in tuber yield compared to farmers practice

3. Assessment of Bengal gram varieties against wilt: The Super Annigeri variety resistant to wilt and recorded 9.86 q/ha when compared with the farmer practice (JACKI)

4. Assessment of Foxtail Millet Varieties during Late Kharif for Higher Yield and Income: DHFT 109-3 variety has shown very good growth and yield parameters, can be used under contingency cropping system under late kharif season

5. Assessment of Chilli hybrids KBCH-1and Arka harita: Chilli hybrid KBCH-1 has obtained higher net return and reduced the disease incidence of powdery mildew, anthracnose and wilt.

6. Assessment of Redgram Varieties for Terminal Drought conditions: The higher yield was observed in BRG -2 variety compared to short duration varieties at the cost of 25 to 35 days more duration. Resulted in 25.63 % increase in yield besides reduced incidence of pod borer through adoption of insect trap.

7. Assessment of suitable redgram varieties for vegetable purpose: Ujjwala variety (PJTSAU, Telangana) recorded higher yield compared to BRG-1 (long duration variety – Direct sowing) 33.2 q/ha and the Cost Benefit ratio is 2.58.

8. Assessment on management of mosaic virus in ridge gourd through integrated approach: Maximum yield and higher net returns was recorded with IIVR, Varanasi technology through integrated disease management practices. The incidence of Mosaic Virus is less and yielded 33.73 t/ha with cost benefit ratio is 4.63.

9. Assessment of eco-friendly practices for management of root knot nematodes in mulberry: Using UAS(B) microbial consortium @ 40 ml/l resulted in significant reduction in nematode population (77.57 %), leaf yield increased by 40.97 % and Cocoon yield by 48.34 %.

10. Assessment of foliar nutritional management in mulberry through eco friendly approach: Using waste decomposer spray at 25-30 DAP enhances mulberry leaf quality (leaf nutrients like N, P, K,

(111.91 ಕ್ವಿ/ಹೆ/ಬೆಳೆ) ಹಾಗು ಗೂಡಿನ ಉತ್ಪಾದಕತೆ (454.60 ಕೆಜಿ/ಹೆ/ಬೆಳೆ) ಹೆಚ್ಚಾಗಿದೆ.

11. ರೇಷ್ಮೆ ತ್ಯಾಜ್ಯಗಳ ಕಾಂಪೋಸ್ಟ್ ಕ್ರಿಯೆಯಲ್ಲಿ ವಿಭಿನ್ನ ಕಾಂಪೋಸ್ಟ್ ಕಲ್ಚರ್‌ಗಳ ಪರಿಶೀಲನೆ : ರೇಷ್ಮೆ ಕೃಷಿಯಿಂದ ದೊರೆಯುವ ಕಡ್ಡಿ ಮತ್ತು ಹಿಕ್ಕೆಯನ್ನು ಕಾಂಪೋಸ್ಟ್ ಆಗಿ ತಯಾರಿಸಲು ರಾಷ್ಟ್ರೀಯ ಸಾವಯವ ಕೃಷಿ ಕೇಂದ್ರ (ಎನ್.ಸಿ.ಓ.ಎಫ್.), ಘಜಿಯಾಬಾದ್‌ನ ವೇಸ್ಟ್‌ಡೀಕಾಂಪೋಸರ್ ಅಥವಾ ಕೃ.ವಿ.ವಿ. ಬೆಂಗಳೂರು, ಕೃಷಿ ಸೂಕ್ಷ್ಮಜೀವಶಾಸ್ತ್ರ ವಿಭಾಗದ ಕಾಂಪೋಸ್ಟ್ ಕಲ್ಚರ್ (ಸೂಕ್ಷ್ಮಾಣುಜೀವಿಗಳ ಸಂಕೀರ್ಣ) ಬಳಸುವುದರಿಂದ ಅತೀ ಶೀಘ್ರಗತಿಯಲ್ಲಿ (80–90 ದಿನ) ಉತ್ತಮ ಗುಣಮಟ್ಟದ ಕಾಂಪೋಸ್ಟ್ (1.5–2.9% ಸಾರಜನಕ, 0.5–0.9% ರಂಜಕ, 1.5–2.0% ಪೊಟ್ಯಾಷ್) ಅನ್ನು ಪಡೆಯಬಹುದು.

4.4.11.2. ಮುಂಚೂಣಿ ಪ್ರಾತ್ಯಕ್ಷಿಕೆಗಳು

ಕೃಷಿ ವಿಜ್ಞಾನ ಕೇಂದ್ರಗಳು, ರುಜುವಾತಾದ ನೂತನ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆಗಾಗಿ ರೈತರ ಜಮೀನುಗಳಲ್ಲಿ ಮಂಚೂಣಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಿತ್ತು. ಆಯೋಜಿಸಿದ ಮಂಚೂಣಿ ಪ್ರಾತ್ಯಕ್ಷಿಕೆಗಳ ವಿವರ ಗಳನ್ನು ಅನುಬಂಧ 3.12 ರಲ್ಲಿ ನೀಡಲಾಗಿದೆ. ಬೆಳೆ ಸುಧಾರಣೆ, ಉತ್ಪಾದನೆ, ಸಂರಕ್ಷಣೆ, ತೋಟಗಾರಿಕೆ, ಗೃಹ ವಿಜ್ಞಾನ, ಕೃಷಿ ಇಂಜಿನಿಯರಿಂಗ್, ಪ್ರಾಣಿ ವಿಜ್ಞಾನ ಇತ್ಯಾದಿ ಕ್ಷೇತ್ರಗಳಲ್ಲಿ 288.55 ಹೆಕ್ಟೇರ್ ಪ್ರದೇಶದಲ್ಲಿ ಮತ್ತು 26 ಘಟಕಗಳಲ್ಲಿ 112 ಮಂಚೂಣಿ ಪ್ರಾತ್ಯಕ್ಷಿಕೆಗಳನ್ನು 1023 ರೈತರ ಸಹಭಾಗಿತ್ವದಲ್ಲಿ ಆಯೋಜಿಸಲಾಗಿತ್ತು.

ಮಂಚೂಣಿ ಪ್ರಾತ್ಯಕ್ಷಿಕೆಗಳ ಮುಖ್ಯಾಂಶಗಳು

1. ಉದ್ದಿನ ತಳಿಯಾದ ಎಲ್.ಬಿ.ಜಿ. 791 ರ ಪದ್ಧತಿ ಪ್ರಾತ್ಯಕ್ಷಿಕೆ : ರೈತರು ಬೆಳೆಯುವ ತಳಿಗೆ (ಶೇ. 66.6) ಹೋಲಿಸಿದಾಗ ಎಲ್.ಬಿ.ಜಿ. 791 ತಳಿಯಲ್ಲಿ ಹಳದಿ ನಂಜಾಣು ರೋಗವು ಕಂಡುಬಂದಿರುವುದಿಲ್ಲ. ಇದರಿಂದ ಶೇ. 95.7 ರಷ್ಟು ಹೆಚ್ಚಿನ ಇಳುವರಿಯನ್ನು ನೀಡಿರುತ್ತದೆ.

2. ಮುಸುಕಿನ ಜೋಳದಲ್ಲಿ ಸಮಗ್ರ ಪೀಡೆ ಮತ್ತು ರೋಗ ನಿರ್ವಹಣೆ: ಮುಸುಕಿನ ಜೋಳದಲ್ಲಿ ಸಮಗ್ರ ಪೀಡೆ ಮತ್ತು ರೋಗ ನಿರ್ವಹಣೆ ಪದ್ಧತಿಗಳನ್ನು ಅನುಸರಿಸಿ ರೈತರ ತಾಕುಗಳಿಗೆ (ಶೇ. 44.4 ಮತ್ತು ಶೇ. 22.5) ಹೋಲಿಸಿದಾಗ ಪ್ರಾತ್ಯಕ್ಷಿಕೆ ತಾಕುಗಳಲ್ಲಿ ಬಿತ್ತನೆಯಾದ 30 ಮತ್ತು 60 ದಿನಗಳಲ್ಲಿ ಲದ್ದಿ ಹುಳುವಿನ ಬಾಧೆ ಶೇ. 30.31 ಮತ್ತು 8.03 ರಷ್ಟು ಕಂಡು ಬಂದಿರುತ್ತದೆ ಮತ್ತು ಇಳುವರಿಯಲ್ಲಿ ಶೇ. 22.29 ರಷ್ಟು ಹೆಚ್ಚಳ ಕಂಡುಬಂದಿದೆ. ಜೊತೆಗೆ ಕಳೆನಾಶಕದ ಬಳಕೆಯಿಂದ ಎಕರೆವಾರು ಕಳೆ ನಿರ್ವಹಣಾ ಖರ್ಚಿನಲ್ಲಿ ರೂ.2000 ಉಳಿತಾಯವಾಗಿದೆ.

3. ಸೂರ್ಯಕಾಂತಿ ಸಂಕರಣ ತಳಿ ಕೆ.ಬಿ.ಎಸ್.ಹೆಚ್. 78 ರ ಪದ್ಧತಿ ಪ್ರಾತ್ಯಕ್ಷಿಕೆ : ರೈತರು ಬೆಳೆಯುವ ತಳಿಗಿಂತ (95–100 ದಿನಗಳು) ಕೆ.ಬಿ.ಎಸ್.ಹೆಚ್. 78 ಒಂದು ಅಲ್ಪಾವಧಿ

Ca, Mg, Zn, S, total protein, total sugars and moisture retention capacity), leaf yield (111.91 q/ha/crop) as well as cocoon productivity (454.60 kg/ha/crop) in silkworm.

11. Assessment of different compost cultures in composting of sericulture wastes: Composting of sericulture waste using compost culture from Department of Microbiology, UAS, Bengaluru or waste decomposer from National Centre of Organic Farming (NCOF), Ghaziabad results in speed up of decomposition process and obtain good quality compost (1.5-1.9 % N, 0.5-0.9 % P, 1.5-2.0 % K) within 80-90 days.

4.4.11.2 Front Line Demonstrations (FLDs)

The Krishi Vigyan Kendras conducted Front Line Demonstrations to demonstrate new proven technologies on farmers fields. The details of front line demonstrations conducted are furnished in Annexure 3.12. As many as 112 Front line demonstrations were conducted in an area of 288.55 ha. and 26 units covering 1023 farmers in the field of crop improvement, production, protection, horticulture, home science, engineering, animal science, etc.

Highlights of Frontline Demonstrations

1. Demonstration of blackgram variety LBG-791: The yellow mosaic tolerant Blackgram variety LBG-791 along with ICM practices, has recorded higher grain yield of 95.7% and recorded no incidence of YMV as compared to farmers practices (66.6%). .

2. Integrated pest and disease management in Maize: Adoption of IPDM practices in maize resulted in reduced incidence of fall army worm @ 30 & 60 days after sowing (30.31% and 8.03%) as compared to farmers practice (44.4% and 22.2%). Further, 22.29% of grain yield was increased as compared to farmers practice. Application of pre-emergent herbicide @ 1 kg a.i./ha during 3 DAS, has helped the farmer in reducing the cost of weeding by ¹ 5000/ha.

3. Demonstration of Sunflower Hybrid KBSH-78: Under less rainfall conditions KBSH-78 has performed well due to its short duration nature

ತಳಿಯಾಗಿದ್ದು (80–85 ದಿನಗಳು) ಮಳೆಯ ಪ್ರಮಾಣ ಕಡಿಮೆಯಾದರು ಬರ ತಡೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಜೊತೆಗೆ ಬೋರಾಕ್ಸ್ ಬಳಕೆಯಿಂದ ತಟ್ಟೆಯ ಮಧ್ಯಭಾಗದ ಕಾಳುಗಳು ಸಂಪೂರ್ಣವಾಗಿ ತುಂಬಿರುತ್ತದೆ. ಇಳುವರಿಯಲ್ಲಿ ಶೇ. 265.3 ರಷ್ಟು ಹೆಚ್ಚಳ ಕಂಡು ಬಂದಿರುತ್ತದೆ.

4. ಬೆಳ್ಳುಳ್ಳಿ ಬೆಳೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ : ಸಮಗ್ರ ಪೋಷಕಾಂಶಗಳ ನಿರ್ವಹಣಾ ಕ್ರಮಗಳ ಅಳವಡಿಕೆಯಿಂದ ಇಳುವರಿಯಲ್ಲಿ ಹೆಚ್ಚಳವಾಗಿದೆ (17.9 %). ಗಂಧಕ ಪೋಷಣೆ ಯಿಂದ ಗುಣಮಟ್ಟ (ಗಾತ್ರ, ವಾಸನೆ ಮತ್ತು ಗಟ್ಟಿತನ) ಉತ್ತಮವಾಗಿದೆ.

5. ಆಲೂಗೆಡ್ಡೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ : ಪರಿಚಯಿಸಿದ ಕುಫ್ರೀ ಜ್ಯೋತಿ ತಳಿಯು ರೈತರು ಬಳಸುವ ತಳಿಗಿಂತ 22 ದಿನ ಬೇಗನೆ ಕಟಾವಿಗೆ ಬಂದಿರುತ್ತದೆ. ರೈತರು ಆರೋಗ್ಯಕರ ಬಿತ್ತನೆ ಗೆಡ್ಡೆಗಳ ಆಯ್ಕೆ ಬಗ್ಗೆ ತಿಳುವಳಿಕೆ ಪಡೆದಿರುತ್ತಾರೆ. ಜೈವಿಕ ಗೊಬ್ಬರಗಳು ಮತ್ತು ಅರ್ಕಾ ಸೂಕ್ಷ್ಮಜೀವಗಳ ಮಿಶ್ರಣ ಬಳಕೆಯು ಪರಿಣಾಮವಾಗಿ ಉತ್ತಮ ಬೆಳವಣಿಗೆ ಕಂಡುಬಂದಿದ್ದು ಗೆಡ್ಡೆ ಕೊಳೆ ರೋಗದ ಬಾಧೆ ಕಡಿಮೆಯಾಗಿದೆ (6.9 %). ಇದರಿಂದ ಇಳುವರಿ ಮತ್ತು ಗುಣಮಟ್ಟ ಅಭಿವೃದ್ಧಿಯಾಗಿದೆ (18.6 %).

6. ಮಳೆಯಾಶ್ರಿತ ಪ್ರದೇಶಗಳಲ್ಲಿ ಬಹುಕಟಾವಿನ ಮೇವಿನ ಜೋಳದ ತಳಿ ಸಿ.ಓ.ಎಫ್.ಎಸ್. 31 ನ್ನು ಜನಪ್ರಿಯಗೊಳಿಸುವುದು : ರೈತರು ಬೆಳೆಯುವ ಏಕಕಟಾವಿನ ಮೇವಿನ ಜೋಳದ ತಳಿಗೆ ಹೋಲಿಸಿದರೆ ಬಹುಕಟಾವಿನ ಮೇವಿನ ಜೋಳದ ತಳಿ ಸಿ.ಓ.ಎಫ್.ಎಸ್. 31 ಮಳೆ ಪ್ರಮಾಣ ಕಡಿಮೆಯಾದರು ಶೇ. 43.57 ರಷ್ಟು ಹೆಚ್ಚಿನ ಉತ್ಕೃಷ್ಟವಾದ ಮತ್ತು ಹಸಿರು ಮೇವಿನ ಇಳುವರಿಯನ್ನು ನೀಡಿರುತ್ತದೆ.

7. ಹೈನು ರಾಸುವಿನಲ್ಲಿ ಕರು ಹಾಕುವ ಮೊದಲ ಮತ್ತು ನಂತರದ ನಿರ್ವಹಣೆ : ಬೈಪಾಸ್ ಫ್ಯಾಟ್ ಮತ್ತು ಖನಿಜ ಮಿಶ್ರಣದ ಬಳಕೆಯಿಂದ ಹಾಲಿನ ಇಳುವರಿ ಮತ್ತು ಗುಣಮಟ್ಟವು ಅಧಿಕವಾಗಿದ್ದು, ರೈತರಿಗೆ ಶೇ. 138.17 ರಷ್ಟು ಆದಾಯವು ಹೆಚ್ಚಾಗಿದೆ.

8. ರಾಗಿ ಬೆಳೆಯಲ್ಲಿ ಕೆ.ಎಮ್.ಆರ್. 630 ತಳಿಯ ಪ್ರಾತ್ಯಕ್ಷಿಕೆ : ಕೆಎಂ.ಆರ್. 630 ರಾಗಿ ತಳಿಯು ಪ್ರಾತ್ಯಕ್ಷಿಕೆ ತಾಕಿನಲ್ಲಿ ಪ್ರತಿ ಹೆಕ್ಟೆರಿಗೆ 18.50 ಕ್ವಿಂಟಾಲ್ ಇಳುವರಿ ನೀಡಿದ್ದು, ಹೋಲಿಕೆ ತಳಿಯದ ಜಿಪಿಯು 28, 14 ಕ್ವಿಂ/ಹೆ ಇಳುವರಿ ನೀಡಿದೆ. ಇದಲ್ಲದೆ ಕೆಎಂ.ಆರ್. 630 ರಾಗಿ ತಳಿಯು ಯಾಂತ್ರಿಕತೆ ಕಟಾವಿಗೆ ಸೂಕ್ತವಾಗಿದೆ.

9. ಭತ್ತದ ತಳಿ ಗಂಗಾವತಿ ಸೋನಾ ಪ್ರಾತ್ಯಕ್ಷಿಕೆ : ಭತ್ತದ ತಳಿ ಗಂಗಾವತಿ ಸೋನವು ಪ್ರತಿ ಹೆಕ್ಟೇರಿಗೆ 52.5 ಕ್ವಿಂ/ಹೆ ಇಳುವರಿ ನೀಡಿದ್ದು, ಹೋಲಿಕೆ ತಳಿಯಾದ ಐ.ಆರ್. 64 ಹೆಕ್ಟೇರಿಗೆ 41.5 ಕ್ವಿಂ ಇಳುವರಿ ನೀಡಿರುತ್ತದೆ. ಗಂಗಾವತಿ ಸೋನ ತಳಿಯು ಬೆಂಕಿ ರೋಗ ತಡೆದುಕೊಂಡಿರುತ್ತದೆ

10. ರಾಗಿ ಮತ್ತು ಅಲಸಂದೆ ಮಿಶ್ರ ಬೆಳೆಯಲ್ಲಿ ಬರ ಹಾಗೂ ಬೆಂಕಿ ರೋಗ ನಿರೋಧಕ ರಾಗಿ ತಳಿ ಎಂ.ಎಲ್ 365 ಬಳಕೆ : ಬರ ಮತ್ತು ಬೆಂಕಿ ನಿರೋಧಕ ತಳಿ ಎಂ.ಎಲ್ 365 ತಳಿಯನ್ನು ರೈತರ ಪದ್ಧತಿಗೆ (ರಾಗಿ ಏಕ ಬೆಳೆ) ಹೋಲಿಸಿದಾಗ

(80 - 85 days). Further application of Borax to soil as well as foliar application has resulted in complete filling of sunflower head. Inturn, 265.3% increased yield was observed with KBSH-78 as compared to farmers practice.

4. Integrated nutrient management in in Garlic: 17.9% higher yield was recorded in the demonstration plot. The quality of the garlic cloves were superior with respect to size, aroma and hardiness because of additional sulphur nutrition in the demonstration plot.

5. Integrated Crop Management in Potato: Due to the demonstration of variety Khufri Jyothi, the farmers has got additional yield of 18.6% with minimum soft rot incidence as compared to local check variety. Even the farmers are gain knowledge about selection of certified seeds and improved cultivation aspects. Rainfed suitable variety Khufri Jyothi is 22 days earlier than the locak check.

6. Demonstration of Multicut Fodder Sorghum COFS-3: As compared to single cut fodder sorghum, COFS-31 a multicut fodder sorghum variety has recorded 43.57% higher green fodder yield with good palatability under rainfed condition.

7. Pre and Post – partum management of crossbred dairy cattle: Usage of bypass fat and mineral mixture has resulted in increased milk yield and quality, besides improvement in farmers income by 138.17%.

8. Demonstration of Finger millet variety KMR – 630: KMR-630 Finger millet variety performed well in demonstration by yielding 18.50 q/ha compare to check variety GPU-28 which yielded 14.00q/ha besides KMR-630 is suitable for machine harvest.

9. Demonstration of paddy variety Gangavathi Sona: Paddy variety Gangavathi sona recorded 52.50q/ha compare to check variety IR-64 which yielded 41.50q/ha besides, Gangavathi sona performed resistant to blast disease.

10. Addressing Drought and Blast Vulnerability through Finger millet var. ML 365 under double cropping system: Demonstrated drought and blast resistant Ragi variety ML-365 in 4.0 ha. area

ಸರಾಸರಿ ಶೇ. 19.80 ಇಳುವರಿ ಹೆಚ್ಚಾಗಿದ್ದು, 22.4 (ಕ್ವಿ/ಹೆ.) ಇಳುವರಿ ದಾಖಲಾಗಿದೆ. ಜೊತೆಗೆ ಅಲಸಂದೆಯನ್ನು ಅಂತರ ಬೆಳೆಯಾಗಿ ಬೆಳೆದಿದ್ದು, ಹೆಚ್ಚುವರಿ ಆದಾಯ ಮತ್ತು ಲಾಭ ವೆಚ್ಚ ಅನುಪಾತದಲ್ಲಿ 2.28 ರಷ್ಟು ಕಂಡು ಬಂದಿದೆ ಹಾಗೂ ಬೆಂಕಿರೋಗದ ತೀವ್ರತೆಯು ರೈತರ ಪದ್ಧತಿಯಲ್ಲಿ ಶೇ. 15.8 ರಷ್ಟು ಕಂಡುಬಂದಿದ್ದರೆ ಪ್ರಾತ್ಯಕ್ಷಿಕೆ ತಾಕಿನಲ್ಲಿ ಶೇ. 6.4 ರಷ್ಟು ಕಂಡು ಬಂದಿದೆ.

11. ತೊಗರಿ ತಳಿ ಬಿ.ಆರ್.ಜಿ. 3 ರಲ್ಲಿ ಸಮಗ್ರ ಬೆಳೆ ನಿರ್ವಹಣೆ : ಬಿ.ಆರ್.ಜಿ. 3 ತೊಗರಿ ತಳಿಯು ಮೊಸಾಯಿಕ್ ರೋಗದ ನಿರೋಧಕ ತಳಿಯಾಗಿದ್ದು, 14.6 ಕ್ವಿ/ಹೆ ಇಳುವರಿ ದಾಖಲಾಗಿದ್ದು, ಲಾಭ ವೆಚ್ಚ ಅನುಪಾತದಲ್ಲಿ 1.84 ರಷ್ಟು ಕಂಡು ಬಂದಿರುತ್ತದೆ.

12. ಮಳೆಯಾಶ್ರಿತ ಪರಿಸ್ಥಿತಿಯಲ್ಲಿ ರಾಗಿ ಬೆಳೆಗೆ ಪರ್ಯಾಯ ಬೆಳೆಯಾಗಿ ಪಾಪ್‌ಕಾರ್ನ್ ಪ್ರಾತ್ಯಕ್ಷಿಕೆ : ಪಾಪ್‌ಕಾರ್ನ್ ಪ್ರಾತ್ಯಕ್ಷಿಕೆಯಲ್ಲಿ 24.3 ಕ್ವಿ/ಹೆ. ರಷ್ಟು ಇಳುವರಿ ಕಂಡುಬಂದಿದ್ದು. ರೈತರ ಪದ್ಧತಿ ರಾಗಿ ಬೆಳೆಯ ಇಳುವರಿ 19.8 ಕ್ವಿ/ಹೆ. ದಾಖಲಾಗಿದ್ದು, ಶೇ. 67.7 ರಷ್ಟು ಅಧಿಕ ಇಳುವರಿ ಮತ್ತು ಲಾಭ ವೆಚ್ಚ ಅನುಪಾತವು ಶೇ. 1.98 ಕಂಡು ಬಂದಿದೆ.

13. ಹಸಿರು ಮೇವಿಗಾಗಿ ಬಹು ಕಟಾವು ಮೇವಿನ ಜೋಳ (Sorghum) COFS–31 ಪ್ರಾತ್ಯಕ್ಷಿಕೆ : ಬಹು ಕಟಾವು ಮೇವಿನ ಜೋಳದ ತಳಿ COFS–31 ಪ್ರಾತ್ಯಕ್ಷಿಕೆ ತಾಕುಗಳಲ್ಲಿ ಸರಾಸರಿ ಇಳುವರಿ 1160 ಕ್ವಿ/ಹೆ ಗಳಷ್ಟು ದಾಖಲಾಗಿದ್ದು, ರೈತರ ಪದ್ಧತಿಗೆ ಹೋಲಿಸಿದಾಗ ಶೇ. 98.3 ರಷ್ಟು ಅಧಿಕ ಇಳುವರಿ ಕಂಡು ಬಂದಿದೆ ಹಾಗೂ ಲಾಭ ವೆಚ್ಚ ಅನುಪಾತವು 2.69 ರಷ್ಟಿದೆ.

14. ಟೊಮ್ಯಾಟೊ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ : ಪ್ರಾತ್ಯಕ್ಷಿಕೆ ತಾಕುಗಳಲ್ಲಿ ಸರಾಸರಿ ಇಳುವರಿಯು 671.20 ಕ್ವಿ/ಹೆ. ರಷ್ಟು ದಾಖಲಾಗಿದ್ದು, ರೈತರ ಪದ್ಧತಿಗೆ ಹೋಲಿಸಿದಾಗ ಶೇ. 9.26 ರಷ್ಟು ಇಳುವರಿಯಲ್ಲಿ ಹೆಚ್ಚಳವಾಗಿದೆ. ಲಾಭ ವೆಚ್ಚ ಅನುಪಾತವು 3.92 ರಷ್ಟಿದೆ.

15. ಮುಸುಕಿನ ಜೋಳದಲ್ಲಿ ಎಲೆ ಸುರುಳಿ ಸೈನಿಕ ಹುಳುವಿನ ಹತೋಟಿಗೆ ಪರಿಸರ ಸ್ನೇಹಿ ಕ್ರಮಗಳು : ಪ್ರಾತ್ಯಕ್ಷಿಕೆ ತಾಕಿನಲ್ಲಿ ಸರಾಸರಿ ಇಳುವರಿಯು 75.17 ಕ್ವಿ/ಹೆ. ರಷ್ಟು ಕಂಡು ಬಂದಿದ್ದು, ರೈತರ ಪದ್ಧತಿಗೆ ಹೋಲಿಸಿದಾಗ ಶೇ. 14.20 ರಷ್ಟು ಹೆಚ್ಚು ಇಳುವರಿ ಕಂಡುಬಂದಿರುತ್ತದೆ ಹಾಗೂ ಲಾಭ ವೆಚ್ಚ ಅನುಪಾತವು 2.19 ರಷ್ಟಿದೆ.

16. ಬದನೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ : ಪ್ರಾತ್ಯಕ್ಷಿಕೆ ತಾಕಿನಲ್ಲಿ ಸರಾಸರಿ ಇಳುವರಿಯು 319.50 ಕ್ವಿ/ಹೆ. ರಷ್ಟು ದಾಖಲಾಗಿದ್ದು, ರೈತರ ಪದ್ಧತಿಗೆ ಹೋಲಿಸಿದಾಗ ಶೇ. 7.43 ರಷ್ಟು ಹೆಚ್ಚು ಇಳುವರಿಯಾಗಿದೆ. ಲಾಭ ವೆಚ್ಚ ಅನುಪಾತವು 4.34 ರಷ್ಟಿದೆ.

17. ಹೈನುಗಾರಿಕೆಯಲ್ಲಿ ಸಮತೋಲನ ಪಶು ಆಹಾರ : ಸರಾಸರಿ ಹಾಲಿನ ಇಳುವರಿಯು 9.92 (ಲೀ/ ಪ್ರತಿ ದಿನಕ್ಕೆ) ರಷ್ಟು ದಾಖಲಾಗಿದೆ. ರೈತರ ಪದ್ಧತಿಗೆ ಹೋಲಿಸಿದಾಗ ಶೇ. 11.21 ರಷ್ಟು ಇಳುವರಿಯಲ್ಲಿ ಹೆಚ್ಚಳ ಕಂಡುಬಂದಿರುತ್ತದೆ. ಲಾಭ ವೆಚ್ಚ ಅನುಪಾತವು 2.96 ರಷ್ಟಿದೆ.

and covered 10 farmers. When compared to Farmers practice (Solo crop Ragi) recorded 19.80 % increase in yield and obtained 22.4 q/ha. Additional income fetched through intercropping system with cowpea and BC ratio is 2.28. Average incidence of blast severity was 6.4% in demo plot and noticed 15.8% blast severity in check plot.

11. Integrated Crop Management in Redgram BRG-3: Redgram variety BRG-3 is resistant to Mosaic virus. An average of 14.6 q/ha. yield was recorded and the BC ratio is 1.84.

12. Demonstration of Popcorn as alternative crop for finger millet under rainfed situation: In demo plot the average yield obtained was 24.3 q/ha. when compared to Ragi yield (Farmers practice) and increase in yield recorded was 67.7% and the BC ratio is 1.98.

13. Demonstration of multicut fodder sorghum: COFS-31 for green fodder and silage: The multicut fodder sorghum Variety CoFS – 31 resulted an average yield 1160 q/ha., when compared to check plot and noticed 98.3% increase in yield and the B:C ratio is 2.69.

14. Integrated Crop Management in Tomato: In demonstration plot obtained an average yield of 671.20 q/ha as compared to check plots. Recorded 9.26% increase in yield and the average BC ratio of demo plots was 3.92.

15. Eco-friendly management of fall army worm in Maize: The eco-friendly technologies were followed to manage fall army worm and recorded 75.17 q/ha., when compared to check plot recorded 14.20 % increased in yield and the BC ratio is 2.19 was recorded in demo plots.

16. Integrated Crop Management in Brinjal: The demonstration plot recorded 319.50 q/ha compared to check plot 7.43 percent increase in yield and the cost benefit ratio is 4.34 in demo plots.

17. Ration Balancing through Integrated Approach in Dairy Animals: In the demonstration higher milk yield of 9.92 L/day/animal was recorded and the increased yield 11.21 %, was compared to farmers practices. The cost benefit ratio is 2.96 in 5 milching animals.

18. ಹಿಪ್ಪುನೇರಳೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ : ಪ್ರಾತ್ಯಕ್ಷಿಕೆಯಲ್ಲಿ ಎಲೆ ಉತ್ಪಾದಕತೆ (20.35%) ಮತ್ತು ಗೂಡಿನ ಉತ್ಪಾದಕತೆ (6.8%) ಹೆಚ್ಚಾಗಿದೆ. ಹಸಿರು ಗೊಬ್ಬರದ ಹಾಗು ಜೈವಿಕ ಗೊಬ್ಬರದ ಬಳಕೆಯಿಂದ ಮಣ್ಣಿನ ಪೋಷಕಾಂಶಗಳ ಸ್ಥಿತಿ (N–215.38 kg/ac, P-38/kg/ac, K-126.57/kg/ac, PH-6.69, OC-0.48%) ಗಮನಾರ್ಹವಾಗಿ ಸುಧಾರಣೆಯಾಗಿದೆ.

19. ಬೈವೋಲ್ಟೈನ್ ದ್ವಿತಳಿ (FC1 x FC2) ನ್ನು ಜನಪ್ರಿಯ ಗೊಳಿಸುವುದು : ಹತ್ತು ಹೊಸ ರೈತರು ಬೈವೋಲ್ಟೈನ್ ಹೈಬ್ರಿಡ್ FC1 x FC2 ಸಾಕುವುದನ್ನು ಅಳವಡಿಸಿಕೊಂಡರು. ಗೂಡಿನ ಉತ್ಪಾದಕತೆ ಹೆಚ್ಚಾಗಿದ್ದು, ಅದರ ಬೆಲೆ ಸಹ ಅಧಿಕಗೊಂಡಿದೆ (ರೂ.16774/100 DFLs) ಹಾಗು ಉತ್ಪಾದನಾ ವೆಚ್ಚ ಗಮನಾರ್ಹವಾಗಿ ಕಡಿಮೆಯಾಗಿದೆ.

20. ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಊಜಿ ನೋಣದ ನಿರ್ವಹಣೆ: ಊಜಿ ಲಿಂಗಾಕರ್ಷಕ ಬಲೆಯನ್ನು ಬಳಸಿದ್ದರಿಂದ (5 ಬಲೆ / ಮನೆ) ಸಿಕ್ಕಿ ಬಿದ್ದ ನೊಣಗಳ ಸಂಖ್ಯೆ (77 / ಬಲೆ), ಊಜಿ ಬಾಧಿದ ಗೂಡು (69.73%) ಕಡಿಮೆಯಾಗುದ್ದು, ಇಳುವರಿಯಲ್ಲಿ ಹೆಚ್ಚಳ (10.42%) ಕಂಡುಬಂದಿದೆ. ಗೂಡಿನ ಬೆಲೆ (5.86%) ಹೆಚ್ಚಾಗಿದೆ.

21. ರಾಗಿ ಕೆ. ಎಂ. ಆರ್. 340 ಪದ್ಧತಿ ಪ್ರಾತ್ಯಕ್ಷಿಕೆ : ರಾಗಿ ಕೆ.ಎಂ.ಆರ್. 340 ಯ ಪ್ರಾತ್ಯಕ್ಷಿಕೆ ಕೈಗೊಂಡಿದ್ದರಿಂದ ಈ ತಳಿಯ ಬಿಳಿ ಬಣ್ಣ ಬಹಳ ಆರ್ಕಷಕವಾಗಿದ್ದು, ಶೇ. 15 ರಷ್ಟು ಹೆಚ್ಚು ಇಳುವರಿ ಹಾಗೂ ಸ್ವ ಸಹಾಯ ಗುಂಪಿನ ಮಹಿಳೆಯರು ಮೌಲ್ಯವರ್ಧಿತ ಪದಾರ್ಥಗಳಾದ ರಾಗಿ ಮಾಲ್ಟ್, ಕುರ್ಕುರೆ, ಲಡ್ಡು ಮತ್ತು ಮಿಕ್ಸಚರ್ ತಯಾರಿಸಿ ವ್ಯಾಪಾರ ಮಾಡುವುದರಿಂದ ತಿಂಗಳಿಗೆ ರೂ.25,000/– ಗಳಿಸುತಿದ್ದು, ಸ್ವಾವಲಂಬಿಗಳಾಗಿ ಉದ್ದಿಮೆಗಾರಿಕೆ ರಂಗದಲ್ಲಿ ತೊಡಗಿಸಿಕೊಂಡಿದ್ದಾರೆ.

22. ಅವರೆ ತಳಿ ಹೆಚ್.ಎ. 4 ನ ಪರಿಚಯ ಮತ್ತು ಬೆಳೆ ನಿರ್ವಹಣೆ: ಅವರೆ ತಳಿ ಹೆಚ್.ಎ. 4 ನಲ್ಲಿ ಟ್ರೈಕೊಡರ್ಮ, ಪಿ.ಎಸ್.ಬಿ. ಸೂಕ್ಷ್ಮಜೀವಿಯಿಂದ ಸಮೃದ್ಧಿಪಡಿಸಿದ ಕೊಟ್ಟಿಗೆ ಗೊಬ್ಬರದ ಅಳವಡಿಕೆ, ರೈಜೋಬಿಯಂ ಜೈವಿಕ ಗೊಬ್ಬರದಿಂದ ಬೀಜೋಪಚಾರ ಮತ್ತು ಪರಿಸರ ಸ್ನೇಹಿ ಪೀಡೆ ನಿರ್ವಹಣೆಯಿಂದ ಶೇ 10.6 ಇಳುವರಿಯಲ್ಲಿ ಹೆಚ್ಚಳ ಕಂಡುಬಂದಿದೆ. ಈ ತಳಿಯು ಕಡಿಮೆ ಫಲವತ್ತತೆ ಭೂಮಿಯಲ್ಲಿಯೂ 26.41 ಕ್ವಿ./ಹೆ. ಇಳುವರಿ ಬಂದಿರುತ್ತದೆ.

23. ಅಕ್ಕಿ ಅವರೆ ತಳಿ ಕೆ.ಬಿ.ಆರ್. 1 ನ ಪರಿಚಯ ಮತ್ತು ಬೆಳೆ ನಿರ್ವಹಣೆ : ಪ್ರಾತ್ಯಕ್ಷಿಕಾ ತಳಿಯು 15.4 ಕ್ವಿ. / ಹೆ. ಇಳುವರಿ ನೀಡಿದ್ದು, ಹಳದಿ ನಂಜುರೋಗ ಅಕ್ಕಿ ಅವರೆಯಲ್ಲಿ ಕಡಿಮೆ ಕಂಡುಬಂದಿದೆ.

24. ಎಲೆಕೋಸಿನಲ್ಲಿ ಸಮಗ್ರ ಪೋಷಕಾಂಶಗಳು ಹಾಗು ಕೀಟಗಳ ನಿರ್ವಹಣಾ ಕ್ರಮಗಳು : ಎಲೆಕೋಸಿನಲ್ಲಿ ರಸಾವರಿ ಪದ್ದತಿ ಅಳವಡಿಕೆಯಿಂದ ರಸಗೊಬ್ಬರಗಳ ಬಳಕೆ ಪ್ರಮಾಣ ಕಡಿಮೆ

18. Integrated Nutrient Management in Mulberry: Demonstration on INM in mulberry resulted in increased leaf productivity (20.35%) and cocoon productivity (6.8%). The soil nutrient status (N-215.38 kg/ac, P-38/kg/ac, K-126.57/kg/ac, PH-6.69, OC-0.48%) was significantly improved due to incorporation green manure, bio fertilizers along with the enriched FYM and RDF

19. Popularization of Bivoltine Double Hybrid FC1 X FC2: Ten new farmers adopted the rearing of Bivoltine double hybrid FC1xFC2. The cost of production was significantly less for BV (Rs.13217/ 100 DFLs) compared CB (Rs.16774/ 100 DFLs) fetching higher BCR (3.55) against 1.99 in CB

20. Management of Uzi fly, Exorista bombysis in silkworm rearing: Using uzi pheromone traps @ 5 traps per / house increased the number of flies trapped (77/card), reduced uzi infested cocoons (69.73%) thereby increasing the cocoon yield (10.42%).The cocoons fetched higher price (5.86%).

21. Demonstration of Ragi Var. KMR 340: Demonstration and value addition of finger millet var. KMR 340 taken up by the self help group helped them to increase yield by 15 per cent and due to its attractive white colour, the value added products made out of it like Ragi malt, kurkure, mixture and laddu have increased their monthly income by Rs. 25,000/- which has developed entrepreneurship skill among them.

22. Demonstration of field bean variety HA 4 : Seed treatment with biofertilizer, INM, IPM technologies were demonstrated. By following these technologies 26.41 q/ha yield was obtained which was 10.6 % increase over check (23.91 q/ha).

23. Demonstration of Rice bean variety KBR 1: In demonstration, 15.4 t/ha yield was obtained and the variety showed less incidence of yellow mosaic..

24. Integrated nutrient and pest management in Cabbage: Reduced fertilizer usage due adoption of fertigation schedule method in cabbage crop

ಯಾಗಿದ್ದು ಶೇ. 12 ರಷ್ಟು ಬೇಸಾಯದ ವೆಚ್ಚ ಮತ್ತು ಕೀಟನಾಶಕಗಳ ಸಿಂಪರಣೆಯಲ್ಲಿ ಇಳಿಕೆ (8 ಸಿಂಪರಣೆಗಳ ಬದಲು 4) ಹಾಗು ಜೈವಿಕ ನಿಯಂತ್ರಕಗಳಿಂದ ಆರೋಗ್ಯಕರ ಗಿಡಗಳಿಂದ ಹೆಚ್ಚುವರಿ ಇಳುವರಿ (ಶೇ. 10) ಕಂಡುಬಂದಿದೆ

and spraying of vegetable special enhanced the good quality head. Less use of plant protection chemicals (4 against 8) and also additional yield and income obtained.

25. ದಾಳಿಂಬೆ ಬೆಳೆಯಲ್ಲಿ ಸಮಗ್ರ ಪೋಷಕಾಂಶಗಳು ಹಾಗು ರೋಗ ನಿರ್ವಹಣೆ : ದಾಳಿಂಬೆ ಬೆಳೆಯಲ್ಲಿ ಅರ್ಕಾ ಸೂಕ್ಷ್ಮಾಣು ಜೀವಿಗಳ ಮಿಶ್ರಣ ಹಾಗು ಅರ್ಕಾ ಆಕ್ಟೀನೊ ಪ್ಲಸ್ ಬಳಕೆಯಿಂದ ಹಣ್ಣಿನ ಗುಣಮಟ್ಟ ಹಾಗು ಇಳುವರಿ ಹೆಚ್ಚಿ ರೋಗದ ತೀವ್ರತೆ ಕಡಿಮೆಯಾಗಿರುತ್ತದೆ. ಸರಿಯಾದ ಪ್ರಮಾಣದಲ್ಲಿ ಪೋಷಕಾಂಶಗಳ ಬಳಕೆಯಾಗಿದ್ದು ರೈತರ ಪದ್ದತಿಗೆ ಹೋಲಿಸಿದಾಗ ಇಳುವರಿಯಲ್ಲಿ ಶೇಕಡಾವಾರು 16.3 ರಷ್ಟು ಹೆಚ್ಚಳ ಕಂಡುಬಂದಿದೆ.

25. Integrated nutrient and pest management in Pomegranate: Use of Arka Microbial Consortia and Arka Actino plus in pomegranate reduces blight and wilt disease incidence. Adoption of soil test based fertilizer recommendation and IPM practices help in reduced disease & pest incidence, quality produce and enhanced returns.

26. ಮೆಣಸಿನಕಾಯಿ ಬೆಳೆಯ ಸಮಗ್ರ ಬೆಳೆ ನಿರ್ವಹಣೆ: ಮೆಣಸಿನಕಾಯಿ ಬೆಳೆಯಲ್ಲಿ ಟ್ರೈಕೊಡರ್ಮ, ನೀಮ್ ಸೋಪ್, ಲಿಂಗಾಕರ್ಷಕ ಬಲೆ ಮತ್ತು ಹಳದಿ ಅಂಟು ಪಟ್ಟಿಗಳ ಬಳಕೆಯಿಂದ ರೋಗದ ತೀವ್ರತೆ ಕಡಿಮೆಯಾಗಿರುತ್ತದೆ. ತರಕಾರಿ ಸ್ಪೆಷಲ್ ಬಳಕೆಯಿಂದ ಪೋಷಕಾಂಶಗಳ ತೀವ್ರತೆ ಕಡಿಮೆಯಾಗಿದ್ದು ರೈತರ ಪದ್ಧತಿಗೆ ಹೋಲಿಸಿದಾಗ ಇಳುವರಿಯಲ್ಲಿ ಶೇಕಡಾವಾರು 12.92ರಷ್ಟು ಹೆಚ್ಚಳ ಕಂಡುಬಂದಿದೆ.

26. Integrated Crop Management in Chilli: Use of bioagents enriched FYM, sticky cards, pheromone traps and neem soap reduced disease and pest incidence in chilli. Spraying of vegetable special increased the quality of fruits and reduced the nutrient deficiencies. There was 12.92% increase in yield in demo plot compare to check.

27. ಗುಲಾಬಿ ಬೆಳೆಯ ಸಮಗ್ರ ಬೆಳೆ ನಿರ್ವಹಣೆ : ಗುಲಾಬಿ ಬೆಳೆಯಲ್ಲಿ ಸಕಾಲದಲ್ಲಿ ಚಾಟಣಿ ಮಾಡಿ ಮತ್ತು ಗುಲಾಬಿ ಮಿಶ್ರಣದ ಬಳಕೆಯಿಂದಾಗಿ ಹೂಗಳ ಗುಣಮಟ್ಟ ಮತ್ತು ಇಳುವರಿ ಹೆಚ್ಚಾಗಿದೆ. ಟ್ರೈಕೊಡರ್ಮ ಸೂಕ್ಷ್ಮಜೀವಿಯಿಂದ ವೃದ್ಧಿಪಡಿಸಿದ ಕೊಟ್ಟಿಗೆ ಗೊಬ್ಬರ ಮತ್ತು ಹಳದಿ ಅಂಟು ಪಟ್ಟಿಗಳ ಬಳಕೆಯಿಂದ ರೋಗದ ತೀವ್ರತೆ ಕಡಿಮೆಯಾಗಿರುತ್ತದೆ. ರೈತರ ಪದ್ಧತಿಗೆ ಹೋಲಿಸಿದಾಗ ಇಳುವರಿಯಲ್ಲಿ ಶೇಕಡಾವಾರು 11.47 ರಷ್ಟು ಹೆಚ್ಚಳ ಕಂಡುಬಂದಿದೆ.

27. Integrated Crop Management in Rose: Timely pruning and application of rose mixture increased the quality of flowers and yield in rose. Application of bio agent enriched FYM and use of sticky cards reduced disease and pest incidence. There was 11.47% increase in yield in demo plot compare to check.

28. ಟೊಮ್ಯಾಟೋ ಬೆಳೆಯ ಪೀಡೆ ನಿರ್ವಹಣೆ : ಟೊಮ್ಯಾಟೋ ಬೆಳೆಯಲ್ಲಿ ಜೈವಿಕ ಶಿಲೀಂದ್ರಗಳಿಂದ ವೃದ್ದೀಕರಿಸಿದ ಕೊಟ್ಟಿಗೆ ಗೊಬ್ಬರದ ಬಳಕೆ, ಹಳದಿ ಅಂಟು ಪಟ್ಟಿ, ಮತ್ತು ಮೋಹಕ ಬಲೆಗಳ ಬಳಕೆ ಮತ್ತು ಚೆಂಡು ಹೂವನ್ನು ಆಕರ್ಷಕ ಬಲೆಯನ್ನಾಗಿ ಬೆಳೆಯುವುದರಿಂದ ರೋಗ ಮತ್ತು ಕೀಟಗಳ ಬಾಧೆ ಕಡಿಮೆಯಾಗಿರುತ್ತದೆ. ರೈತರ ಪದ್ಧತಿಗೆ ಹೋಲಿಸಿದಾಗ ಇಳುವರಿಯಲ್ಲಿ ಶೇಕಡಾವಾರು 7.13ರಷ್ಟು ಹೆಚ್ಚಳ ಕಂಡುಬಂದಿದೆ.

28. Integrated crop management in Tomato: Use of Trichoderma, sticky cards, pheromone traps, neem soap and growing marigold as trap crop reduced disease and pest incidence in Tomato. Spraying of vegetable special increased the quality of fruits and reduced the nutrient deficiencies. There was 7.13% increase in yield in demo plot compare to check.

29. ಸೌತೆಕಾಯಿ ಬೆಳೆಯಲ್ಲಿ ಬೂಜು/ತುಪ್ಪಳಿನ ರೋಗದ ಸಮಗ್ರ ನಿರ್ವಹಣೆ : ಸೌತೆಕಾಯಿ ಬೆಳೆಯಲ್ಲಿ ಜೈವಿಕ ಶಿಲೀಂದ್ರಗಳಿಂದ ವೃದ್ದೀಕರಿಸಿದ ಕೊಟ್ಟಿಗೆ ಗೊಬ್ಬರದ ಬಳಕೆ ಮತ್ತು ಮೆಟಲಕ್ಸಿಲ್ ನಿಂದ ಬೀಜ ಉಪಚಾರದಿಂದ (2 ಗ್ರಾಂ/ಕೆ.ಜಿ. ಬೀಜ) ಬೂಜು ತುಪ್ಪಳಿನ ರೋಗದ ತೀವ್ರತೆ ಕಡಿಮೆಯಾಗಿರುತ್ತದೆ. ರೈತರ ಪದ್ಧತಿಗೆ ಹೋಲಿಸಿದಾಗ ಇಳುವರಿಯಲ್ಲಿ ಶೇಕಡಾವಾರು 13.5 ರಷ್ಟು ಹೆಚ್ಚಳ ಕಂಡುಬಂದಿದೆ.

29. Integrated management of Downey mildew in Cucumber: Seed treatment with Metalaxyl (2g/kg seeds) and Trichoderma enriched farm yard manure application, reduced Downey mildew in cucumber. There was 13.5% increase in yield in demo plot compared to check.

30. ಪೋಲ್ ಬೀನ್ ಬೆಳೆಯಲ್ಲಿ ಹಳದಿ ನಂಜು ರೋಗದ ನಿರ್ವಹಣೆ: ಪೋಲ್ ಬೀನ್ ಬೆಳೆಯಲ್ಲಿ ಥಯಾಮೆಥಾಕ್ಸಾಮ್‌ನಿಂದ ಬೀಜೋಪಚಾರ 25 WG–5 ಗ್ರಾಂ / ಕೆ.ಜಿ. ಬೀಜ ಮತ್ತು

30. Management of yellow vein mosaic in pole bean: Seed treatment with Thiomethaxam 25 WG – 5g/kg seeds, Soil application of *Pseudomonas*

ಜೈವಿಕ ಗೊಬ್ಬರವಾದ ಸುಡೋಮೋನಸ್ ಜೊತೆಗೆ ಬೇವಿನ ಹಿಂಡಿ ಬಳಕೆಯಿಂದ ಹಳದಿ ನಂಜು ರೋಗದ ತೀವ್ರತೆ ಕಡಿಮೆಯಾಗಿರುತ್ತದೆ. ರೈತರ ಪದ್ಧತಿಗೆ ಹೋಲಿಸಿದಾಗ ಇಳುವರಿಯಲ್ಲಿ ಶೇಕಡಾವಾರು 15.35 ರಷ್ಟು ಹೆಚ್ಚಳ ಕಂಡುಬಂದಿದೆ.

31. ರೈತರ ತಾಕಿನಲ್ಲಿ ಪೌಷ್ಟಿಕ ಕೈತೋಟದ ನಿರ್ವಹಣೆ : ರೈತರ ತಾಕಿನಲ್ಲಿ ಪೌಷ್ಟಿಕ ಕೈತೋಟದ ನಿರ್ವಹಣೆಯಿಂದ ಮಕ್ಕಳು, ಮಹಿಳೆಯರು, ವಯಸ್ಕರು ಹಾಗೂ ವೃದ್ಧರ ಆರೋಗ್ಯದಲ್ಲಿ ಸುಧಾರಣೆ ಕಂಡುಬಂದಿದ್ದು ಶೇ. 20 ಹೆಚ್ಚು ಕಬ್ಬಿಣಾಂಶ, ಸುಣ್ಣ, (ಶೇ. 28) ಹೆಚ್ಚು ಜೀವಸತ್ವ ಅ, ಸಿ, ಬಿ ಮತ್ತು ಡಿ ಕುಟುಂಬಕ್ಕೆ ಪ್ರತಿ ದಿನ ಸಾವಯುವಾಗಿ ಬೆಳೆದ ಹಣ್ಣು ಮತ್ತು ತರಕಾರಿಯಿಂದ ಒದಗಿದೆ.

4.4.11.3. ತರಬೇತಿ ಕಾರ್ಯಕ್ರಮಗಳು

2020–21 ರ ಸಾಲಿನಲ್ಲಿ ಕೃಷಿ ವಿಜ್ಞಾನ ಕೇಂದ್ರಗಳು ಆಯೋಜಿಸಿದ್ದ ಒಳಾವರಣ ಮತ್ತು ಹೊರಾವರಣ ತರಬೇತಿ ಕಾರ್ಯಕ್ರಮಗಳ ವಿವರವನ್ನು ಅನುಬಂಧ 3.13 ರಲ್ಲಿ ನೀಡಲಾಗಿದೆ.

1. **ಒಳಾವರಣ ತರಬೇತಿಗಳು:** ಏಳು ಕೃಷಿ ವಿಜ್ಞಾನ ಕೇಂದ್ರಗಳು, 7492 ಜನ ರೈತ/ರೈತ ಮಹಿಳೆಯರ/ಯುವಜನರ ಲಾಭಕ್ಕಾಗಿ, ಅವರ ಜ್ಞಾನ ಹಾಗೂ ಕೌಶಲಗಳನ್ನು ನವೀಕರಿಸಿಕೊಳ್ಳಲು; ಬೆಳೆ ಉತ್ಪಾದನೆ, ಸಸ್ಯಸಂರಕ್ಷಣೆ, ತೋಟಗಾರಿಕೆ, ಪ್ರಾಣಿ ವಿಜ್ಞಾನ, ಗೃಹ ವಿಜ್ಞಾನ, ರೇಷ್ಮೆಕೃಷಿ, ಮಣ್ಣು ವಿಜ್ಞಾನ, ಕೃಷಿ ಇಂಜಿನಿಯರಿಂಗ್, ಕೃಷಿ ವಿಸ್ತರಣೆ, ಪಶುವೈದ್ಯಕೀಯ ಮುಂತಾದ ವಿಷಯಗಳಲ್ಲಿ 218 ಒಳಾವರಣ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

2. **ಹೊರಾವರಣ ತರಬೇತಿಗಳು :** ಕೃಷಿ ವಿಜ್ಞಾನ ಕೇಂದ್ರಗಳು ಹೆಚ್ಚು ರೈತರನ್ನು ತಲುಪಲು, ಅವರ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಅಗತ್ಯಾಧಾರವಾಗಿ; 10780 ಜನ ರೈತ ಮತ್ತು ರೈತಮಹಿಳೆ ಹಾಗೂ ಯುವರೈತರ ಪ್ರಯೋಜನಕ್ಕಾಗಿ ಬೆಳೆ ಉತ್ಪಾದನೆ, ಸಸ್ಯಸಂರಕ್ಷಣೆ, ತೋಟಗಾರಿಕೆ, ಪ್ರಾಣಿ ವಿಜ್ಞಾನ, ಗೃಹ ವಿಜ್ಞಾನ, ರೇಷ್ಮೆಕೃಷಿ, ಮಣ್ಣು ವಿಜ್ಞಾನ, ಕೃಷಿ ಇಂಜಿನಿಯರಿಂಗ್, ಕೃಷಿ ವಿಸ್ತರಣೆ, ಪಶುವೈದ್ಯಕೀಯ ಮುಂತಾದ ವಿಷಯಗಳಲ್ಲಿ308 ಹೊರಾವರಣ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿತ್ತು.

3. **ವಿಸ್ತರಣಾ ಕಾರ್ಯಕರ್ತರ ತರಬೇತಿ:** ಕೃಷಿ ವಿಜ್ಞಾನ ಕೇಂದ್ರಗಳು ಅಭಿವೃದ್ಧಿ ಇಲಾಖೆಗಳ / ಸಂಸ್ಥೆಗಳ / ಸರಕಾರೇತರ ಸಂಸ್ಥೆಗಳ ವಿಸ್ತರಣಾ ಕಾರ್ಯಕರ್ತರಿಗೆ ಅವರ ಜ್ಞಾನ ಮತ್ತು ಕೌಶಲಗಳನ್ನು ಹೆಚ್ಚಿಸಿಕೊಳ್ಳಲು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ಕೃಷಿ ಹಾಗೂ ಸಂಬಂಧಿತ ವಿವಿಧ ವಿಷಯಗಳಲ್ಲಿ 1123 ವಿಸ್ತರಣಾ ಕಾರ್ಯಕರ್ತರಿಗೆ ಒಟ್ಟು 32 ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

4.4.11.4 ತಂತ್ರಜ್ಞಾನದ ಸೇವಾ ಪೂರೈಕೆ

ಕೃಷಿ ವಿಜ್ಞಾನ ಕೇಂದ್ರಗಳು ಗುಣಾತ್ಮಕ ಬೀಜ, ಬಿತ್ತನೆ ಪರಿಕರಗಳ ಪೂರೈಕೆಯ ಜೊತೆಗೆ ಜೈವಿಕ ಉತ್ಪನ್ನಗಳು, ಸೂಕ್ಷ್ಮ ಪೋಷಕಾಂಶಗಳು, ಜಾನುವಾರುಗಳು ಮುಂತಾದ ತಾಂತ್ರಿಕ ಪರಿಕರಗಳನ್ನು ಸಹ

fluorescens along with neem cake and installation of yellow sticky trap reduced yellow mosaic virus in Polebean. There was 15.35% increase in yield in demo plot compare to check.

31. Nutri-garden: Demonstration of nutri garden in farmers field has helped children, farm women, adults and elderly to maintain good health by increasing 20 per cent of iron and calcium intake along with 28 per cent increase in vitamin A, B, C and D intake by consuming organically cultivated fruits and vegetables .

4.4.11.3 Training Programmes

The details of training programmes (on and off campus) organised by KVKs during 2020-21 are furnished in Annexure 3.13.

1. **On campus training programmes:** The seven KVKs put together organized 218 need based on-campus training programmes benefiting 7492 farmers, farm women and youth in the discipline of crop improvement, crop production, protection, horticulture, animal science, home science, sericulture, soil science, Agricultural Engineering, Agricultural Extension, Veterinary etc., to upgrade their knowledge and skill.

2. **Off campus training programmes:** To reach large number of farmers, the KVKs organized 308 need based off campus training programmes benefitting 10780 farmers, farm women and youth in the discipline of crop improvement, crop production, protection, horticulture, animal science, home science, sericulture, soil science, Agricultural Engineering, Agricultural Extension, Veterinary etc, to upgrade their knowledge and skill.

3. **Training for extension personnel:** The KVKs also organized training for extensional personnel of line departments / organizations / NGOs to up grade their knowledge and skill. In total 32 training programmes benefiting 1123 extension personal benefited in various disciplines of agriculture and allied subjects.

4.4.11.4 Technological services provided

In addition to providing advisory service, the KVKs provided quality seed, planing material and other inputs like – bio-control agents, micro nutrients, livestock etc.,

ಒದಗಿಸಿವೆ. ಅದರಂತೆ, ಕೃಷಿ ವಿಜ್ಞಾನ ಕೇಂದ್ರಗಳು ರೈತ ಸಮುದಾಯದ ಲಾಭಕ್ಕಾಗಿ 2020–21ನೇ ಸಾಲಿನಲ್ಲಿ ಈ ಕೆಳಗಿನ ನಿರ್ಣಾಯಕ ತಾಂತ್ರಿಕ ಪರಿಕರಗಳನ್ನು ಕೃಷಿ ವಿಜ್ಞಾನ ಕೇಂದ್ರಗಳು ವಿತರಿಸಿದೆ.

- 3281 (2594 ರೈತರು) ಮಣ್ಣಿನ ಮಾದರಿಗಳನ್ನು ಮತ್ತು 1841 (1503 ರೈತರು) ನೀರಿನ ಮಾದರಿಗಳನ್ನು ಕೃಷಿ ವಿಜ್ಞಾನ ಕೇಂದ್ರಗಳು ವಿಶ್ಲೇಷಿಸಿ ಸೂಕ್ತ ಶಿಫಾರಸ್ಸುಗಳನ್ನು ನೀಡಿವೆ.
- 20.95 ಕ್ವಿ. ಆಹಾರ ಧಾನ್ಯ, ಬೇಳೆಕಾಳುಗಳ ಜೊತೆಗೆ 174370 (1035 ರೈತರು) ಮಾವು, ಪಪಾಯ, ಕರಿಬೇವು, ನುಗ್ಗೆ, ತರಕಾರಿ ಸಸಿಗಳು, ಬೇರು ತುಂಡುಗಳು (53155– 888 ರೈತರು), ಬೇರಿನ ಬೀಜಗಳು 243 ಕೆಜಿ (191 ರೈತರು) ಮುಂತಾದ ಗುಣಮಟ್ಟದ ಬಿತ್ತನೆ ಪರಿಕರಗಳನ್ನು ಮಾರಟ ಮಾಡಲಾಯಿತು.
- 3591 ಕೆಜಿ. (145 ರೈತರು) ಟ್ರೈಕೋಡರ್ಮಾ, 2537 ಕೆಜಿ (112 ರೈತರು) ಸೂಡೋಮೊನಾಸ್ ಮುಂತಾದ ಜೈವಿಕ ನಿಯಂತ್ರಕ ನಿಯೋಗಿಗಳನ್ನು ಹಾಗೂ 841 ಕೆಜಿ. (119 ರೈತರು) ಸೂಕ್ಷ್ಮಪೋಷಕಾಂಶ ಮಿಶ್ರಣ (ತರಕಾರಿ, ಮಾವು, ಬಾಳೆ ವಿಶೇಷ) ಉತ್ಪಾದಿಸಿ ವಿತರಣೆ ಮಾಡಲಾಗಿದೆ.
- 3502 ಜಾನುವಾರುಗಳನ್ನು (ಕುರಿ, ಆಡು, ಹಂದಿ, ಕೋಳಿ ಇತ್ಯಾದಿ) 205 ರೈತರಿಗೆ ಮಾರಾಟ ಮಾಡಲಾಗಿದೆ.

4.4.11.5 ದತ್ತು ಗ್ರಾಮ ಕಾರ್ಯಕ್ರಮ

ಪ್ರತಿಯೊಂದು ಕೃಷಿ ವಿಜ್ಞಾನ ಕೇಂದ್ರವು ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಮೂರು ವರ್ಷಗಳ ಕಾಲಾವಧಿಯವರೆಗೆ ಕೃಷಿ ಹಾಗೂ ಸಂಬಂಧಿತ ಕ್ಷೇತ್ರದಲ್ಲಿನ ತಾಂತ್ರಿಕ ಪರಿಹಾರೋಪಾಯ ಗಳನ್ನು; ಪಶುಸಂಗೋಪನೆ, ಅರಣ್ಯ, ಆಹಾರ, ಪೋಷಕಾಂಶ ಹಾಗೂ ಸ್ವಚ್ಛ ಭಾರತ ವ್ಯವಸ್ಥೆಗಳಲ್ಲಿನ ಬದಲಾದ ವ್ಯವಸ್ಥೆಯ ಪ್ರಾತ್ಯಕ್ಷಿಕೆ ನೀಡಲು ಮತ್ತು ರೈತರು ಮತ್ತು ಕೃಷಿಯಲ್ಲಿ ತೊಡಗಿಸಿಕೊಂಡವರಿಗೆ ಸಹಾಯ ಮಾಡಲು ಒಂದೊಂದು ಗ್ರಾಮವನ್ನು ದತ್ತು ಸ್ವೀಕರಿಸಿದೆ. ಪ್ರಸ್ತುತ ವರ್ಷದಲ್ಲಿ ವಿವಿಧ ಚಟುವಟಿಕೆಗಳಾದ ಬೆಳೆ/ಜಾನುವಾರು ಪ್ರಾತ್ಯಕ್ಷಿಕೆಗಳು (41), ಜಾನುವಾರು ಆರೋಗ್ಯ ಶಿಬಿರ (08), ಆರೋಗ್ಯ ಶಿಬಿರ (05), ಕ್ಷೇತ್ರೋತ್ಸವ (05), ಮಣ್ಣು ಆರೋಗ್ಯ ಶಿಬಿರ (08), ತರಬೇತಿ ಕಾರ್ಯಕ್ರಮ (77), ಅಧ್ಯಯನ ಭೇಟಿ (60), ಪ್ರಮುಖ ದಿನಾಚರಣೆಗಳು (03), ವನಮಹೋತ್ಸವ (01), ಪದ್ದತಿ ಪ್ರಾತ್ಯಕ್ಷಿಕೆ (03) ಹಾಗೂ ಇತರೆ (15) ಚಟುವಟಿಕೆಗಳನ್ನು ಕೈಗೊಳ್ಳಲಾಗಿತ್ತು.

4.4.11.6 ಹವಾಮಾನ ಸಹಿಷ್ಣು ಕೃಷಿ ಚಟುವಟಿಕೆಗಳಿಗೆ ರಾಷ್ಟ್ರೀಯ ಉಪಕ್ರಮಗಳು

ಹವಾಮಾನಕ್ಕೆ ತಕ್ಕಂತೆ ಸ್ಥಿತಿಸ್ಥಾಪಕತ್ವತೆಯನ್ನು ಅಭಿವೃದ್ಧಿಪಡಿಸಲು ಹಾಗೂ ವಿವಿಧ ತಂತ್ರಜ್ಞಾನದ ಮೂಲಕ ಬೆಳೆ ಹಾಗೂ ಜಾನುವಾರುಗಳ ಉತ್ಪಾದಕತೆಯನ್ನು ಹೆಚ್ಚಿಸಲು, ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ಕೃಷಿ ವಿಜ್ಞಾನ ಕೇಂದ್ರವು ತಾಲೂಕಿನ ಎಸ್. ರಾಗುಟ್ಟಹಳ್ಳಿಯಲ್ಲಿ ಪ್ರಾಯೋಜನೆಯನ್ನು ಕಾರ್ಯಗತಗೊಳಿಸಿದೆ. ಪ್ರಸ್ತುತ ವರ್ಷ ಕಂದಕದೊಂದಿಗೆ ಬದು ನಿರ್ಮಾಣ, ಕಾಂಟೂರ್ ಬದು, ಸಮುದಾಯ ಹೊಂಡಗಳು, ಕೃಷಿ ಹೊಂಡಗಳು, ಚೆಕ್ ಅಣೆಕಟ್ಟುಗಳು, ಬಾವಿಗಳು, ರಾಗಿ–ಎಮ್.ಎಲ್. 365 (ಸುಧಾರಿತ ತಳಿ), ಹುರುಳಿ (ಪಿಎಚ್‌ಜಿ

Accordingly the KVKs produced following critical inputs during the year under the report for the benefit of farming community.

- KVKs together analyzed 3281 (2594 farmers) soil samples and 1841 (1503 farmers) water samples and gave suitable recommendations
- Produced 20.95 q. of quality seeds of cereals, pulses, etc. In addition planting material (174370-1035 farmers) like mango, papaya, cury leaf, drum stick, vegetable seedlings and fodder slips (53155-888 farmers), fodder seeds 243kg (191 farmers) were produced and sold to farmers.
- Produced and sold 3591 kgs (145 farmers) of biocontrol agents like trichoderma, 2537 (112 farmers) pseudomonas etc and 841 kgs. (119 farmers) micro nutrients mixture (vegetable, mango, banana special)
- Distributed 3502 live stock (sheep, goat, pig, poultry etc.) to 205 farmers

4.4.11.5 Village adoption programme

Each KVK adopted one village to demonstrate all the technical interventions in the field of agriculture and allied subjects involving animal husbandry, forestry, health, nutrition and swacha Bharath to demonstrate the changes in the farming system so as to create an impact among farmers and other stake holders for a period of three years in collaboration with developmental departments. During the reporting year various activities conducted were crop / livestock demonstrations (41), animal health camps (08), health camps (05), Field day (05), soil health camps (08), training programmes (77), exposure visits (60), important day/events celebration (03), Vanamahotsava (01), Method demonstration (03) and other (15) activities.

4.4.11.6 National Initiative on Climate Resilient Agriculture (NICRA) Activities

The KVK, Chikkaballapura is implementing the project to develop resilience to climate and to enhance productivity of crops / live stocks through various technologies at S. Raguttahalli of Chintamani taluk. Various technological interventions implemented during the year are; Trench cum bunding, Contour trenching, Community ponds, Farm ponds, Check

9) (ಪರ್ಯಾಯ ಬೆಳೆಗಳು), ತೊಗರಿ (ಬಿಆರ್‌ಜಿ 1) ಬೆಳೆ ಮತ್ತು ಹಸಿರು ತರಕಾರಿ ತಳಿ, ನವಣೆ (ಡಿಎಚ್‌ಎಫ್‌ಟಿ–103–1) (ಬೆಳೆ ವೈವಿಧ್ಯತೆ), ಮೀನುಗಾರಿಕೆಯಲ್ಲಿ ಅಧಿಕ ಇಳುವರಿ ಕೊಡುವ ಗ್ಲಿಟ್ ತಿಲಾಫಿಯ ಪರಿಚಯ, ಕೋಳಿ ಸಾಕಣಿಕೆಯಲ್ಲಿ ಮೊಟ್ಟೆ ಇಡುವ ಸ್ವರ್ಣದಾರ ಕೋಳಿ ಪರಿಚಯ, ಅಜೋಲ ಬೆಳೆಸುವ ವಿಧಾನ ಮತ್ತು ಅದರ ಮಹತ್ವದ ಬಗ್ಗೆ ತಿಳುವಳಿಕೆ ಹಾಗೂ ಅಧಿಕ ಇಳುವರಿ ಕೊಡುವ ಮೇವಿನ ಬೆಳೆಯ ಪರಿಚಯ (COFS 31) ತಂತ್ರಜ್ಞಾನ ಅನುಷ್ಠಾನಗೊಳಿಸಲಾಯಿತು.

4.4.11.7 ಯುವಕರನ್ನು ಕೃಷಿಯತ್ತ ಆಕರ್ಷಿಸುವಿಕೆ ಹಾಗೂ ಉಳಿಸಿಕೊಳ್ಳುವಿಕೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರವು 'ಯುವಕರನ್ನು ಕೃಷಿಯತ್ತ ಆಕರ್ಷಿಸುವಿಕೆ ಹಾಗೂ ಉಳಿಸಿಕೊಳ್ಳುವಿಕೆ' ಗ್ರಾಮೀಣ ಯುವಕರಿಗೆ ಆರು ದಿನಗಳ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ತೆಂಗಿನ ಮರ ಹತ್ತುವುದು ಮತ್ತು ಬೆಳೆ ನಿರ್ವಹಣಾ ಕ್ರಮಗಳ ಬಗ್ಗೆ ಒಂದು ತರಬೇತಿ, ಎರೆಹುಳು ಗೊಬ್ಬರ ತಯಾರಿಕೆ ಬಗ್ಗೆ ಒಂದು ತರಬೇತಿ ಕಾರ್ಯಕ್ರಮ ಹಾಗೂ ಜೇನು ಸಾಕಾಣಿಕೆ ಬಗ್ಗೆ ಒಂದು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದ್ದು 100 ಗ್ರಾಮೀಣ ಯುವಕರು ಪ್ರಯೋಜನ ಪಡೆದಿದ್ದಾರೆ. ಈ ತರಬೇತಿ ಕಾರ್ಯಕ್ರಮಗಳ ಅಡಿಯಲ್ಲಿ ಎರಡು (2) ಕ್ಷೇತ್ರ ಭೇಟಿಗಳು ಮತ್ತು ಆರು (6) ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗಿತ್ತು.

4.4.11.8 ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೃಷಿ ವಿಜ್ಞಾನ ಕೇಂದಗಳ ಮೂಲಕ ರೈತ ಉತ್ಪಾದಕ ಸಂಸ್ಥೆಗಳಿಗೆ ತಾಂತ್ರಿಕ ಬೆಂಬಲ

ತೋಟಗಾರಿಕೆ ಇಲಾಖೆಯ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿಯಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಕೃಷಿ ವಿಜ್ಞಾನ ಕೇಂದ್ರ ಹಾಸನ, ಮಂಡ್ಯ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಒಟ್ಟು 08 ರೈತ ಉತ್ಪಾದಕ ಸಂಸ್ಥೆಗಳಿಗೆ ತಾಂತ್ರಿಕ ಬೆಂಬಲದಿಂದ ತೋಟಗಾರಿಕೆ ಬೆಳೆಗಳ ಮುಂಚೂಣಿ ಪ್ರಾತ್ಯಕ್ಷಿಕೆಗಳು (20), ವಿವಿಧ ರಾಜ್ಯಗಳಿಗೆ ಶೈಕ್ಷಣಿಕ ಪ್ರವಾಸ (05), ತರಬೇತಿ ಕಾರ್ಯಕ್ರಮಗಳು (18) ಹಾಗೂ ಕ್ಷೇತ್ರ ಭೇಟಿ (76) ಕಾರ್ಯಕ್ರಮ ಗಳನ್ನು ಆಯೋಜಿಸಲಾಯಿತು.

4.4.11.9 ಇತರ ವಿಸ್ತರಣ ಚಟುವಟಿಕೆಗಳು

ಕೃಷಿ ವಿಜ್ಞಾನ ಕೇಂದ್ರಗಳಲ್ಲಿ, ಸುಧಾರಿತ ತಂತ್ರಜ್ಞಾನಗಳ ಕುರಿತು ಹೆಚ್ಚಿನ ಸಂಖ್ಯೆಯ ರೈತರಿಗೆ ಹಾಗೂ ಇತರ ಪಾಲುದಾರರಿಗೆ ಜಾಗೃತಿ ಮೂಡಿಸಲು ವಿವಿಧ ವಿಸ್ತರಣಾ ಶಿಕ್ಷಣ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತದೆ. ಅಂತೆಯೇ, ಈ ಮುಂದಿನ ವಿಸ್ತರಣಾ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು.

- 151 (2395 ರೈತರು) ಗುಂಪು ಚರ್ಚೆ ಸಭೆ, 1420 (6568) ಕ್ಷೇತ್ರ ಭೇಟಿ, 173 (2075 ರೈತರು), 173 (2075) ತಪಾಸಣಾ ಭೇಟಿ, 35 ರೇಡಿಯೋ/ 50 ದೂರದರ್ಶನ ಕಾರ್ಯಕ್ರಮಗಳು ಹಾಗೂ 51 ಜನಪ್ರಿಯ ಲೇಖನಗಳನ್ನು ಪ್ರಕಟಿಸಲಾಯಿತು.
- 121 ಪ್ರಮುಖ ದಿನಗಳು, 9 ವಸ್ತು ಪ್ರದರ್ಶನಗಳು, 95 (3821) ಕ್ಷೇತ್ರೋತ್ಸವಗಳು, 197 (4706) ಪದ್ಧತಿ ಪ್ರಾತ್ಯಕ್ಷಿಕೆ, 16 (1262)

dams, Open well, Finger millet-ML 365 (improved varieties), Horse gram (PHG 9) Contingency crop, Redgram (BRG-1) dual purpose and high yielding, Foxtail millet (DHFT-103-1) (Crop diversification), Introduction of gift thilapia fingerlings, and swarnadhara poultry birds, Improves the Azola production and Introduction of new fodder crops or new varieties (COFS 31).

4.4.11.7 Attracting and Retaining Youth in Agriculture (ARYA)

The KVK Hadonahalli, Bengaluru Rural district imparted skill training on Vermi Compost Production, Coconut climbing and Bee keeping. Organised 3 on campus training programmes for 100 trainees and 2 field visits were conducted under bee keeping to entrepreneur units who were trained by ICAR – KVK, BRD in the previous training programme. The trainees gained knowledge through method demonstrations (6) *i.e.,* coconut palm climbing and cultivation management, vermi composting and bee keeping.

4.4.11.8 Linking KVKs to FPO for technical support under CHD scheme

The KVKs (Hassan, Mandya and Bangalore Rural District) working under the jurisdiction of UASB technically supported eight FPOs under CHD scheme of Departmentt. of Horticulture. The activities carried out are Front Line Demonstrations of Horticulture crops (20), Exposure visits to other states (05), Training programmes (18) and Field visits (76).

4.4.11.9 Other Extension Activities

The KVKs organized various extension educational activities to create awareness among larger number of farmers and other stakeholders regarding improved technologies. Accordingly, the following extension educational activities were organized.

- Organized 151 (2395 farmers) Group discussion meetings, 1420 field visits covering 6568 farmers, 173 diagnostic visits, 35 Radio / 50 TV programs and 51 popular articles were published.
- Organized 121 important days/events, 9 exhibitions, 95 (3821) field days, 197 (4706) method

ಪಶು ಆರೋಗ್ಯ ತಪಾಸಣ ಶಿಬಿರ, 42 (1212) ಮಣ್ಣು ಆರೋಗ್ಯ ತಪಾಸಣಾ ಶಿಬಿರ, 58 ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರ ಆಯೋಜಿಸಿದ್ದು, 13461 ನೇರ ಭೇಟಿ ಮೂಲಕ ಮತ್ತು 21454 ದೂರವಾಣಿ ಮೂಲಕ ರೈತರಿಗೆ ಸಲಹೆ ನೀಡಲಾಯಿತು ಹಾಗೂ ನೋಂದಣಿಯಾದ 193 ರೈತರಿಗೆ 240015 ಸಂದೇಶ ರವಾನೆ ಮಾಡಲಾಗಿತ್ತು.

- ಕೃಷಿ ವಿಜ್ಞಾನ ಕೇಂದ್ರಗಳ ವಿಜ್ಞಾನಿಗಳು, ಸಂಪನ್ಮೂಲ ವ್ಯಕ್ತಿಗಳಾಗಿ 521 ಉಪನ್ಯಾಸಗಳಲ್ಲಿ ಭಾಗವಹಿಸಿದ್ದರು. 361 ವರ್ತಮಾನ ಪತ್ರಿಕೆ ಪ್ರಕಟಣೆ ಹಾಗೂ 1134 ವಾಟ್ಸ್‌ಆಪ್ ಪ್ರಶ್ನೆಗಳಿಗೆ ಉತ್ತರವನ್ನು ನೀಡಲಾಗಿದೆ

4.4.11.10 ನೂತನ ಉಪಕ್ರಮಗಳು

ಅ) **ಗ್ರಾಮೀಣ ಯುವಕರ ಕೌಶಲ್ಯ ತರಬೇತಿ :** ಮ್ಯಾನೇಜ್ ಹೈದರಾಬಾದ್‌ನ ಆರ್ಥಿಕ ನೆರವಿನೊಂದಿಗೆ ವಿಸ್ತರಣಾ ಶಿಕ್ಷಣ ಘಟಕ, ಮೈಸೂರು, ಕೃಷಿ ವಿಜ್ಞಾನ ಕೇಂದ್ರಗಳು ಬೆಂಗಳೂರು ಗ್ರಾಮಾಂತರ, ತುಮಕೂರು, ಮಂಡ್ಯ ಮತ್ತು ರಾಮನಗರ, 75 ಜನ ಯುವ ರೈತರು/ರೈತ ಮಹಿಳೆಯರಿಗೆ ಕ್ರಮಾನುಸಾರ 07 ದಿನಗಳ 05 ತರಬೇತಿಯನ್ನು ಸಾವಯವ ಕೃಷಿ, ನರ್ಸರಿ ನಿರ್ವಹಣೆ, ಮಣ್ಣು ಪರೀಕ್ಷೆ ಮತ್ತು ಸಮಗ್ರ ಪೋಷಕಾಂಶಗಳ ನಿರ್ವಹಣೆ ಮತ್ತು ಸಾವಯವ ಕೃಷಿಯಲ್ಲಿ ಸಾವಯವ ಗೊಬ್ಬರ ಮತ್ತು ಕೀಟನಾಶಕಗಳ ಉತ್ಪಾದನೆ, ಬಳಕೆ ಮತ್ತು ಪ್ರಾಮುಖ್ಯತೆ ವಿಷಯಗಳಲ್ಲಿ ಆಯೋಜಿಸಲಾಗಿತ್ತು.

ಆ) **ಜಿಲ್ಲಾ ಕೃಷಿ ಹವಾಮಾನ ಘಟಕಗಳು :** ಕೃಷಿ ವಿಜ್ಞಾನ ಕೇಂದ್ರ, ಮಂಡ್ಯ, ಚಾಮರಾಜನಗರ, ತುಮಕೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ ಭಾರತೀಯ ಹವಾಮಾನ ಇಲಾಖೆ ಮತ್ತು ಭಾರತ ಕೃಷಿ ಅನುಸಂದಾನ ಪರಿಷತ್, ನವದೆಹಲಿರವರ ಆರ್ಥಿಕ ನೆರವಿನಿಂದ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಕೃಷಿ ಹವಾಮಾನ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, 4003 ಕೃಷಿ ಹವಾಮಾನ ಸಂದೇಶಗಳನ್ನು 11530 ನೊಂದಾಯಿತ ರೈತರಿಗೆ ಕಳುಹಿಸಲಾಗಿದೆ.

ಇ) **ಪರಾಂಪರಾಗತ ಕೃಷಿ ವಿಕಾಸ ಯೋಜನೆ :** ಯೋಜನೆಯು 2019–20 ಸಾಲಿನಲ್ಲಿ ಕೃಷಿ ವಿಜ್ಞಾನ ಕೇಂದ್ರ, ಹಾಸನದಲ್ಲಿ ಪ್ರಾರಂಭವಾಗಿದ್ದು, ಇದರಲ್ಲಿ ರೈತರಿಗೆ ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಸಂಪರ್ಕವನ್ನು ಕಲ್ಪಿಸಿರುವುದು ಈ ಯೋಜನೆಯ ಮೈಲುಗಲ್ಲಾಗಿದೆ. ಈ ಯೋಜನೆಯ ಅಡಿಯಲ್ಲಿ ನೆಡೆಸಲಾದ ಪ್ರಮುಖ ವಿಸ್ತರಣಾ ಕಾರ್ಯಕ್ರಮಗಳೆಂದರೆ ಸಾವಯವ ಕೃಷಿಯ ಬಗ್ಗೆ ಜಾಗೃತಿ ಮೂಡಿಸುವುದು, ಜೈವಿಕ ಗೊಬ್ಬರಗಳ ತಯಾರಿಕೆ ಮಾಡಿಸುವುದು, ಸಾವಯವ ಕೃಷಿ ಪದ್ಧತಿಗಳ ಬಗ್ಗೆ ತರಬೇತಿ, ದ್ರವ ಸಾವಯವ ಗೊಬ್ಬರಗಳ ಬಳಕೆಯ ವಿಧಾನಗಳನ್ನು ತೋರಿಸುವುದು, ಸಾವಯವ ಭತ್ತ ಬೆಳೆಗಾರರ ರೈತ ಆಸಕ್ತಿ ಗುಂಪುಗಳ ರಚನೆಯ ಕುರಿತು ಅರಿವು, ಸಾವಯವ ಗೊಬ್ಬರಗಳು (ಎಎಂಸಿ, ಬೇವಿನ ಎಣ್ಣೆ, ಹೊಂಗೆ ಹಿಂಡಿ, ಅಜೋಸ್ಪಿರಿಲಮ್, ಪಿಎಸ್‌ಬಿ, ಇತ್ಯಾದಿ) ಬಳಕೆ, ತರಬೇತಿ, ಕ್ಷೇತ್ರ ಬೇಟಿಗಳು, ಕ್ಷೇತ್ರೋತ್ಸವ, ಇತ್ಯಾದಿ.

ಈ) **ಪೌಷ್ಟಿಕ ಕೈತೋಟ :** ಗ್ರಾಮೀಣ ಪ್ರದೇಶದ ಅಪೌಷ್ಟಿಕತೆಯನ್ನು ಹೋಗಲಾಡಿಸಲು ವಿಶ್ವವಿದ್ಯಾನಿಲಯದ ಕೃಷಿ ವಿಜ್ಞಾನ ಕೇಂದ್ರಗಳು ಪೌಷ್ಟಿಕ ಕೈತೋಟಗಳನ್ನು 122 ರೈತ ಕುಟುಂಬ ತಾಕುಗಳಲ್ಲಿ

demonstrations, 16 (1262) animal health camps, 42 (1212) soil heath camps, 58 bimonthly technical workshops, provided consultancy through face to face contact 13461 and through telephone 21454 for farmers and 193 SMS were sent to 240015 registered farmers.

- The KVK Scientists delivered 521 lectures as resource persons, 361 news paper coverage's and answered 1134 whats app SMS quiries

4.4.11.10 New Initiatives

a) **Skill Training for Rural Youth:** Extension Education Unit, Mysore, Krishi Vigyan Kendra, Bangalore Rural, Tumkur, Mandya and Ramanagar organised five skill trainings on Organic farming, Nursery management, Soil testing & Integrated Nutrient Management and Production, usage & importance of organic fertilizer and pesticides in organic farming topics for six days duration for 75 rural youth sponsored by MANAGE, Hyderabad.

b) **District Agro Met Units (DAMU)**: KVK, Mandya, Chamarajanagara, Tumkur and Ramanagar established District Agro Met Units with the support of Indian Metrological Department and ICAR, New Delhi. During the period the KVKs disseminated 4003 Agro. Met advisories to 11530 registered farmers.

c) **Paramparagath Krishi Vikas Yojana:** The programme is an ongoing programme implemented in KVK Hassan initiated in the year 2019-20. Value addition and market linkage to the farmers were milestones of the programme. The significant extension activities conducted under this programme were created awareness on organic farming, preparation of biofertilizers, liquid organic manures, awareness on formation of organic paddy growers groups, use of organic manures (AMC, azospirullum and PSB etc.), training programmes,field days, filed visits etc.,

d) **Nutri Farms:** To overcome malnutrition among rural farmers, KVKs, established 122 nutri gardens at village level. After the introduction of

ಅನುಷ್ಠಾನ ಮಾಡಿವೆ. ಪೌಷ್ಟಿಕ ಕೈತೋಟ ಕೈಗೊಂಡ ನಂತರ ಹಾಲು ಮತ್ತು ಹಾಲಿನ ಉತ್ಪನ್ನಗಳ, ಇತರೆ ತರಕಾರಿ ಮತ್ತು ಹಣ್ಣುಗಳ ಸೇವನೆಯಲ್ಲಿ ಶೇ. 5.07, ಶೇ. 7.58 ಮತ್ತು ಶೇ. 4.23 ಹೆಚ್ಚಳ ಕಂಡುಬಂದಿತು.

4.4.12 ಕೃಷಿ ಮೇಳ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ವಿವಿಧ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ಪ್ರತಿ ವರ್ಷ ಕೃಷಿಮೇಳವನ್ನು ಪರಿಣಾಮಕಾರಿಯಾಗಿ ಏರ್ಪಡಿಸಿ ರೈತರಿಗೆ ಅರಿವು ಮೂಡಿಸುವ ಪ್ರಯತ್ನ ಮಾಡುತ್ತಾ ಬಂದಿದೆ. ಆದರೆ ಪ್ರಸಕ್ತ ವರ್ಷದಲ್ಲಿ ಕೋವಿಡ್–19 ಸಂದಿಗ್ಧ ಪರಿಸ್ಥಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಾರ್ಗಸೂಚಿಗಳಿಗೆ ಅನುಗುಣವಾಗಿ ಅನ್ನದಾತರಿಗೆ ಕೃಷಿ ತಂತ್ರಜ್ಞಾನಗಳು ಸಕಾಲದಲ್ಲಿ ತಲುಪುವಂತಾಗಲು ಈ ವರ್ಷ ಕೃಷಿ ಮೇಳವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಸರಳವಾಗಿ ಭೌತಿಕ ಮತ್ತು ಡಿಜಿಟಲ್ ರೂಪದಲ್ಲಿ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ 2020ರ ನವೆಂಬರ್ 11, 12 ಮತ್ತು 13 ರಂದು ಮೂರು ದಿನಗಳ ಕಾಲ ಆಯೋಜಿಸಲಾಯಿತು.

ಈ ಮೇಳದಲ್ಲಿ ವಿವಿಧ ಬೆಳೆ ತಳಿ ಪ್ರಾತ್ಯಕ್ಷಿಕೆಗಳು ಮತ್ತು ಸಣ್ಣ ಪ್ರಮಾಣದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ವಿವಿಧ ವಿಭಾಗಗಳಿಂದ ಹಾಗೂ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಹೆಸರಘಟ್ಟದ ವತಿಯಿಂದ 18 ಮಳಿಗೆಗಳ ಕೃಷಿ ವಸ್ತುಪ್ರದರ್ಶನ ಹಾಗೂ ಬೆಳೆ ಪ್ರಾತ್ಯಕ್ಷಿಕೆ ತಾಕುಗಳಲ್ಲಿ 28 ಮಳಿಗೆಗಳ ಬೆಳೆ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಸುಮಾರು 1.1 ಲಕ್ಷ ರೈತರು ಹಾಗೂ ಸಾರ್ವಜನಿಕರು ಭೌತಿಕ ಮತ್ತು ಸಾಮಾಜಿಕ ಜಾಲತಾಣ ಮೂಲಕ ಈ ಮೇಳದ ಸದುಪಯೋಗ ಪಡೆದುಕೊಂಡರು.

ಇದೇ ಸಂದರ್ಭದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಆಡಳಿತ ವ್ಯಾಪ್ತಿಗೆ ಬರುವ ರಾಜ್ಯದ ದಕ್ಷಿಣ ಭಾಗದ 10 ಜಿಲ್ಲೆಗಳಿಂದ ಆಯ್ಕೆಯಾದ ಜಿಲ್ಲಾ ಮಟ್ಟದ ಪ್ರಗತಿಪರ ರೈತ ಹಾಗೂ ರೈತಮಹಿಳೆ ಪ್ರಶಸ್ತಿ (17), ತಾಲ್ಲೂಕು ಮಟ್ಟದ ಯುವ ರೈತ ಹಾಗೂ ಯುವ ರೈತಮಹಿಳೆ ಪ್ರಶಸ್ತಿ (94) ಮತ್ತು ರಾಜ್ಯ ಮಟ್ಟದ ಪ್ರಶಸ್ತಿ (6) ಪುರಸ್ಕೃತರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಭೌತಿಕವಾಗಿ (498), ವಾಟ್ಸ್‌ಆಪ್ (383) ಹಾಗೂ ಡಿಜಿಟಲ್ (50) ಮೂಲಕ ರೈತರಿಂದ ಸ್ವೀಕರಿಸಿದಂತ ಕೃಷಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ತಜ್ಞರ ತಂಡದಿಂದ ಸಲಹೆಗಳನ್ನು ನೀಡಲಾಯಿತು.

ದಿನಾಂಕ 11–11–2020 ರಂದು ಬೆಳಿಗ್ಗೆ 10 ಗಂಟೆಯಿಂದ ರೈತಗೀತೆ ಹಾಡುವುದರಿಂದ ಪ್ರಾರಂಭವಾದ ಕೃಷಿಮೇಳ, ಡಾ॥ ಎಂ. ಬೈರೇಗೌಡ, ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಇವರು ಎಲ್ಲರನ್ನು ಸ್ವಾಗತ ಮಾಡಿದರು, ತದನಂತರ ಇವರ ಸ್ವಾಗತ ಭಾಷಣದಲ್ಲಿ ಕೋವಿಡ್–19 ನಿಂದ ಸರಳ ಕೃಷಿಮೇಳದ ಬಗ್ಗೆ ವಿವರಿಸಿದರು. ಮುಂದುವರೆದು, ಕೃಷಿಮೇಳವನ್ನು ಅನ್‌ಲೈನ್‌ನಲ್ಲಿ ಬಿತ್ತರಿಸುವ ಸಮಯ ಮತ್ತು ಬಿಡುಗಡೆಯಾಗಲಿರುವ ಮೂರು ತಳಿಗಳಾದ ನೆಲಗಡಲೆಯಲ್ಲಿ ಜಿಕೆವಿಕೆ 27, ಅಲಸಂದೆಯಲ್ಲಿ ಕೆ.ಸಿ. 8 ಮತ್ತು ಮೇವಿನ ಬೆಳೆಯಲ್ಲಿ ಅಲಸಂದೆ ಎಂ.ಎಫ್.ಸಿ.–09–3 (ಎಂ.ಎಫ್.ಸಿ–3) ಮತ್ತು 17 ತಾಂತ್ರಿಕತೆಗಳ ಬಗ್ಗೆ ಮಾಹಿತಿ ನೀಡಿದರು

nutrigardens the consumption rate of milk & milk products, vegetables and fruits increased to 5.07 per cent, 7.58 per cent and 4.23 per cent among the beneficiaries.

4.4.12 Krishimela

The University of Agricultural Sciences, Bangalore used to organize Krishimela every year in collaboration with development departments of Karnataka. Due to Covid-19 Pandemic throughout the country this year University of Agricultural Sciences Bangalore has organized both physical and digital Krishimela to disseminate the agricultural technologies to the farmers timely from November 11th to 13th, 2020 at Gandhi Krishi Vigyan Kendra, Bengaluru.

18 exhibition stalls were arranged by the various Departments of UAS, Bangalore and Indian Institute of Horticultural Research, Bangalore by exhibiting their technologies and products. Demonstrated 28 crop demonstrations on recently released different crop varieties by the University. About 1.1 lakhs farmers and general public were participated in the mela both online and offline.

During the Krishimela various farmers awards were felicitated such as District Level Progressive Farmers / Farmwomen awards (17), Taluk Level Best Youth Farmer / Farmwomen awards (94) and State Level Best Farmers awards (6).

In the programme, provided the suitable agriculture solutions to the farmers on their queries related to agriculture through the physical (498), whats app (383) and online (50) consultancy services.

On 11-11-2020, the programme was started from morning 10.00 a.m. Dr. M. Byregowda, Director of Extension, UAS-B welcomed all the dignitaries Dr. Indresh, Vice-Chancellor, University of Horticultural Sciences, Bagalkot, Dr. Kotikal, Director of Extension, University of Horticultural Sciences, Bagalkot were present. He welcomed Dr. A.K. Singh, DG, ICAR; Dr. Pandey, ADG and member of Board Management; Dr. V. Venkatasubranian, Director, ICAR-Agricultural Technology Application and Research Institute, Bangalore and Dr. S. Rajendra

ಹಾಗೂ ಕೃಷಿಮೇಳದಲ್ಲಿ ವಿತರಿಸುವ ವಿವಿಧ ಪ್ರಶಸ್ತಿಗಳ ಬಗ್ಗೆ ವಿವರ ನೀಡಿದರು. ತೋಟಗಾರಿಕ ವಿಶ್ವವಿದ್ಯಾನಿಲಯ ಬಾಗಲಕೋಟೆಯ ಕುಲಪತಿಗಳಾದ ಡಾ. ಇಂದಿರೇಶ್, ವಿಸ್ತರಣಾ ನಿರ್ದೇಶಕರಾದ ಡಾ. ವೈ.ಕೆ. ಕೋಟಿಕಲ್, ವರ್ಚುಯಲ್ ಮೂಲಕ ಪಾಲ್ಗೊಂಡ ಭಾ.ಕೃ.ಅ.ಪ., ನವದೆಹಲಿ ಉಪ–ಮಹಾನಿರ್ದೇಶಕರಾದ, ಡಾ. ಎ.ಕೆ. ಸಿಂಗ್, ಸಹಾಯಕ ನಿರ್ದೇಶಕರು (ಇ.ಪಿ. ಮತ್ತು ಹೆಚ್.ಎಸ್), ಭಾ.ಕೃ.ಅ.ಪ., ನವದೆಹಲಿ ಮತ್ತು ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ವ್ಯವಸ್ಥಾಪನ ಮಂಡಳಿ ಸದಸ್ಯರೂ ಆದ ಡಾ. ಪಿ.ಎಸ್. ಪಾಂಡೆ ರವರಿಗೆ, ಐ.ಸಿ.ಎ.ಆರ್–ಕೃಷಿ ತಂತ್ರಜ್ಞಾನ ಅಳವಡಿಕೆ ಸಂಶೋಧನಾ ಸಂಸ್ಥೆ ಬೆಂಗಳೂರಿನ ನಿರ್ದೇಶಕರಾದ ಡಾ. ವಿ. ವೆಂಕಟಸುಬ್ರಮಣಿಯನ್ ರವರಿಗೆ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಎಸ್. ರಾಜೇಂದ್ರ ಪ್ರಸಾದ್ ರವರಿಗೆ. ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಡಾ. ಪಿ.ಹೆಚ್. ರಾಮಾಂಜಿನಿ ಗೌಡ, ಶ್ರೀ ಟಿ.ಎಂ. ಅರವಿಂದ್, ಶ್ರೀ ಓ.ಎಸ್. ದಯಾನಂದ, ಶ್ರೀ ಆರ್. ಶ್ರೀರಾಮ, ಶ್ರೀ ಸುರೇಶ್ ಮಾರ್ಗದ್ ಹಾಗೂ ಮಾಧ್ಯಮ ಪ್ರತಿನಿಧಿಗಳಿಗೆ ಮತ್ತು ನೆರೆದಿದ್ದ ಎಲ್ಲಾ ರೈತ ಬಾಂಧವರಿಗೆ ಸ್ವಾಗತ ಕೋರಿದರು.

Prasad, Vice-Chancellor, UAS, Bangalore and also Members of Board of Management: Dr. Ramanjigowda, Sri Dayanad, Sri T.M. Aravind, Sri Suresh Muragad and Press and Public gathered there to the simple Krishimela. Followed by this, he described the features of Krishimela. Further, he said the new varieties to be released in the Krishimela which included GKVK 27 in Groundnut, K.C. 8 in Cowpea and M.F.C-09-3 in fodder crop cowpea. Added to this, he said 17 other technologies have been developed and released on the occasion and also, highlighted the Awards to be given.

ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ಕುಲಪತಿಗಳಾದ ಡಾ. ಎಸ್. ರಾಜೇಂದ್ರ ಪ್ರಸಾದ್ ಗಣ್ಯರೊಂದಿಗೆ ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವರ್ಚುಯಲ್ ಮೂಲಕ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಕೃಷಿ ವಿಸ್ತರಣೆ ವಿಭಾಗದ ಉಪ–ಮಹಾನಿರ್ದೇಶಕರಾದ ಡಾ. ಎ.ಕೆ. ಸಿಂಗ್ ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿ ತಾವು ಭಾರತೀಯ ವಿಜ್ಞಾನ ಕಾಂಗ್ರೆಸ್‌ನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿಗೆ ಬಂದಿರುವುದಾಗಿಯೂ ಮತ್ತು ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಮಾಡುತ್ತಿರುವ ಬೀಜೊತ್ಪಾದನೆ ಕಾರ್ಯಕ್ರಮದ ಬಗ್ಗೆ ಪ್ರಶಂಸಿದರು ಹಾಗೂ ರೈತರಿಗೆ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ಕೊಡುಗೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮುಂದುವರೆದು, ರೈತರ ಆದಾಯವನ್ನು ದ್ವಿಗುಣಗೊಳಿಸುವ ಬಗ್ಗೆ ಕೇಂದ್ರ ಸರ್ಕಾರದ ಮತ್ತು ಭಾರತೀಯ ಕೃಷಿ ಅನುಸಂಧಾನ ಪರಿಷತ್ ಕೈಗೊಳ್ಳುತ್ತಿರುವ ಕಾರ್ಯಕ್ರಮಗಳಾದ ಮುಕ್ತ ಮಾರುಕಟ್ಟೆ ವ್ಯವಸ್ಥೆ, ತೋಟಗಾರಿಕೆ ಪದಾರ್ಥಗಳಿಗೆ ರಫ್ತು ವ್ಯವಸ್ಥೆ, ಸಂಸ್ಕರಣಾ ವ್ಯವಸ್ಥೆ, ಸಮಗ್ರ ಕೃಷಿ, ರೈತರಿಗೆ ತಾವು ಬೆಳೆದ ಬೆಳೆಗಳನ್ನು ದಾಸ್ತಾನು ಮಾಡುವ ಸೌಲಭ್ಯಗಳು ಹಾಗೂ ರೈತರು ಸ್ವಸಹಾಯ ಸಂಘಗಳನ್ನು ಸ್ಥಾಪಿಸಲು ಪ್ರೋತ್ಸಾಹ ನೀಡುವುದರ ಬಗ್ಗೆ ಮಾಹಿತಿ ನೀಡಿದರು.

Dr. S.Rajendra Prasad, Vice-Chancellor of University of Agricultural Sciences, Bangalore lit the lamp along with other dignitaries. Dr. A.K. Singh, Deputy Director General (Agil. Extension), ICAR, New Delhi address the gathering virtually, he admired that UAS-B for conducting 107th Science Congress and recalled his stay in Bangalore as very pleasant. He appreciated UAS-B seeds production activates and briefed the programmes of ICAR which are in the pipeline: Direct Marketing export promotion in Horticulture crops, Processing and IFS and establishment of Farmers Producer Organizations (FPOs) for sustainable agriculture.

ಐ.ಸಿ.ಎ.ಆರ್–ಕೃಷಿ ತಂತ್ರಜ್ಞಾನ ಅಳವಡಿಕೆ ಸಂಶೋಧನಾ ಸಂಸ್ಥೆ ಬೆಂಗಳೂರಿನ ನಿರ್ದೇಶಕರಾದ ಡಾ. ವಿ. ವೆಂಕಟಸುಬ್ರಮಣಿಯನ್ ರವರು ಕೋವಿಡ್–19 ಸಂದರ್ಭದಲ್ಲಿ ಕೃಷಿಮೇಳ ಆಚರಿಸುತ್ತಿರುವುದು ಪ್ರಶಂಸನೀಯ ಹಾಗೂ ರೈತರಿಗೆ Climate Resilient Agriculture and Mitigate ಎಂಬ ಪ್ರಾಯೋಜನೆಯಿಂದ ರೈತರಿಗೆ ಪ್ರತಿ ಎಕರೆಗೆ ತಗಲುವ ವೆಚ್ಚ ಕಡಿಮೆಯಾಗಬೇಕು ಎಂದರು. ರೈತರಿಗೆ ಕೃಷಿ ಆದಾಯ ದ್ವಿಗುಣವಾಗಬೇಕು, ಪೌಷ್ಟಿಕ ಆಹಾರದತ್ತ ಗಮನ ಕೊಡಬೇಕು ಮತ್ತು ಯುವಕರನ್ನು ಕೃಷಿಯತ್ತ ಹೆಚ್ಚು ಆಕರ್ಷಿಸಬೇಕು ಎಂದು ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ರಾಮನಗರ, ಹಾಸನ ಮತ್ತು ತುಮಕೂರು ಜಿಲ್ಲೆಗಳಿಂದ ಆಯ್ಕೆಯಾದ ಜಿಲ್ಲಾಮಟ್ಟದ ಪ್ರಗತಿಪರ ರೈತ / ರೈತಮಹಿಳೆ ಹಾಗೂ ತಾಲ್ಲುಕು ಮಟ್ಟದ ಯುವ ರೈತ / ರೈತಮಹಿಳೆಯರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕೃಷಿ

Dr. V. Venkatasubramaniyan, Director, ICAR-ATARI, Bangalore addressed the gathering and said focus should be given to the climate resilient agriculture to mitigate the challenges of agriculture. Further, he said the cost of production should be reduced. Farmers income should doubled diversification of farming activities looking to market demand, encouragement of nutrition garden, Attracting Rural Youth to Agriculture (ARYA) should be focused in coming days. On the same occasion, District Level and Taluk Level awards were given to the Farmers of Ramanagaram, Hassan and Tumakur District farmers. The

ವಿಶ್ವವಿದ್ಯಾನಿಲಯ ಬೆಂಗಳೂರಿನ ಸಂಶೋಧನಾ ನಿರ್ದೇಶಕರಾದ ಡಾ. ವೈ.ಜಿ. ಷಡಾಕ್ಷರಿರವರು ವಂದನಾರ್ಪಣೆ ಸಲ್ಲಿಸಿದರು.

ದಿನಾಂಕ 12–11–2020 (ಗುರುವಾರ) ರಂದು ಬೆಳಿಗ್ಗೆ 10 ಗಂಟೆಗೆ ಕೃಷಿಮೇಳದ ಕಾರ್ಯಕ್ರಮ ಪ್ರಾರಂಭವಾಯಿತು. ಈ ಕಾರ್ಯಕ್ರಮ ದಲ್ಲಿ ಡೀನ್(ಕೃಷಿ) ಡಾ. ಡಿ.ಎಲ್. ಸಾವಿತ್ರಮ್ಮ ರವರು ಎಲ್ಲಾ ಗಣ್ಯರನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಿದರು. ವಿಶೇಷ ಅತಿಥಿಗಳಾಗಿ ಕೃಷಿ ಮತ್ತು ತೋಟಗಾರಿಕ ವಿಶ್ವವಿದ್ಯಾನಿಲಯ ಶಿವಮೊಗ್ಗದ ಉಪ ಕುಲಪತಿಗಳಾದ ಡಾ. ಮಂಜುನಾಥ್ ಕೆ. ನಾಯ್ಕ್ ರವರು ಆನ್‌ಲೈನ್‌ನಲ್ಲಿ ಭಾಷಣ ಮಾಡಿದರು. ಇವರು ಕೃಷಿಯಲ್ಲಿ ಪ್ರಗತಿ ಸಾಧಿಸಲು ರೈತರ ಶ್ರಮಕ್ಕೆ ತಕ್ಕ ಮಾರುಕಟ್ಟೆ ದೊರೆಯಬೇಕು ಮತ್ತು ಮೌಲ್ಯವರ್ಧನೆಯಿಂದ ಲಾಭಗಳಿಸಬಹುದೆಂದು ಅಭಿಪ್ರಾಯಪಟ್ಟರು. ಕೃಷಿ ವಿಶ್ವವಿದ್ಯಾನಿಲಯ ರಾಯಚೂರಿನ ಉಪಕುಲಪತಿಗಳಾದ ಡಾ. ಕೆ. ಎನ್. ಕಟ್ಟಿಮನಿ ರವರು ವಿಶೇಷ ಅತಿಥಿಗಳಾಗಿ ಭಾಷಣ ಮಾಡಿ ಕೃಷಿಯಲ್ಲಿ ಉತ್ಪಾದನೆ ಹೆಚ್ಚಿಸಬೇಕು ಹಾಗೂ ಈತ್ತೀಚಿನ ದಿನಗಳಲ್ಲಿ ವಿದೇಶದಿಂದ ಭಾರತಕ್ಕೆ ಹಿಂತಿರುಗಿದವರು ಶೇ. 25–30 ರಷ್ಟು ಕೃಷಿಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಸರ್ಕಾರ ಕನಿಷ್ಠ ಬೆಂಬಲ ಬೆಲೆಯನ್ನು ರೈತರಿಗೆ ಕೋಡಬೇಕು, ಸಮಗ್ರ ಕೃಷಿ ಇಂದಿನ ದಿನಗಳಲ್ಲಿ ಒಳ್ಳೆಯ ಲಾಭದಾಯಕ ಎಂದು ಅಭಿಪ್ರಾಯಪಟ್ಟರು, ಮುಂದುವರೆದು, ಪ್ರಶಸ್ತಿ ವಿಜೇತ ರೈತರು ತಮ್ಮ ಅನುಭವವನ್ನು ಇತರೆ ರೈತರಿಗೆ ತಿಳಿಸಿದಾಗ ಮಾತ್ರ ಈ ಪ್ರಶಸ್ತಿಗೆ ಅರ್ಥಸಿಗುತ್ತದೆಂದು ಅಭಿಪ್ರಾಯ ಪಟ್ಟರು.

ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ವ್ಯವಸ್ಥಾಪನ ಮಂಡಳಿ ಸದಸ್ಯರಾದ ಶ್ರೀ ಟಿ.ಎಂ. ಅರವಿಂದ್ ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿ, ಸಮಗ್ರ ಕೃಷಿ ಒಂದು ಉತ್ತಮ ಮಾರ್ಗ ಹಾಗೂ ಹನಿ ನೀರಾವರಿ ಬಳಸುವುದರಿಂದ ನೀರಿನ ಉಳಿತಾಯ ಮಾಡಬಹುದು ಎಂದು ತಿಳಿಸಿದರು. ರೋಗ ನಿರೋಧಕ ತಳಿಗಳನ್ನು ಕೃಷಿ ವಿಜ್ಞಾನಿಗಳು ಅಭಿವೃದ್ಧಿಪಡಿಸಬೇಕೆಂದು ಅಭಿಪ್ರಾಯಪಟ್ಟರು. ರೈತರು ತಮ್ಮ ಆದಾಯ ಹೆಚ್ಚಿಸಿಕೊಳ್ಳಲು ಮರಗಳನ್ನು ಬೆಳೆಸಬೇಕೆಂದರು.

ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ವ್ಯವಸ್ಥಾಪನ ಮಂಡಳಿ ಸದಸ್ಯರಾದ ಡಾ. ಪಿ.ಹೆಚ್. ರಾಮಾಂಜಿನಿ ಗೌಡ ರವರು ಮಾತನಾಡಿ ಕೃಷಿಯಲ್ಲಿ ಮುಖ್ಯ ತೊಂದರೆ, ಬೆಳೆಯುವುದರಿಂದಲ್ಲ ಬದಲಾಗಿ ಮಾರುಕಟ್ಟೆ ಎಂಬುದಾಗಿ ತಿಳಿಸಿದರು. ಹನಿನೀರಾವರಿ ಪದ್ಧತಿಯಿಂದ ನೀರಿನ ಅತಿಯಾದ ಬಳಕೆಯನ್ನು ನಿಯಂತ್ರಿಸಬಹುದು. ಕರ್ನಾಟಕ ಹಾಲು ಒಕ್ಕೂಟ(ಕೆ.ಎಂ.ಎಫ್) ಮಾದರಿಯಲ್ಲಿ ರೈತರು ಕೃಷಿ ಉತ್ಪಾದನ ಸಂಘ ಸಂಸ್ಥೆಗಳನ್ನು ರಾಜ್ಯಮಟ್ಟದಲ್ಲಿ ಸ್ಥಾಪಿಸಿ, ಸಾವಯವ ಕೃಷಿಗೆ ಮತ್ತು ಉತ್ಪನ್ನಗಳಿಗೆ ಮಾರುಕಟ್ಟೆ ನಿರ್ಮಿಸುವಂತೆ ಕರೆ ನೀಡಿದರು.

ಮುಂದುವರೆದು, ಬೆಂಗಳೂರು ನಗರ, ಮಂಡ್ಯ, ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳ ಮತ್ತು ತಾಲ್ಲೂಕುಗಳ ಪ್ರಶಸ್ತಿ ವಿಜೇತರಿಗೆ ಗೌರವಿಸಲಾಯಿತು. ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ಡೀನ್ (ಸ್ನಾತ್ತಕೋತ್ತರ) ಡಾ. ಎನ್. ಶ್ರೀನಿವಾಸ್ ರವರು ವಂದನಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮ ಮುಕ್ತಾಯವಾಯಿತು.

ಕೃಷಿಮೇಳ–2020 ಸಮಾರೋಪ ಸಮಾರಂಭ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದ ಕಾರ್ಯಕ್ರಮವು ದಿನಾಂಕ 13–11–2020 ರಂದು ಬೆಳಿಗ್ಗೆ 11.30 ಗಂಟೆಗೆ ಪ್ರಾರಂಭವಾಯಿತು. ಕೃಷಿ

Programme ended with vote of thanks by Dr. Y.G. Shadakshari, Director of Research, UAS, Bangalore.

On 12-11-2020 (Thursday), the second day programme started at 10.00 AM. Dr. D.L. Savithramma, Dean (Agri), UAS, Bangalore welcomed all the dignitaries to the programme. Dr. M.K. Nayak, Vice-Chancellor of UAHS Shivamogga, while addressing the gathering virtually he said the market facility should be given to the farmers and value addition yields good remuneration in the covid-19 period, social media, Whatsapp helped farmers. Dr. Kattimani, Vice-Chancellor of UAS Raichur, said to increase our agriculture production, we should encourage the people who were coming back to agriculture 22-25 per cent from the overseas, also minimum support price should be extended to the farmers by the government. Integrated Farming System is more beneficial to the farmers. The Awardee farmer should translate their activities by imparting what they have done to the other farmers then only this award is meaningful he said.

Sri T.M. Aravind, Member of Board of Management said the Integrated Farming System is most suitable in the present days to conserve the water drip irrigation should be increased, by conserving wastage of water we can grow more crops he said, Further he said UAS, Bangalore scientists could be developed pest resistant varieties in the coming days and agro forestry will yield good returns he said.

Dr. P.H. Ramanjinigowda, Member of Board of Management opined that marketing was the major problem, but not cultivation. He appealed to the farmers to use Drip Irrigation and consolidate themselves in to FPOs on the lines of KMF in Karnataka, also organic cell for certification of organic products should be encouraged at the state level.

Further, the farmers of Chamarajanagar, Mysore and Mandya districts and Taluks award winners were felicitated on the occasion. Dr. Srinivasa, Dean (PGS) proposed vote of thanks.

On 13-11-2020 Krishimela valedictory and award distribution programme started at 11.30 a.m., Hon'ble Vice-Chancellor Dr. S. Rajendra Prasad, UAS,

ವಿಶ್ವವಿದ್ಯಾನಿಲಯ ಬೆಂಗಳೂರಿನ ಕುಲಪತಿಗಳಾದ ಡಾ. ಎಸ್. ರಾಜೇಂದ್ರ ಪ್ರಸಾದ್ ರವರು ಕಾರ್ಯಕ್ರಮಕ್ಕೆ ವೀಡಿಯೋ ಸಂದೇಶ ನೀಡಿರುವ ಶ್ರೀ ಡಿ.ವಿ. ಸದಾನಂದಗೌಡ, ಸನ್ಮಾನ್ಯ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು, ಭಾರತ ಸರ್ಕಾರ, ಇವರನ್ನು ಗೌರವಾನ್ವಿತ ಮುಖ್ಯ ಅತಿಥಿಗಳಾಗಿ ಆಗಮಿಸಿರುವಂತಹ ಕರ್ನಾಟಕ ಸರ್ಕಾರದ ಕೃಷಿ ಸಚಿವರು ಹಾಗೂ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ಸಹ ಕುಲಾಧಿಪತಿಗಳಾದ ಸನ್ಮಾನ್ಯ ಶ್ರೀ ಬಿ.ಸಿ. ಪಾಟೀಲ್ ರವರು, ಕರ್ನಾಟಕ ಸರ್ಕಾರದ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಸಚಿವರಾದ ಸನ್ಮಾನ್ಯ ಶ್ರೀ ಕೆ.ಸಿ. ನಾರಾಯಣಗೌಡ ರವರು, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಕೃಷ್ಣ ಬೈರೇಗೌಡ ರವರು, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ವ್ಯವಸ್ಥಾಪನ ಮಂಡಳಿ ಸದಸ್ಯರಾದ ಡಾ. ಪಿ.ಹೆಚ್. ರಾಮಾಂಜಿನಿ ಗೌಡ, ಶ್ರೀ ಟಿ.ಎಂ. ಅರವಿಂದ್, ಶ್ರೀ ಓ.ಎಸ್. ದಯಾನಂದ, ಶ್ರೀ ಸುರೇಶ್ ಮಾರ್ಗದ್, ಶ್ರೀ ಆರ್. ಶ್ರೀರಾಮರವರಿಗೆ, ರೈತ ಬಾಂಧವರಿಗೆ, ಮಹಿಳೆಯರಿಗೆ, ಮಾಧ್ಯಮ ಮಿತ್ರರಿಗೆ ಮತ್ತು ನೆರೆದಿದ್ದ ಸಾರ್ವಜನಿಕರಿಗೆಲ್ಲಾ ಸ್ವಾಗತ ಕೋರಿದರು.

